ಕಾದಂಬರಿಗಳಲ್ಲದೆ ಸಾಹಿತ್ಯ ಮೀಮಾಂಸೆಗೆ ಸಂಬಂಧಿಸಿದ "ಸತ್ಯ ಮತ್ತು ಸೌಂದರ್ಯ"(೧೯೬೦, "ಸಾಹಿತ್ಯ ಮತ್ತು ಪ್ರತೀಕ"(೧೯೬೭), "ಕಥೆ ಮತ್ತು ಕಥಾವಸ್ತು"(೧೯೬೯), "ನಾನೇಕೆ ಬರೆಯುತ್ತೇನೆ"(೧೯೮೦) ಎಂಬ ನಾಲ್ಕು ಕೃತಿಗಳನ್ನು ಭೈರಪ್ಪನವರು ರಚಿಸಿದ್ದಾರೆ. ಅಲ್ಲದೆ ವಿವಿಧ ವಿಷಯಗಳನ್ನು ಕುರಿತಂತೆ ಇಂಗ್ಲಿಷ್‌ನಲ್ಲಿ ಇಪ್ಪತ್ತಕ್ಕೂ ಹೆಚ್ಚು ಲೇಖನಗಳನ್ನು ಬರೆದಿದ್ದಾರೆ. ಭಾರತೀಯ ಮನಶ್ಶಾಸ್ತ್ರ ಹಾಗೂ ತತ್ವಶಾಸ್ತ್ರಗಳನ್ನು ಆಳವಾಗಿ ಓದಿಕೊಂಡಿರುವ ಅವರಿಗೆ ಭಾರತೀಯ ಸಂಸ್ಕೃತಿಯ ಬಗ್ಗೆ ತೀವ್ರ ಕಾಳಜಿ ಇದೆ. ಹಿಂದೂಸ್ತಾನಿ ಸಂಗೀತದಲ್ಲಿ ಆಸಕ್ತಿ ಇರುವ ಶ್ರೀಯುತರು ಸಂಗೀತವನ್ನು ತಮ್ಮ ಬರಹದ ಜೀವಧ್ವನಿಯಾಗಿ ಗ್ರಹಿಸಿದ್ದಾರೆ.

ಡಾ.ಎಸ್.ಎಲ್.ಭೈರಪ್ಪ ಅವರಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ–(ವಂಶವೃಕ್ಷ ೧೯೬೬), ರಾಜ್ಯ ಹಾಗೂ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ (ದಾಟು ಕಾದಂಬರಿಗೆ, ೧೯೭೪, ೧೯೭೫), ಪಂಪ ಪ್ರಶಸ್ತಿ-(೨೦೦೫), ಎನ್.ಟಿ.ಆರ್. ರಾಷ್ಟ್ರೀಯ ಸಾಕ್ಷರತಾ ಪ್ರಶಸ್ತಿ–(೨೦೦೭), ಗುಲಬರ್ಗಾ ವಿಶ್ವವಿದ್ಯಾನಿಲಯದ ಗೌರವ ಡಾಕ್ಟರೇಟ್ (೨೦೦೭), ಭಾರತದ ಪ್ರತಿಷ್ಠಿತ ಸರಸ್ವತಿ ಸಮ್ಮಾನ್ ಪ್ರಶಸ್ತಿ (ಮಂದ್ರ ಕಾದಂಬರಿಗೆ–೨೦೧೧) ಮುಂತಾದ ಗೌರವಗಳಲ್ಲದೆ ೧೯೯೯ರಲ್ಲಿ ಕನಕಪುರದಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷತೆಯ ಗೌರವ ಪಡೆದಿದ್ದಾರೆ.

ತಮ್ಮ ಸೃಜನಶೀಲ ಪ್ರತಿಭೆಯಿಂದಾಗಿ ಕನ್ನಡ ಹಾಗೂ ಕನ್ನಡೇತರ ಭಾಷೆಗಳಲ್ಲಿ ಭಾರತದ ಬಹುದೊಡ್ಡ ಜನಪ್ರಿಯ ಕಾದಂಬರಿಕಾರರಾಗಿ ಹೆಸರು ಮಾಡಿದ ಡಾ.ಎಸ್.ಎಲ್.ಭೈರಪ್ಪನವರಿಗೆ ಕನ್ನಡ ವಿಶ್ವವಿದ್ಯಾಲಯವು ೨೦೧೧ನೇ ಸಾಲಿನ ತನ್ನ ಪ್ರತಿಷ್ಠಿತ ನಾಡೋಜ ಪದವಿಯನ್ನು ನೀಡಿ ಗೌರವಿಸುತ್ತಿದೆ.

೨. ಡಾ.ಕೆ.ಜಿ. ನಾಗರಾಜಪ್ಪ ಅವರು

ಪ್ರೊ.ಕೆ.ಜಿ.ನಾಗರಾಜಪ್ಪನವರು ತುಮಕೂರು ಜಿಲ್ಲೆಯ ಗುಬ್ಬಿ ತಾಲೂಕಿನ ಕಲ್ಲೂರು ಗ್ರಾಮದಲ್ಲಿ ೧೯೩೪ ಜನವರಿ ೦೯ರಂದು ಹುಟ್ಟಿದರು. ಕಲ್ಲೂರಿನಲ್ಲಿಯೇ ಪ್ರಾಥಮಿಕ ಹಾಗೂ ಮಾಧ್ಯಮಿಕ ಶಿಕ್ಷಣವನ್ನು (೧೯೪೪–೧೯೪೮) ಮುಗಿಸಿದರು. ಕಡಬದಲ್ಲಿ ಎಸ್.ಎಸ್.ಎಲ್.ಸಿ ಹಾಗೂ ಡಿ.ಬಿ.ಎಚ್.ಎಸ್(೧೯೫೩) ತುಮಕೂರಿನ ಸರಕಾರಿ ಕಾಲೇಜಿನಲ್ಲಿ ಇಂಟರ್‌ಮೀಡಿಯಟ್(೧೯೫೫) ಮೈಸೂರಿನ ಮಹಾರಾಜಾ ಕಾಲೇಜಿನಲ್ಲಿ ಬಿ.ಎ ಆನರ್ಸ್(೧೯೫೯) ಹಾಗೂ ಎಂ.ಎ.ಪದವಿಗಳನ್ನು(೧೯೬೦) ಪೂರೈಸಿದರು.

೧೯೬೦ರಿಂದ ೧೯೯೨ರ ವರೆಗೆ ಕೃಷ್ಣರಾಜಸಾಗರ, ಮೈಸೂರು, ತುಮಕೂರುಗಳಲ್ಲಿ ಸಹಪ್ರಾಧ್ಯಾಪಕರಾಗಿ, ಅಧ್ಯಾಪಕರಾಗಿ, ರೀಡರ್ ಆಗಿ, ಪ್ರೊ.ಫೆಸರ್ ಆಗಿ ಸುದೀರ್ಘ ಸೇವೆ ಸಲ್ಲಿಸಿದ್ದಾರೆ. ೧೯೯೨ ಜನವರಿ ೩೧ರಂದು ತುಮಕೂರಿನ ಸಿದ್ಧಗಂಗಾ ಕಾಲೇಜಿನಲ್ಲಿ ನಿವೃತ್ತಿ ಹೊಂದಿದರು. ಇವರು ತಮ್ಮ ಅಧ್ಯಾಪಕ ವೃತ್ತಿಯ ಹೆಚ್ಚಿನ ಸೇವೆಯನ್ನು ಸಿದ್ಧಗಂಗಾ ಮಠದ ಕಾಲೇಜುಗಳಲ್ಲಿ ಸಲ್ಲಿಸಿದ್ದು ವಿಶೇಷ. ನಿವೃತ್ತಿಯ ನಂತರವು ಶ್ರೀಯುತರು ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಕೇಂದ್ರದಲ್ಲಿ ಅತಿಥಿ ಪ್ರಾಧ್ಯಾಪಕರಾಗಿ(೧೯೯೩) ಚನ್ನಪಟ್ಟಣದ ಶ್ರೀ ಕುವೆಂಪು ಸ್ನಾತಕೋತ್ತರ ಪದವಿ ಕೇಂದ್ರದ ನಿರ್ದೇಶಕರಾಗಿ(೧೯೯೪–೧೯೯೮) ತಮ್ಮ ಅಮೂಲ್ಯ ಸೇವೆ ಸಲ್ಲಿಸಿದ್ದಾರೆ.

ಪ್ರೊ.ಕೆ.ಜಿ.ನಾಗರಾಜಪ್ಪನವರು ಅಧ್ಯಾಪಕ ವೃತ್ತಿಯ ಜೊತೆಗೆ ವಿದ್ವತ್ಪೂರ್ಣ ಗ್ರಂಥಗಳನ್ನು ರಚಿಸಿ ಕನ್ನಡ ಭಾಷೆ ಹಾಗೂ ಸಾಹಿತ್ಯವನ್ನು ಕಸಿಗೊಳಿಸಿದ್ದಾರೆ. ಇವರೊಬ್ಬ ಸೃಜನಶೀಲ ಬರಹಗಾರರೂ ಆಗಿದ್ದಾರೆ. ದೊಡ್ಡ ಸಂಕಣ್ಣನಾಯಕ ಎನ್ನುವ ಐತಿಹಾಸಿಕ ಕಾದಂಬರಿಯನ್ನು(೧೯೬೨), ದೇವಾಂಗ ಸಂಸ್ಕೃತಿ ಒಂದು ಅಧ್ಯಯನ(೧೯೮೩) ಎನ್ನುವ ಸಂಶೋಧನ ಕೃತಿಯನ್ನು, ಮರುಚಿಂತನೆ(೧೯೮೫) ಇಕ್ಕಟ್ಟು–ಬಿಕ್ಕಟ್ಟು(೧೯೯೮) ಎನ್ನುವ ವಿಮರ್ಶಾ ಕೃತಿಗಳನ್ನು ರಚಿಸಿದ್ದಾರೆ. ಅಲ್ಲದೆ ಭಕ್ತಿಸಾಹಿತ್ಯದಲ್ಲಿ ಪ್ರತಿಭಟನೆಯ ವಿಧಾನಗಳು(೧೯೮೯) ಮಧ್ಯಕಾಲೀನ ಕನ್ನಡ ಸಾಹಿತ್ಯದಲ್ಲಿ ಹಿಂಸೆಯ ಅಭಿವ್ಯಕ್ತಿಯ ಸ್ವರೂಪ ಮುಂತಾದ ಸತ್ವಪೂರ್ಣ ಕೃತಿಗಳನ್ನು ಪ್ರಕಟಿಸಿದ್ದಾರೆ.

ಇವರ ಪ್ರಮುಖ ಸಂಪಾದಿತ ಕೃತಿಗಳೆಂದರೆ ಶಿವಕುಮಾರವಾಣಿ(೧೯೬೩) ವೀರಕುಮಾರ ಸಂಗ್ರಾಮ(೧೯೭೨) ಸಾಹಿತ್ಯ ಮತ್ತು ಸಾಮಾಜಿಕ ನಿಲುವುಗಳು(೧೯೯೮) ಅಲ್ಲದೆ, ಮಧ್ಯಕಾಲೀನ ಕನ್ನಡ ಕವಿತೆ–೨(೧೯೮೦) ಎನ್ನುವ ಕೃತಿಯನ್ನು

ಇತರರೊಂದಿಗೆ ಸಂಪಾದಿಸಿದ್ದಾರೆ.

ಇವರು ತಮ್ಮ ವಿದ್ವತ್ಪೂರ್ಣ ಸಾಹಿತ್ಯಕ ಕೆಲಸಗಳಿಗಾಗಿ ಅನೇಕ ಪ್ರಶಸ್ತಿ ಪುರಸ್ಕಾರ ಗಳನ್ನು ಪಡೆದಿದ್ದಾರೆ. ಇವುಗಳಲ್ಲಿ ಕರ್ನಾಟಕ ರಾಜ್ಯಪ್ರಶಸ್ತಿ(೧೯೬೨) ಕರ್ನಾಟಕ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ(೧೯೮೫)ಗಳು ಪ್ರಮುಖವಾದಂಥವು. ಇದೂ ಅಲ್ಲದೆ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಸದಸ್ಯರಾಗಿ(೧೯೮೯) ಗುಬ್ಬಿ ತಾಲ್ಲೂಕಿನ ಪ್ರಥಮ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆಯ ಗೌರವ ಪಡೆದಿದ್ದಾರೆ.

ಕನ್ನಡ ಸಾರಸ್ವತ ಲೋಕಕ್ಕೆ ತಮ್ಮದೇ ಆದ ಅನುಪಮ ಸೇವೆ ಸಲ್ಲಿಸಿದ ಹಿರಿಯ ವಿದ್ವಾಂಸರಾದ ಪ್ರೊ.ಕೆ.ಜಿ.ನಾಗರಾಜಪ್ಪ ಅವರಿಗೆ ಕನ್ನಡ ವಿಶ್ವವಿದ್ಯಾಲಯ ೨೦೧೧ನೇ ಸಾಲಿನ ತನ್ನ ಪ್ರತಿಷ್ಠಿತ ನಾಡೋಜ ಪದವಿಯನ್ನು ನೀಡಿ ಗೌರವಿಸುತ್ತಿದೆ.

೩. ಶ್ರೀಮತಿ ಎಲ್ಲವ್ವ ದುರುಗಪ್ಪ ರೊಡ್ಡಪ್ಪನವರ ಅವರು

ಶ್ರೀಮತಿ ಎಲ್ಲವ್ವ ದುರಗಪ್ಪ ರೊಡ್ಡಪ್ಪನವರ ಇವರು ಬಾಗಲಕೋಟ ಜಿಲ್ಲೆಯ ಲೋಕಾಪುರದ ಠಾಣಿಕೇರಿಯಲ್ಲಿ ೧೯೪೨ರಲ್ಲಿ ಹುಟ್ಟಿದರು. ತಂದೆ ದುರ್ಗಪ್ಪ ತಾಯಿ ದುರ್ಗವ್ವ ಇಬ್ಬರೂ ಜಾನಪದ ಹಾಡುಗಾರರು. ಒಟ್ಟು ೭ ಜನ ಮಕ್ಕಳಲ್ಲಿ ಎಲ್ಲವ್ವ ಎರಡನೆಯ ಮಗಳು. ಎಲ್ಲವ್ವ ಅವರಿಗೂ ಮೂರು ಜನ ಮಕ್ಕಳು ಹಾಗೂ ಒಂಭತ್ತು ಮೊಮ್ಮಕ್ಕಳು. ಕಿರಿಯ ಮಗಳು ಪಾರ್ವತಿಯೂ ಪಾರಿಜಾತ ಕಲಾವಿದೆ.

ಬಡತನದಲ್ಲಿ ಬೆಳೆದ ಎಲ್ಲವ್ವ ತನ್ನ ೧೨ನೇ ವಯಸ್ಸಿನಲ್ಲಿ ಒತ್ತಾಯ ಪೂರ್ವಕವಾಗಿ ದೇವದಾಸಿ ದೀಕ್ಷೆ ಸ್ವೀಕಾರ ಮಾಡಬೇಕಾಯಿತು. ಸೂಕ್ಷ್ಮ ಸಂವೇದನಾಶೀಲರಾದ ಅವರು ಅಲ್ಪಾವಧಿಯಲ್ಲಿಯೇ ದೇವದಾಸಿ ಸಂಪ್ರದಾಯಕ್ಕೆ ಬೇಸತ್ತು ಅದರ ವಿರುದ್ಧವೇ ಸಿಡಿದು ನಿಂತರು. ತನ್ನ ಕೇರಿಯ ಹೆಣ್ಣುಮಕ್ಕಳಲ್ಲಿ ಜಾಗೃತಿ ಮೂಡಿಸಿದರು.

೪ನೇ ತರಗತಿಯವರೆಗೆ ಓದಿದ ಎಲ್ಲವ್ವನವರು ಎಳೆವೆಯಲ್ಲಿಯೇ ಕಲಾಸೇವೆಯ ಅಭಿರುಚಿ ಹೊಂದಿದವರಾಗಿದ್ದರು. ಹೀಗಾಗಿ ರಂಗಭೂಮಿ ಸೇವೆಯನ್ನೇ ಮುಂದೆ ತಮ್ಮ ಉಪಜೀವನದ ಹಾದಿಯಾಗಿಸಿಕೊಂಡರು. ಆಗಿನ ಖ್ಯಾತ ಕಲಾವಿದರಾಗಿದ್ದ ಹನುಮಂತಭಟ್ಟ ಕಟಗೇರಿ ಹಾಗೂ ಮಳೆಪ್ಪ ಮಾಸ್ತರ ಸೋನಾರ ಇವರಲ್ಲಿ ರಂಗ ತರಬೇತಿ ಪಡೆದರು. ದಿ.ಕಂದಗಲ್ ಹಣಮಂತರಾಯರ ಶ್ರೇಷ್ಠ ಕೃತಿಯಾದ ಕುರುಕ್ಷೇತ್ರ ನಾಟಕದಲ್ಲಿ ಮೊದಲ ಬಾರಿಗೆ 'ಕೃಷ್ಣನಪಾತ್ರ' ಮಾಡಿ ಎಲ್ಲರಿಂದಲೂ 'ಸೈ' ಅನಿಸಿಕೊಂಡರು. ಕುರುಕ್ಷೇತ್ರ ನಾಟಕದ ಈ ಅಮೋಘ ಅಭಿನಯ ಎಲ್ಲವ್ವ ಅವರು ತಮ್ಮ ೧೬ನೇ ವಯಸ್ಸಿನಲ್ಲಿಯೇ, ಲೋಕಾಪುರದ ಶ್ರೀ ಕೃಷ್ಣಾಜಿ ದೇಶಪಾಂಡೆಯವರ ಪಾರಿಜಾತ ಕಂಪೆನಿಯಲ್ಲಿ ಪ್ರವೇಶ ಪಡೆಯಲು ದಾರಿಯಾಯಿತು. ಈ ಕಂಪೆನಿಯಲ್ಲಿ ಪ್ರಖ್ಯಾತ ಕಲಾವಿದರಾಗಿದ್ದ ಲೋಕಯ್ಯ ಹೊಳಬಸಯ್ಯ ಗಣಾಚಾರಿ ಅವರು ಎಲ್ಲವ್ವನಿಗೆ ಪಾರಿಜಾತದ ಸಂಗೀತ ಹಾಗೂ ಅಭಿನಯವನ್ನು ಕಲಿಸಿಕೊಟ್ಟರು. ಮುಂದೆ ಕೃಷ್ಣಾಜಿ ದೇಶಪಾಂಡೆಯವರು ಎಲ್ಲವ್ವನ ಕಲಾ ಪ್ರತಿಭೆಯನ್ನು ಪೋಷಿಸಿ ಬೆಳೆಸಿದರು.

ಕೃಷ್ಣ, ರುಕ್ಮಿಣಿ, ಗೊಲ್ಲತಿ, ನಾರದ, ದೊರೆಸಾನಿ, ಸತ್ಯಭಾಮೆ, ಹೀಗೆ ಪಾರಿಜಾತದ ಎಲ್ಲ ಪಾತ್ರಗಳನ್ನೂ ಅದ್ಭುತವಾಗಿ ಅಭಿನಯಿಸುವ ಬಹುಮುಖ ಪ್ರತಿಭೆ ಅವರದು. ಇಷ್ಟೆ ಅಲ್ಲ ಪ್ರಸಂಗ ಬಂದರೆ ಹಿಮ್ಮೇಳ ಕೆಲಸಕ್ಕೂ ಹಿಂದೆ ಸರಿದವರಲ್ಲ.

ಎಲ್ಲವ್ವ ಅವರ ಅಭಿನಯದ ಕೊರವಂಜಿ ಭಾಗವಂತೂ ಉತ್ತರ ಕರ್ನಾಟಕದಲ್ಲಿ ಪ್ರಸಿದ್ಧ. 'ತೂಗಿರೆ ರಂಗನ, ತೂಗಿರೆ ಕೃಷ್ಣನ, ತೂಗಿರೆ ಅಚ್ಚ್ಯುತಾನಂದನ' ಎಂದು ಕಂಕುಳಲ್ಲಿ ಕೂಸೆತ್ತಿಕೊಂಡು ಬೆಳಗಿನ ೩ ಗಂಟೆಗೆ ರಂಗ ಪ್ರವೇಶ ಮಾಡಿದರೆ ಸಾಕು, ಪ್ರೇಕ್ಷಕರಲ್ಲಿ ಸಂಚಲನೆ ಸುರುವಾಗುತ್ತದೆ. ಬೆಳಗು ಹರಿಯುವ ತನಕ ಕೊರವಂಜಿ ಪಾತ್ರವನ್ನು ಅವರು ನಿರ್ವಹಿಸುವ ರೀತಿ ಅನುಪಮವಾದದ್ದು. ಅವರ ಅಗಾಧ ನೆನಪಿನ ಶಕ್ತಿ, ಸಮಯಪ್ರಜ್ಞೆ, ಹಾಡಿನಲ್ಲಿ ಹೊಮ್ಮುವ ನಾದ–ಲಯ ವಿನ್ಯಾಸಗಳು ಪಾತ್ರದಲ್ಲಿನ ತಾದಾತ್ಮತೆ ಕೊರವಂಜಿಯಂಥ ಜಠಿಲ ಪಾತ್ರವನ್ನು ಜನಪ್ರಿಯಗೊಳಿಸಿತು. ಬರೀ ಕೊರವಂಜಿ ಭಾಗವನ್ನೇ ಮೂರು ರಾತ್ರಿ ಆಡಿದ ದಾಖಲೆ ಇವರದಾಗಿದೆ.

೪೮ ವರ್ಷದ ಸುದೀರ್ಘ ಕಲಾ ಪಯಣದ ಏರು ಇಳುವಿನಲ್ಲಿ ರಾಜ್ಯ ಹಾಗೂ ಹೊರರಾಜ್ಯದಲ್ಲಿ ಎಂಟು ಸಾವಿರಕ್ಕೂ ಹೆಚ್ಚು ಪಾರಿಜಾತದ ಪ್ರಯೋಗಗಳನ್ನು ನೀಡಿದ್ದಾರೆ. ಪ್ರಯೋಗಶೀಲತೆ, ಸುಶ್ರಾವ್ಯ ಹಾಡುಗಾರಿಕೆ, ಅಸ್ಖಲಿತ ಸಂಭಾಷಣೆ, ಔಚಿತ್ಯಪೂರ್ಣ ಅಭಿನಯ, ತಿಳಿಹಾಸ್ಯ, ದಣಿವರಿಯದ ನಟನಾ ಸಾಮರ್ಥ್ಯದಿಂದಾಗಿ ಎಲ್ಲವ್ವ ಕಲಾವಿದೆಯಾಗಿ ಬೆಳೆದರು. ಬೇಕಾದ ಪಾತ್ರ ಕೊಟ್ಟರೂ ಆ ಪಾತ್ರಕ್ಕೆ ತಕ್ಕಂತೆ ರೂಪಧಾರಣೆ ಮಾಡುವುದು ಇವರ ಅಪ್ರತಿಮ ಕಲಾಪ್ರತಿಭೆಗೆ ಸಾಕ್ಷಿಯಾಗಿದೆ.

ಕೃಷ್ಣನ ಪಾತ್ರ ನಿರ್ವಹಣೆ ಅವರ ಬದುಕಿನ ಸಾರ್ಥಕ ಕ್ಷಣವಾಗಿದೆ. ಗಲಗಲಿ ಗ್ರಾಮದಲ್ಲಿ ಶ್ರೀಕೃಷ್ಣ ಪಾರಿಜಾತದ ಕೃಷ್ಣನ ಪಾತ್ರ ಮಾಡುತ್ತಿರುವಾಗ ಕೃಷ್ಣನೆ ಭೂಮಿಗಿಳಿದು ಬಂದನೆಂದು ಭಾವಿಸಿ ಹೆಣ್ಣುಮಗಳೊಬ್ಬಳು ರಂಗದ ಮೇಲೆ ಬಂದು ಕೃಷ್ಣ ಪಾತ್ರಧಾರಿಯಾಗಿದ್ದ ಎಲ್ಲವ್ವನ ಪಾದಪೂಜೆ ಮಾಡಿದ್ದನ್ನು ಎಲ್ಲವ್ವ ಇಂದಿಗೂ ಭಾವುಕರಾಗಿ ನೆನೆಸಿಕೊಳ್ಳುತ್ತಾರೆ. ಪಾರಿಜಾತ ಬೆಳೆಯಬೇಕು ಎನ್ನುವ ಹಂಬಲವಿರುವ ಎಲ್ಲವ್ವನವರು ಕೃಷ್ಣಾಜಿ ದೇಶಪಾಂಡೆಯವರ ಕಂಪನಿಯನ್ನು ತಾವೇ ಮುನ್ನಡೆಸುತ್ತಿದ್ದಾರೆ. ಹೊಸ ಪೀಳಿಗೆಯವರಿಗೆ ತಮ್ಮ ಮನೆಯಲ್ಲಿ ತರಬೇತಿ ನೀಡುತ್ತಿದ್ದಾರೆ. ಹಲವಾರು ರಾಜ್ಯ ಮಟ್ಟದ ಪ್ರಶಸ್ತಿ ಪುರಸ್ಕಾರಗಳ ಗೌರವಕ್ಕೆ ಇವರು ಪಾತ್ರರಾಗಿದ್ದಾರೆ. ಬಹಳಷ್ಟು ಸಾಂಸ್ಕೃತಿಕ ಸಂಘಟನೆಗಳು ಇವರ ಕಲಾ ಶ್ರೀಮಂತಿಕೆಯನ್ನು ಪ್ರಶಂಸಿಸಿ ಗೌರವಿಸಿವೆ.

ಲಿಂಗ, ಜಾತಿಯಂಥ ಜೈವಿಕ ಹಾಗೂ ಸಾಮಾಜಿಕ ಅಪಮಾನಗಳನ್ನು ತನ್ನ ಪ್ರೌಢ ಕಲಾಭಿಜ್ಞತೆಯ ಮೂಲಕ ಮೀರಿ ನಿಂತು, ಕಲೆಗೆ ಜಾತಿ, ಕುಲ ಹಾಗೂ ಲಿಂಗದ ಹಂಗಿಲ್ಲ ಎನ್ನುವುದನ್ನು ಸಾಧಿಸಿ ತೋರಿಸಿದ ಮೇರು ಪ್ರತಿಭೆ ಶ್ರೀಮತಿ ಎಲ್ಲವ್ವ ದುರಗಪ್ಪ ರೊಡ್ಡಪ್ಪನವರ ಅವರಿಗೆ ಕನ್ನಡ ವಿಶ್ವವಿದ್ಯಾಲಯವು ತನ್ನ ೨೦೧೧ನೇ ಸಾಲಿನ ಪ್ರತಿಷ್ಠಿತ ನಾಡೋಜ ಪದವಿಯನ್ನು ನೀಡಿ ಗೌರವಿಸುತ್ತಿದೆ.

೪. ಡಾ. ವಿ.ಎಸ್. ಮಳೀಮಠ ಅವರು

ನ್ಯಾಯಮೂರ್ತಿ ಡಾ.ವಿ.ಎಸ್.ಮಳೀಮಠ ಅವರು ಜೂನ್ ೧೨, ೧೯೨೯ರಂದು ಹುಬ್ಬಳ್ಳಿಯಲ್ಲಿ ಜನಿಸಿದರು. ತಂದೆ, ನ್ಯಾಯಮೂರ್ತಿ ಶ್ರೀ ಎಸ್.ಎಸ್.ಮಳೀಮಠ ಅವರು ಮೈಸೂರು ಪ್ರಾಂತ್ಯದ ಹೈಕೋರ್ಟಿನಲ್ಲಿ ಮುಖ್ಯ ನ್ಯಾಯಮೂರ್ತಿ ಗಳಾಗಿದ್ದರು. ಹೀಗಾಗಿ ವಿ.ಎಸ್. ಮಳೀಮಠ ಅವರಿಗೆ 'ಕಾನೂನು ಕ್ಷೇತ್ರ' ತಂದೆಯಿಂದ ಬಳುವಳಿಯಾಗಿ ಬಂದಿತು. ಮಳೀಮಠ ಅವರು ಪ್ರತಿಭಾವಂತ ವಿದ್ಯಾರ್ಥಿಯಾಗಿದ್ದರು. ಎಲ್.ಎಲ್.ಬಿ. ಪದವಿ ಯನ್ನು ಹಾಗೂ ಲಂಡನ್ ವಿಶ್ವವಿದ್ಯಾಲಯದಿಂದ ಸ್ನಾತಕೋತ್ತರ ಕಾನೂನು ಡಿಪ್ಲೊಮಾ ಪದವಿಗಳನ್ನು ಪ್ರಥಮ ಶ್ರೇಣಿಯಲ್ಲಿ ತೇರ್ಗಡೆಯಾದರು.

ಮಳೀಮಠ ಅವರು ೩೯ನೇ ವಯಸ್ಸಿನಲ್ಲಿಯೇ ಕರ್ನಾಟಕದ ಅಡ್ವೋಕೇಟ್ ಜನರಲ್ ಆಗಿ ನಿಯುಕ್ತರಾದರು. ೧೯೭೦ರಲ್ಲಿ ಕರ್ನಾಟಕ ಹೈಕೋರ್ಟಿನ ನ್ಯಾಯಮೂರ್ತಿಯಾಗಿ, ೧೯೮೩–೮೫ರಲ್ಲಿ ಕರ್ನಾಟಕ ಹಾಗೂ ೧೯೮೫–೧೯೯೧ರಲ್ಲಿ ಕೇರಳ ರಾಜ್ಯ ಹೈಕೋರ್ಟ್‌ಗಳ ಮುಖ್ಯ ನ್ಯಾಯಮೂರ್ತಿಗಳಾಗಿ ಸೇವೆ ಸಲ್ಲಿಸಿದರು ೧೯೯೪ರಲ್ಲಿ 'ರಾಷ್ಟ್ರೀಯ ನ್ಯಾಯ ಮಂಡಳಿ'ಯ ಅಧ್ಯಕ್ಷರಾಗಿ ೧೯೯೪ ರಿಂದ ೧೯೯೯ರ ವರೆಗೆ 'ಮಾನವ ಹಕ್ಕುಗಳ ಆಯೋಗ'ದ ಸದಸ್ಯರಾಗಿ, ಶಾಂತಿನಿಕೇತನದ ವಿಶ್ವಭಾರತಿ ವಿಶ್ವವಿದ್ಯಾಲಯದಲ್ಲಿ ಗೌರವ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿದರು. ೨೦೦೩ರಲ್ಲಿ 'ಕರ್ನಾಟಕ–ಮಹಾರಾಷ್ಟ್ರ ಕಾನೂನು ಸಲಹಾ ಸಮಿತಿ'ಯ ಅಧ್ಯಕ್ಷರಾಗಿ ನಿಯುಕ್ತರಾದರು. ಆ ಸಂದರ್ಭದಲ್ಲಿ ಕರ್ನಾಟಕದ ಪರವಾದ ನಿಲುವುಗಳನ್ನು ತೆಗೆದುಕೊಂಡದ್ದು ದಾಖಲಾರ್ಹ ಸಂಗತಿಯಾಗಿದೆ. ಸದ್ಯಕ್ಕೆ ಮಳೀಮಠರು 'ಕರ್ನಾಟಕ ಕಾನೂನು ಆಯೋಗ'ದ ಅಧ್ಯಕ್ಷರಾಗಿ ಹಾಗೂ 'ದಕ್ಷಿಣ ಭಾರತದ ಹಿಂದಿ ಪ್ರಚಾರ ಸಭಾ'ದ ಅಧ್ಯಕ್ಷರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

೧೯೮೯–೯೦ರಲ್ಲಿ ಭಾರತ ಸರಕಾರವು ಮಳೀಮಠರ ಅಧ್ಯಕ್ಷತೆಯಲ್ಲಿ 'ಬಾಕಿ ಉಳಿದಿರುವ ಕಕ್ಷಿದಾರರ ನ್ಯಾಯ ತೀರ್ಮಾನ ಸಮಿತಿ' ರಚಿಸಿತು. ಆ ಸಮಸ್ಯೆಯ ನಿವಾರಣೆಗೆ ಮಳೀಮಠರು ಹಲವಾರು ಉಪಯುಕ್ತ ಶಿಫಾರಸ್ಸುಗಳನ್ನು ನೀಡಿದರು. ೨೦೦೦–೨೦೦೩ರಲ್ಲಿ ಭಾರತ ಸರಕಾರವು ಮಳೀಮಠರನ್ನು 'ಅಪರಾಧ ನ್ಯಾಯ ವ್ಯವಸ್ಥೆಯ ಸುಧಾರಣಾ ಆಯೋಗ'ದ ಅಧ್ಯಕ್ಷರನ್ನಾಗಿ ನೇಮಿಸಿತು. ಅದಕ್ಕೆ ಸಂಬಂಧಪಟ್ಟಂತೆ ಮಳೀಮಠರು ೧೫೮ ಶಿಫಾರಸ್ಸುಗಳನ್ನು ನೀಡಿದರು. ಅವು ತಜ್ಞರ ಗಮನ ಸೆಳೆದವು. ಶ್ರೀಯುತರು 'ಅಪರಾಧಿಗಳ ಪರೀಕ್ಷಣಾ ವರದಿಯ ಆಕ್ಟ್'ದಲ್ಲಿ ಹಲವಾರು ಸುಧಾರಣೆಗಳನ್ನು ತಂದರು. ಕರ್ನಾಟಕ ಮತ್ತು ಕೇರಳ ಹೈಕೋರ್ಟ್‌ಗಳ ಮುಖ್ಯನ್ಯಾಯಮೂರ್ತಿಗಳಾಗಿದ್ದಾಗ ನ್ಯಾಯಾಧೀಶರ ತರಬೇತಿಯ ಬಗ್ಗೆ ಹಾಗೂ ನ್ಯಾಯ ತೀರ್ಮಾನಗಳ ಬಗ್ಗೆ ಹಲವಾರು ಹೊಸ ಕಾನೂನು ಕ್ರಮಗಳನ್ನು ರೂಪಿಸಿದ್ದರು; ರಾಷ್ಟ್ರೀಯ ನ್ಯಾಯಮಂಡಳಿಯ ಅಧ್ಯಕ್ಷರಾಗಿದ್ದಾಗ ಸಮಾನತೆಯ ಹಕ್ಕು–ಕರ್ತವ್ಯಗಳನ್ನು ಜಾರಿಗೆ ತಂದದ್ದು ಉಲ್ಲೇಖಾರ್ಹವಾಗಿವೆ.

ಡಾ.ಮಳೀಮಠರು ಮಾನವ ಹಕ್ಕುಗಳ ಸೇವಾ ಸೌಲಭ್ಯಕ್ಕೆ ಸಂಬಂಧಪಟ್ಟಂತೆ ಹಲವಾರು ಮಹತ್ವದ ಉಪಕ್ರಮಗಳನ್ನು ಜಾರಿಗೆ ತಂದರು. ನೈಜೀರಿಯಾ, ಶ್ರೀಲಂಕಾ, ಮಲೇಶಿಯಾ, ಥೈಲ್ಯಾಂಡ್ ಮತ್ತು ನೇಪಾಳ ದೇಶಗಳಲ್ಲಿಯ ಮಾನವ ಹಕ್ಕು ಸಂಸ್ಥೆಗಳಿಗೆ ಭೇಟಿಕೊಟ್ಟು ಅಲ್ಲಿಯ ತಜ್ಞರೊಂದಿಗೆ ಚರ್ಚಿಸಿ ಆ ಕ್ಷೇತ್ರದ ಸುಧಾರಣೆಗಳನ್ನು ಭಾರತಕ್ಕೆ ಅನ್ವಯಿಸಿದರು. ಅವುಗಳಲ್ಲಿ ಮುಖ್ಯವಾಗಿ 'ಸರಕುಗಳ ಬೆಲೆ ಪಟ್ಟಿಗೆ ಸಂಬಂಧಿಸಿ ದಂತೆ ಏಕರೂಪ ಸೂತ್ರ ಜಾರಿಗೆ ತಂದದ್ದು, 'ಭಾರತದಲ್ಲಿ

ಮಾನಸಿಕ ಆರೋಗ್ಯ ಸುಧಾರಣೆ', 'ಅಪರಾಧ ನ್ಯಾಯವಾದದಲ್ಲಿ ಸುಧಾರಣೆ' ಯುಜಿಸಿಯಲ್ಲಿ 'ಮಾನವ ಹಕ್ಕುಗಳ ಕರ್ತವ್ಯ ಮತ್ತು ಶಿಕ್ಷಣ'ವನ್ನು ಕುರಿತು ಸ್ನಾತಕೋತ್ತರ ಕಾನೂನು ವಿಷಯದಲ್ಲಿ ಪಠ್ಯಕ್ರಮ ರೂಪಿಸಿದ್ದು ಇವರ ಬಹುಮುಖ್ಯ ಕೆಲಸಗಳಾಗಿವೆ.

೧೯೯೫ರಿಂದ ೧೯೯೯ರ ವರೆಗೆ ತ್ರಿವೇಂದ್ರಂ ಅಂತರ್‌ರಾಷ್ಟ್ರೀಯ ದ್ರಾವಿಡ ಭಾಷಾವಿಜ್ಞಾನ ಸಂಸ್ಥೆಯ ಅಧ್ಯಕ್ಷರಾಗಿ ಪ್ರತಿವರ್ಷ 'ದ್ರಾವಿಡ ಭಾಷಾವಿಜ್ಞಾನಿಗಳ ಸಮ್ಮೇಳನ' ನಡೆಸಿದುದು, 'ಅಂತರಾಷ್ಟ್ರೀಯ ದ್ರಾವಿಡ ಭಾಷಾವಿಜ್ಞಾನ' ಎಂಬ ಸಂಶೋಧನ ಪತ್ರಿಕೆಯನ್ನು ನಿಯಮಿತವಾಗಿ ತಂದಿರುವುದು ಇವೆಲ್ಲಕ್ಕೂ ಶಿಖರ ಪ್ರಾಯವಾಗಿ ಕುಪ್ಪಂದಲ್ಲಿ 'ದ್ರಾವಿಡ ವಿಶ್ವವಿದ್ಯಾಲಯ' ಸ್ಥಾಪನೆ ಮಾಡಿದ್ದು ಇವು ಡಾ.ಮಳೀಮಠರ ಮಹತ್ವದ ಶೈಕ್ಷಣಿಕ ಸಾಧನೆಗಳಾಗಿವೆ.

ಕರ್ನಾಟಕದ ನ್ಯಾಯಾಲಯಗಳಲ್ಲಿ ಕನ್ನಡ ಬಳಕೆಯನ್ನು ಜಾರಿಗೆ ತಂದವರಲ್ಲಿ ನ್ಯಾಯಮೂರ್ತಿ ಡಾ.ಮಳಿಮಠರೇ ಆದ್ಯರು, 'ಕರ್ನಾಟಕ ತೀರ್ಪುಗಳ ವರದಿ'ಯನ್ನು ರೂಪಿಸುವುದರ ಮೂಲಕ ನ್ಯಾಯಾಧೀಶರಿಗೆ, ವಕೀಲರಿಗೆ, ನಾಗರಿಕರಿಗೆ ಕಾನೂನಿನ ಬಗ್ಗೆ ನಂಬಿಕೆ ಉಂಟಾಗುವಂತೆ ಮಾಡಿದ್ದಾರೆ. ಇಷ್ಟೆ ಅಲ್ಲದೆ ಕನ್ನಡದಲ್ಲಿ ತೀರ್ಪುಕೊಟ್ಟ ನ್ಯಾಯಾಧೀಶರಿಗೆ ಸಾರ್ವಜನಿಕ ಗೌರವಗಳು ದೊರೆಯುವಂತೆ ಶ್ರಮಿಸಿದ್ದಾರೆ. ಅದರಂತೆ ಕರ್ನಾಟಕೇತರ ನ್ಯಾಯಮೂರ್ತಿಗಳು ಕನ್ನಡ ಕಲಿಯುವಂತೆ ಕರ್ನಾಟಕದ ಮುಖ್ಯ ನ್ಯಾಯಮೂರ್ತಿಗಳು ಕನ್ನಡದಲ್ಲಿಯೇ ಪ್ರಮಾಣ ವಚನ ಸ್ವೀಕರಿಸುವಂತೆ ವ್ಯವಸ್ಥೆ ಮಾಡಿದರು. ಶ್ರೀಯುತರ ಕನ್ನಡ ಪರ ಈ ಕಾಳಜಿ ಸ್ಮರಣೀಯವಾದದ್ದು.

ಡಾ.ಮಳೀಮಠರ ಸಾಧನೆಯನ್ನು ಗಮನಿಸಿ ಸರಕಾರ ಹಾಗೂ ಸಂಘ ಸಂಸ್ಥೆಗಳು ಅವರನ್ನು ಗೌರವಿಸಿವೆ. ಅವುಗಳಲ್ಲಿ ಬಹುಮುಖ್ಯವಾದವುಗಳೆಂದರೆ ಭಾರತ ಸರಕಾರದ 'ರಾಷ್ಟ್ರೀಯ ನಾಗರಿಕ ಪ್ರಶಸ್ತಿ', ಧಾರವಾಡ ಕರ್ನಾಟಕ ವಿಶ್ವವಿದ್ಯಾಲಯದ 'ಗೌರವ ಡಾಕ್ಟರೇಟ್', ಕರ್ನಾಟಕ ಸರಕಾರದ 'ರಾಜ್ಯೋತ್ಸವ ಪ್ರಶಸ್ತಿ', ಸಮಾಜ ಸೇವೆಗಾಗಿ 'ಬಸವಶ್ರೀ' ಪ್ರಶಸ್ತಿಗಳು ಲಭಿಸಿವೆ. ಇಂಥ ಕನ್ನಡದ ಕಟ್ಟಾಳು ನ್ಯಾಯಮೂರ್ತಿ ಡಾ.ವಿ.ಎಸ್.ಮಳೀಮಠ ಅವರಿಗೆ ಕನ್ನಡ ವಿಶ್ವವಿದ್ಯಾಲಯವು ೨೦೧೧ನೇ ಸಾಲಿನ ತನ್ನ ಪ್ರತಿಷ್ಠಿತ ನಾಡೋಜ ಗೌರವ ಪದವಿಯನ್ನು ನೀಡಿ ಗೌರವಿಸುತ್ತದೆ.

೫. ಡಾ. ಜಿ. ಶಂಕರ್ ಅವರು

ಡಾ.ಜಿ.ಶಂಕರ್ ಅವರು ೫ನೇ ಅಕ್ಟೋಬರ್ ೧೯೫೫ರಲ್ಲಿ ಉಡುಪಿ ಜಿಲ್ಲೆಯ ಸಾಸ್ತಾನದ ಹತ್ತಿರ ಇರುವ ಗುಂಡ್ಮಿ ಗ್ರಾಮದಲ್ಲಿ ಜನಿಸಿದರು. ತಂದೆ ಸೋಮ ಬಂಗೇರಾ ತಾಯಿ ಲಕ್ಷ್ಮೀ ಬಂಗೇರಾ. ಕೋಡಿ ಕನ್ಯಾನ ಮತ್ತು ಪಾರಂಪಳ್ಳಿ ಶಾಲೆಗಳಲ್ಲಿ ಪ್ರಾಥಮಿಕ ಶಿಕ್ಷಣ ಪಡೆದರು. ಮುಂದೆ ಕರ್ನಾಟಕ ವಿಶ್ವವಿದ್ಯಾಲಯದಿಂದ ಬಿ.ಕಾಂ.ಪದವಿ ಮುಗಿಸಿದರು.

೨೦೦೨ರಲ್ಲಿ ಉಡುಪಿಯಲ್ಲಿ 'ಜಿ.ಶಂಕರ್ ಫ್ಯಾಮಿಲಿ ಟ್ರಸ್ಟ್' ಸ್ಥಾಪಿಸಿ ಆ ಮೂಲಕ ಸಮಾಜ ಸೇವೆಯಲ್ಲಿ ತಮ್ಮನ್ನು ತೊಡಗಿಸಿಕೊಂಡವರು. ಸಮಾಜದ ಕೆಳಸ್ತರದ ಜನತೆಯ ಕಷ್ಟ ಕಾರ್ಪಣ್ಯಗಳಿಗೆ ಸ್ಪಂದಿಸಿ ಅವರ ಅಭಿವೃದ್ಧಿಗೆ ವಿಶೇಷ ನೆರವು ನೀಡುವುದು ಈ ಟ್ರಸ್ಟ್‌ನ ಪ್ರಧಾನ ಆಶಯವಾಗಿದೆ. ಟ್ರಸ್ಟ್‌ನ ಆಶ್ರಯದಲ್ಲಿ ತಮ್ಮ ಪರಿಸರದ ೨೦ ವಿವಿಧ ಆಸ್ಪತ್ರೆಗಳಿಗೆ ೧೫ ಡಯಾಲಿಸಿಸ್ ಯಂತ್ರಗಳನ್ನು ಉಚಿತವಾಗಿ ನೀಡಿ ಕಿಡ್ನಿ ರೋಗಿಗಳಿಗೆ ನೆರವಾಗಿದ್ದಾರೆ. ಕುಂದಾಪುರದಲ್ಲಿ ತಮ್ಮ ತಾಯಿಯ ಹೆಸರಿನಲ್ಲಿ ಸುಸಜ್ಜಿತವಾದ ಹೆರಿಗೆ ಆಸ್ಪತ್ರೆ ನಿರ್ಮಿಸಿದ್ದಾರೆ. ಮಣಿಪಾಲ ಆಸ್ಪತ್ರೆಯ ಸಹಯೋಗದೊಂದಿಗೆ ೭,೦೦೦ ಮಂದಿಗೆ ಉಚಿತ ಆರೋಗ್ಯ ಕಾರ್ಡ್ ವಿತರಿಸಿದ್ದಾರೆ. ೨೦೦೭ರಿಂದ ಉಚಿತ ಸಾಮೂಹಿಕ ವಿವಾಹ ನೆರವೇರಿಸುತ್ತಿದ್ದಾರೆ. ಪ್ರತಿ ವರ್ಷ ಆಯ್ದ ೧೫ ಕಲಾವಿದರನ್ನು ಹಾಗೂ ೧೦ ಮಂದಿ ಶ್ರೇಷ್ಠ ಶಿಕ್ಷಕರನ್ನು ಗುರುತಿಸಿ ಅವರಿಗೆ ಹತ್ತು ಸಾವಿರ ನಗದು ಬಹುಮಾನ ನೀಡಿ ಪ್ರೋತ್ಸಾಹಿಸಲಾಗುತ್ತಿದೆ.

ಉಚಿತ ಅಂಬುಲೆನ್ಸ್ ಕೊಡುಗೆ, ರೆಡ್‌ಕ್ರಾಸ್ ಸಂಸ್ಥೆಗೆ ಕೊಠಡಿ ನೆರವು, ಉಡುಪಿ ಕಾರ್ಯನಿರತ ಪತ್ರಕರ್ತರ ಸಂಘದ ಪತ್ರಿಕಾ ಭವನದ ಕಟ್ಟಡಕ್ಕೆ ನೆರವು, ಕಿದಿಯೂರಿನಲ್ಲಿ ಅತ್ಯಾಧುನಿಕ ಸೌಕರ್ಯ ಹೊಂದಿರುವ ಶಾಮಿಲಿ ಪದವಿ ಪೂರ್ವ ಕಾಲೇಜು ಹಾಗೂ ೨೦೦೫ರಲ್ಲಿ ಜಿಲ್ಲಾ ವಿದ್ಯಾನಿಕೇತನ ಶಿಕ್ಷಕರ ಶಿಕ್ಷಣ ಮಹಾವಿದ್ಯಾಲಯ (ಡಿ.ಎಡ್)ವನ್ನು ಸ್ಥಾಪಿಸುವ ಮೂಲಕ ಶಿಕ್ಷಕರಿಗೆ ನೆರವು ನೀಡಿದ್ದು ಈ ಟ್ರಸ್ಟ್‌ನ ಹೆಗ್ಗಳಿಕೆಯಾಗಿದೆ. ಕುಂದಾಪುರದ ಅಂಪಾರು ಎಂಬಲ್ಲಿ ವಾಗ್ಜ್ಯೋತಿ ಶಾಲೆ ಸ್ಥಾಪಿಸಿ ಕಿವುಡ ಮೂಗ ಬುದ್ಧಿಮಾಂದ್ಯ ಮಕ್ಕಳ ಬಾಳಿಗೆ ಬೆಳಕು ನೀಡಿದ್ದಾರೆ. ತಮ್ಮ ಪರಿಸರದ ಹಲವು ಶಾಲಾ ಕಾಲೇಜುಗಳಿಗೆ ಮೂಲಭೂತ ಸೌಕಾರ್ಯ ಹಾಗೂ ಪೀಠೋಪಕರಣಗಳನ್ನು ನೀಡಿರುವುದು ಇವರ ಶೈಕ್ಷಣಿಕ ಕಾಳಜಿಯ ಪ್ರತೀಕವಾಗಿದೆ. ೨೦೦೭–೦೮ನೇ ಸಾಲಿನಿಂದ ಮಂಗಳೂರು ವಿಶ್ವವಿದ್ಯಾಲಯ ವ್ಯಾಪ್ತಿಯಲ್ಲಿ ಪ್ರಥಮ ರ್‍ಯಾಂಕ್ ಪಡೆಯುವ ಎಂ.ಕಾಂ. ವಿದ್ಯಾರ್ಥಿಗಳಿಗೆ ತಾಯಿ ಹೆಸರಿನಲ್ಲಿ ಚಿನ್ನದ ಪದಕ ನೀಡಿಕೆ, ಹೀಗೆ ಶ್ರೀಯುತರ ಶೈಕ್ಷಣಿಕ ಸೇವೆಯ ಪಟ್ಟಿ ಬೆಳೆಯುತ್ತ

ಸಾಗುತ್ತದೆ.

ಜಿ.ಶಂಕರ್ ಅವರ ಸೇವೆಗೆ ಸರಕಾರ ಹಾಗೂ ಸಂಘ ಸಂಸ್ಥೆಗಳಿಂದ ಅನೇಕ ಪ್ರಶಸ್ತಿ ಪುರಸ್ಕಾರಗಳು ದೊರೆತಿವೆ. ಪ್ರಮುಖವಾಗಿ ೨೦೦೬ರಲ್ಲಿ ದಕ್ಷಿಣ ಕನ್ನಡ ಜಿಲ್ಲಾ ಮೊಗವೀರ ಅಸೋಸಿಯೇಶನ್ ವತಿಯಿಂದ 'ಮೊಗವೀರ ಕುಲರತ್ನ ಪ್ರಶಸ್ತಿ', ೨೦೦೭ರಲ್ಲಿ ಕರ್ನಾಟಕ ಸರ್ಕಾರ 'ರಾಜ್ಯೋತ್ಸವ ಪ್ರಶಸ್ತಿ', ಉಡುಪಿ ಜಿಲ್ಲಾ ಮೊಗವೀರ ಸಂಘಟನೆಯಿಂದ 'ಸಮಾಜ ರತ್ನ' ಪ್ರಶಸ್ತಿ, ೨೦೦೮ರಲ್ಲಿ ಮಂಗಳೂರು ವಿಶ್ವವಿದ್ಯಾಲಯ ಗೌರವ ಡಾಕ್ಟರೇಟ್ ಪದವಿ, ಮುಂಬಯಿ ಮೊಗವೀರ ಸಂಘದಿಂದ 'ಮೊಗವೀರ ಕುಲಭೂಷಣ' ಪ್ರಶಸ್ತಿ, ೨೦೦೯ರಲ್ಲಿ ಜೈಂಟ್ ಅಂತಾರಾಷ್ಟ್ರೀಯ ಪ್ರಶಸ್ತಿ, ೨೦೧೦ರಲ್ಲಿ ಕರ್ನಾಟಕ ರಾಜ್ಯ ಸರ್ಕಾರದಿಂದ ವಿಕಲಚೇತನ ಸೇವೆಗಾಗಿ ರಾಜ್ಯ ಪ್ರಶಸ್ತಿ, ೨೦೧೦ರಲ್ಲಿ ಭಾರತೀಯ ರೆಡ್‌ಕ್ರಾಸ್ ಸಂಸ್ಥೆಯ ಗೌರವಗಳು ಶ್ರೀಯುತರ ಅಮೂಲ್ಯ ಸೇವೆಗೆ ಸಂದ ಕೀರ್ತಿಗಳಾಗಿವೆ. ಅನೇಕ ಸೇವಾ ಸಂಸ್ಥೆಗಳಿಗೆ ಶ್ರೀಯುತರು ಅಧ್ಯಕ್ಷರು, ನಿರ್ದೇಶಕರು ಹಾಗೂ ಸಲಹೆಗಾರರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

ಸಮಾಜ ಸೇವೆಯಲ್ಲಿ ತಮ್ಮನ್ನು ಬಹುಮುಖಿಯಾಗಿ ತೊಡಗಿಸಿಕೊಂಡಿರುವ ಡಾ.ಜಿ.ಶಂಕರ್ ಅವರಿಗೆ ಕನ್ನಡ ವಿಶ್ವವಿದ್ಯಾಲಯವು ತನ್ನ ೨೦೧೧ನೇ ಸಾಲಿನ ಪ್ರತಿಷ್ಠಿತ ನಾಡೋಜ ಗೌರವ ಪದವಿಯನ್ನು ನೀಡಿ ಗೌರವಿಸುತ್ತಿದೆ.

೬. ಶ್ರೀ ಬಿ.ಕೆ.ಎಸ್.ಅಯ್ಯಂಗಾರ್ ಅವರು

ಪದ್ಮಭೂಷಣ, ಡಾ.ಬಿ.ಕೆ.ಎಸ್. ಅಯ್ಯಂಗಾರ ಅವರು ೧೯೧೮ ಡಿಸೆಂಬರ್ ೧೪ರಂದು ಕೋಲಾರ ಜಿಲ್ಲೆಯ ಬೆಳ್ಳೂರು ಗ್ರಾಮದಲ್ಲಿ ಜನಿಸಿದರು.

ಶ್ರೀಯುತರು ತಮ್ಮ ೧೫ನೇ ವಯಸ್ಸಿನಲ್ಲಿ ಪ್ರಸಿದ್ಧ ಯೋಗಾಚಾರ್ಯ ಪ್ರೊ.ಟಿ.ಕೃಷ್ಣಮಾಚಾರ್ಯ ಅವರ ಹತ್ತಿರ ಯೋಗ ಕಲಿತು ಇಂದು ಶ್ರೇಷ್ಠ ಯೋಗಶಿಕ್ಷಕ ಹಾಗೂ ಯೋಗ ಸಾಧಕ ಎನ್ನುವ ಹಿರಿಮೆಗೆ ಪಾತ್ರರಾಗಿದ್ದಾರೆ. ೧೯೩೬ರಲ್ಲಿ ಧಾರವಾಡದಲ್ಲಿ ಯೋಗ ಶಿಕ್ಷಣ ಪೂರ್ತಿಗೊಳಿಸಿ, ಕರ್ನಾಟಕ ಕಾಲೇಜಿನಲ್ಲಿಯೇ ಫ್ಯಾಕಲ್ಟಿ ಸದಸ್ಯರಾಗಿ ಸೇವೆಸಲ್ಲಿದ್ದಾರೆ. ಅಲ್ಲದೆ ಬಿ.ಕೆ.ಎಸ್.ಅಯ್ಯಂಗಾರ್ ಎನ್ನುವ ತಮ್ಮದೇ ಯೋಗ ಪದ್ಧತಿಯನ್ನು ಪ್ರಸಿದ್ಧಿಗೊಳಿಸಿದ್ದಾರೆ.

ಶ್ರೀಯುತ ಅಯ್ಯಂಗಾರವರ ಬಳಿಯಲ್ಲಿ ಶಿಷ್ಯವೃತ್ತಿಯನ್ನು ಪ್ರಪಂಚದ ಶ್ರೇಷ್ಠ ವ್ಯಕ್ತಿಗಳು ಪಡೆದಿರುತ್ತಾರೆ. ಇವರಲ್ಲಿ ಪ್ರಮುಖರು ಲೋಕನಾಯಕ ಜಯಪ್ರಕಾಶ್ ನಾರಾಯಣ್, ಅಚ್ಯುತ ಪಟವರ್ಧನ್, ನಾಡಿನ ಖ್ಯಾತ ಚಿಂತಕ ಶ್ರೀ ಜಿಡ್ಡು ಕೃಷ್ಣಮೂರ್ತಿ, ವಿಶ್ವವಿಖ್ಯಾತ ವಯೋಲಿನ್ ವಾದಕ ಯೆಹೂದಿ ಮನೂಹಿನ್, ಪಿಯಾನೋ ವಾದಕ ಕ್ಲಿಫರ್ಡ್ ಕರ್ಜನ್, ಬೆಲ್ಜಿಯಂ ಮಹಾರಾಣಿ ಶ್ರೀಮತಿ ಎಲಿಜಬೆತ್, ಶ್ರೀ ವೀರೇಂದ್ರ ಪಾಟೀಲ್, ಶ್ರೀ ಬಿ.ಡಿ. ಜತ್ತಿ, ಜನರಲ್ ಶ್ರೀ ನಾಗೇಶ್ ಹಾಗೂ ಖ್ಯಾತ ಸಮಾಜ ಸೇವಕ, ಯೋಗ ತಜ್ಞ ದಿ.ಅಜಿತ್‌ಕುಮಾರವರು ಸಹ ಅಯ್ಯಂಗಾರವರ ಶಿಷ್ಯರು ಎಂಬುದು ಬಹುಮುಖ್ಯ ಸಂಗತಿ. ೧೯೫೪ರಲ್ಲಿ ಬಾಂಬೆಯಲ್ಲಿ ಯೋಗ ತರಗತಿಗಳನ್ನು ಆರಂಭಿಸಿದ್ದು ಇವರ ವಿಶೇಷ.

ಶ್ರೀ ಅಯ್ಯಂಗಾರವರು ಬರೆದ ಎಲ್ಲಾ ಯೋಗ ಪುಸ್ತಕಗಳು ಜಗತ್ತಿನಲ್ಲಿ ಪ್ರಸಿದ್ಧಿಯನ್ನು ಪಡೆದಿರುತ್ತದೆ. ಅದರಲ್ಲಿ ಮುಖ್ಯವಾದ ಕೆಲವು ಪುಸ್ತಕಗಳೆಂದರೆ: ೧. ಲೈಟ್ ಆನ್ ಯೋಗ(ಯೋಗ ದೀಪಿಕಾ–೧೯೬೬) ೨.ಲೈಟ್ ಆನ್ ಪ್ರಾಣಾಯಾಮ (ಪ್ರಾಣಾಯಾಮ ದೀಪಿಕೆ) ೩. ಯೋಗ ಸೂತ್ರಾಸ್ ಆಫ್ ಪತಂಜಲಿ, ೪. ಟ್ರೀ ಆಫ್ ಯೋಗ ೫. ಆರ್ಟ್ ಆಫ್ ಯೋಗ ೬. ಅಷ್ಟದಳ ಯೋಗಮಾಲಾ (೮ ಸಂಪುಟ) ೭. ಯೋಗ ಫಾರ್ ಹೋಲಿಸ್ಟಿಕ್ ಇಲ್ಲಿ ಗಮನಿಸುವಂಥವು. ಲೈಟ್ ಆನ್ ಯೋಗ ಪುಸ್ತಕವನ್ನು ಬೈಬಲ್ ಆಫ್ ಯೋಗ ಎಂದೇ ಪಾಶ್ಚಿಮಾತ್ಯ ರಾಷ್ಟ್ರಗಳು ಒಪ್ಪಿಕೊಂಡಿರುವುದು ಕನ್ನಡಿಗರಾದ ನಮಗೆಲ್ಲರಿಗೂ ಸಂತೋಷದ ಸಂಗತಿ. ಇವರ ಪ್ರತಿಯೊಂದು ಪುಸ್ತಕಗಳು ಭಾರತದ ಹಾಗೂ ಪ್ರಪಂಚದ ಬಹಳಷ್ಟು ಭಾಷೆಗಳಿಗೆ ಅನುವಾದಗೊಂಡಿವೆ.

ಶ್ರೀ ಅಯ್ಯಂಗಾರವರಿಗೆ ಜಗತ್ತಿನ ಅನೇಕ ರಾಷ್ಟ್ರಗಳು ಬಿರುದು ಮತ್ತು ಗೌರವ ಸನ್ಮಾನ ಮಾಡಿ ಅವರ ಸಾಧನೆಯನ್ನು ಶ್ಲಾಘಿಸಿವೆ. ಶ್ರೀ ಅಯ್ಯಂಗಾರವರ ಸಾಧನೆಯನ್ನು ಗಮನಿಸಿ ಕರ್ನಾಟಕ ರಾಜ್ಯ ಸರ್ಕಾರ ರಾಜ್ಯೋತ್ಸವ ಪ್ರಶಸ್ತಿ–(೧೯೮೮), ಪತಂಜಲಿ ಪ್ರಶಸ್ತಿ–(೧೯೯೦), ಮೈಸೂರು ವಿಶ್ವವಿದ್ಯಾಲಯ ಗೌರವ ಡಾಕ್ಟರೇಟ್ ಪ್ರಶಸ್ತಿ ಮತ್ತು ೨೦೦೯ರಲ್ಲಿ ರಾಜೀವ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯವು ಗೌರವ ಡಾಕ್ಟರೇಟ್ ಪ್ರಶಸ್ತಿ ನೀಡಿ ಗೌರವಿಸಿವೆ. ಹಾಗೆಯೇ ಕೇಂದ್ರ ಸರ್ಕಾರವು "ಪದ್ಮಶ್ರೀ" ಹಾಗೂ "ಪದ್ಮಭೂಷಣ" ಪ್ರಶಸ್ತಿಯನ್ನು ನೀಡಿ ಗೌರವಿಸಿದೆ ಎಂದು ತಿಳಿಸಲು ಹರ್ಷವಾಗುತ್ತದೆ.

ಯೋಗ ಸೇವೆಯ ಜೊತೆಗೆ ಶ್ರೀಯುತರು ಸಮಾಜ ಸೇವೆಯನ್ನು ಮಾಡಿದ್ದಾರೆ. ತಮ್ಮ ಹುಟ್ಟೂರಿನಲ್ಲಿ ಸಾರ್ವಜನಿಕ ಪ್ರೌಢಶಾಲೆಯನ್ನು ಕಟ್ಟಿಸಿ ಸುಮಾರು ೩೦೦ ವಿದ್ಯಾರ್ಥಿಗಳಿಗೆ ಉಚಿತ ವಿದ್ಯಾದಾನ ಹಾಗೂ ಊಟದ ವ್ಯವಸ್ಥೆಯನ್ನು ನೀಡುತ್ತಿ

ದ್ದಾರೆ. ಮತ್ತು ಸಾರ್ವಜನಿಕ ಆಸ್ಪತ್ರೆಯನ್ನು ಕಟ್ಟಿಸಿ ಕೊಟ್ಟಿದ್ದಾರೆ. ಶ್ರೀಯುತರ ಮಾರ್ಗದರ್ಶನದಲ್ಲಿ ರಾಜ್ಯದ ಹಲವಾರು ಯೋಗ ಕೇಂದ್ರಗಳಲ್ಲಿ ಯೋಗ ತರಗತಿಗಳು ನಡೆಯುತ್ತಿವೆ.

ದೇಶ ಹಾಗೂ ಹೊರದೇಶಗಳಲ್ಲಿ ಯೋಗಶಿಕ್ಷಣ ಹಾಗೂ ಉಪನ್ಯಾಸಗಳ ಮೂಲಕ ತಮ್ಮ ಸಾಧನೆಯನ್ನು ಮಾಡಿರುವ ಕನ್ನಡಿಗ ಶ್ರೀ ಬಿ.ಕೆ.ಎಸ್.ಅಯ್ಯಂಗಾರ್ ಅವರಿಗೆ ಕನ್ನಡ ವಿಶ್ವವಿದ್ಯಾಲಯವು ತನ್ನ ೨೦೧೧ನೇ ಸಾಲಿನ ಪ್ರತಿಷ್ಠಿತ ನಾಡೋಜ ಪದವಿಯನ್ನು ನೀಡಿ ಗೌರವಿಸುತ್ತಿದೆ.

ನುಡಿಹಬ್ಬದ ಪ್ರಯುಕ್ತ ನಡೆದ ಕಾರ್ಯಕ್ರಮಗಳು

೧. ಗಡಿನಾಡ ಕನ್ನಡಿಗರ ಸ್ಥಿತಿಗತಿಗಳು: ವಿಚಾರ ಸಂಕಿರಣ

೨೦ನೆ ನುಡಿಹಬ್ಬದ ನಿಮಿತ್ತವಾಗಿ ೨೫ನೇ ಡಿಸೆಂಬರ್ ೨೦೧೧ರಂದು ಭಾನುವಾರ ಮುಂಜಾನೆ ೧೧ ಗಂಟೆಗೆ ಭುವನ ವಿಜಯದಲ್ಲಿ 'ಗಡಿನಾಡ ಕನ್ನಡಿಗರ ಸ್ಥಿತಿಗತಿಗಳು' ವಿಚಾರ ಸಂಕಿರಣವನ್ನು ಗಡಿಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಸನ್ಮಾನ್ಯ ಶ್ರೀ ಚಂದ್ರಕಾಂತ ಬೆಲ್ಲದ ಅವರು ದೀಪ ಬೆಳಗಿಸಿ ಉದ್ಘಾಟಿಸಿ ಮಾತನಾಡಿದರು. ನಾಡೋಜ ಪ್ರೊ.ಬರಗೂರು ರಾಮಚಂದ್ರಪ್ಪ ಆಶಯ ನುಡಿದರು. ಕುಲಪತಿ ಡಾ.ಎ.ಮುರಿಗೆಪ್ಪ ವಿಚಾರ ಸಂಕಿರಣದ ಅಧ್ಯಕ್ಷತೆ ವಹಿಸಿದ್ದರು. ಕುಲಸಚಿವ ಡಾ.ಮಂಜುನಾಥ ಬೇವಿನಕಟ್ಟಿ ಅವರು ಎಲ್ಲರನ್ನು ಸ್ವಾಗತಿಸಿ ಪ್ರಾಸ್ತಾವಿಕ ಮಾತುಗಳಾಡಿದರು. ಡಾ.ಪಿ.ಮಹಾದೇವಯ್ಯ ನಿರೂಪಿಸಿದರು. ಡಾ.ಎಚ್.ಡಿ.ಪ್ರಶಾಂತ್ ವಂದಿಸಿದರು. ಗಡಿನಾಡ ಕನ್ನಡಿಗರ ಸ್ಥಿತಿಗತಿ ಕುರಿತು ವಿವಿಧ ಆಯಾಮಗಳಲ್ಲಿ ಡಾ.ಗುರುಲಿಂಗಪ್ಪ ದಬಾಲೆ, ಡಾ.ಕೆ.ಕೆ.ಪತ್ತಾರ, ಪ್ರೊ.ಚಂದ್ರಶೇಖರ ನಂಗಲಿ ಪ್ರಬಂಧ ಮಂಡಿಸಿದರು. ಡಾ. ಕಮಲಾಕ್ಷ ಕೆ. ಅಧ್ಯಕ್ಷತೆ ವಹಿಸಿದ್ದರು.

ಗಡಿನಾಡ ಕನ್ನಡಿಗರ ಸಾಮಾಜಿಕ ಹಾಗೂ ಸಾಂಸ್ಕೃತಿಕ ಸಂಬಂಧಗಳು ಕುರಿತ ಸಂವಾದದಲ್ಲಿ ಡಾ. ಬಂಜಗೆರೆ ಜಯಪ್ರಕಾಶ ವಿಷಯ ಮಂಡಿಸಿದರು. ಬಸವರಾಜ ಮಸೂತಿ, ದಾನಮ್ಮ ಝಳಕಿ, ಡಾ.ತಮಿಳ್‌ಸೆಲ್ವಿ, ಪ್ರೊ.ಮಲೆಯೂರು ಗುರುಸ್ವಾಮಿ, ಶ್ರೀ ಅಮರ ದೀಕ್ಷಿತ್, ಡಾ.ಬಿ.ಬಿ.ಪೂಜಾರಿ ಪ್ರತಿಕ್ರಿಯಿಸಿದರು. ಡಾ.ಚೆ.ರಾಮಸ್ವಾಮಿ ಅಧ್ಯಕ್ಷತೆ ವಹಿಸಿದ್ದರು.

ವಿಚಾರ ಸಂಕಿರಣದಲ್ಲಿ ಅಧ್ಯಾಪಕರು, ವಿದ್ಯಾರ್ಥಿಗಳು, ಆಡಳಿತ ವರ್ಗ, ಸಿಂಡಿಕೇಟ್ ಮತ್ತು ಸೆನೆಟ್ ಸದಸ್ಯರು, ಡೀನರು, ಆಹ್ವಾನಿತ ಗಣ್ಯರು, ಮಾಧ್ಯಮದವರು ಭಾಗವಹಿಸಿದ್ದರು.

ಪುಸ್ತಕಗಳ ಬಿಡುಗಡೆ ಸಮಾರಂಭ

೨೦ನೇ ನುಡಿಹಬ್ಬದ ಅಂಗವಾಗಿ ಪ್ರಸಾರಾಂಗವು ಪ್ರಕಟಿಸಿದ ಕನ್ನಡ ವಿಶ್ವವಿದ್ಯಾಲಯದ ಅಧ್ಯಾಪಕರು ಮತ್ತು ಬಾಹ್ಯ ವಿದ್ವಾಂಸರು ರಚಿಸಿದ ಒಟ್ಟು ೧೦೧ ಪುಸ್ತಕಗಳನ್ನು ೨೬ನೇ ಡಿಸೆಂಬರ್ ೨೦೧೧ರಂದು ಸೋಮವಾರ ಮುಂಜಾನೆ ೧೧ ಗಂಟೆಗೆ ಭುವನ ವಿಜಯದ ವೇದಿಕೆಯಲ್ಲಿ ನಾಡೋಜ ಡಾ.ಹಂಪ ನಾಗರಾಜಯ್ಯ ಅವರು ಲೋಕಾರ್ಪಣೆ ಮಾಡಿ ಮಾತನಾಡಿದರು. ಕುಲಪತಿ ಡಾ.ಎ.ಮುರಿಗೆಪ್ಪ ಅವರು ಅಧ್ಯಕ್ಷತೆ ವಹಿಸಿದ್ದರು. ಕುಲಸಚಿವ ಡಾ.ಮಂಜುನಾಥ ಬೇವಿನಕಟ್ಟಿ ಸ್ವಾಗತಿಸಿದರು. ಪ್ರಸಾರಾಂಗದ ನಿರ್ದೇಶಕ ಡಾ.ಎ.ಸುಬ್ಬಣ್ಣ ರೈ ಪ್ರಾಸ್ತಾವಿಕ ಮಾತುಗಳಾಡಿದರು. ಡಾ.ಹೆಚ್.ಬಿ.ರವೀಂದ್ರ ನಿರೂಪಿಸಿದರು. ಡಾ.ಜೈನುಲ್ಲಾ ಬಳ್ಳಾರಿ ವಂದಿಸಿದರು. ಸಮಾರಂಭದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಆಯುಕ್ತರಾದ ಶ್ರೀ ಮನುಬಳಿಗಾರ್ ಅವರು ಅನುಪಸ್ಥಿತರಿದ್ದರು.

೨೦ನೇ ನುಡಿಹಬ್ಬದಲ್ಲಿ ಬಿಡುಗಡೆಯಾದ ಪುಸ್ತಕಗಳು

೧. **ದಕ್ಷಿಣ ಭಾರತೀಯ ಜಾನಪದ ಕೋಶ ಸಂಪುಟ–೧** – ಸಂ. ಡಾ. ಸ.ಚಿ. ರಮೇಶ್

೨. **ದಕ್ಷಿಣ ಭಾರತೀಯ ಜಾನಪದ ಕೋಶ ಸಂಪುಟ–೨** – ಸಂ. ಡಾ. ಸ.ಚಿ. ರಮೇಶ್

೩. **ಹಿರಿಯರ ಹಿರಿತನ ಹಿಂದೇನಾಯಿತು** – ಡಾ. ವಿಜಯಕುಮಾರ ಬೋರಟ್ಟಿ

೪. **ಯಶೋಧರ ಚರಿತೆ ಮತ್ತು ಅಭಿಜಾತ ಪರಂಪರೆ** – ಡಾ. ಕರೀಗೌಡ ಬೀಚನಹಳ್ಳಿ

೫. **ದೇವಾಲಯ ವಾಸ್ತು** – ಎಂ.ಎನ್. ಪ್ರಭಾಕರ

೬. **ಹಾಡುವಳ್ಳಿ** – ಡಾ. ಕೆ.ಜಿ. ಭಟ್‌ಸೂರಿ

೭. **ಒಳಗನ್ನಡಿ** – (ಸಂ) ಡಾ. ಎ.ಆರ್. ವಾಸವಿ

೮. **ಹಕ್ಕು–ಹಂಗು** – ಡಾ. ಟಿ.ಆರ್. ಚಂದ್ರಶೇಖರ

೯. **ಬಳ್ಳಾರಿ ಜಿಲ್ಲೆಯ ಕೋಟೆಗಳು** – ಡಾ. ಎಂ. ಕೊಟ್ರೇಶ್

೧೦. **ಬಿಜಾಪುರ ಜಿಲ್ಲೆ ಅಭಿವೃದ್ಧಿ ದುಸ್ಥಿತಿ ಅಧ್ಯಯನ** – ಡಾ. ಟಿ.ಆರ್. ಚಂದ್ರಶೇಖರ

೧೧. **Selected Vachanas of Sarvajna** - (Tr.) Dr. Basavaraja Naikar

೧೨. **Selected Poems of Kuvempu** - (C.Ed.) Prof. D. Javare Gowda

೧೩. **Karnataka Unification** - A Polictical Interpretation - K. Ragavendra Rao

೧೪. **ಚರಿತ್ರೆ ಅಧ್ಯಯನ ವಿಧಾನ ಮತ್ತು ಚರಿತ್ರೆ ಬರವಣಿಗೆ ಸಂಪುಟ–೧** – (ಸಂ) ಡಾ. ಟಿ.ಪಿ ವಿಜಯ್, ಡಾ. ವಿರೂಪಾಕ್ಷಿ ಪೂಜಾರಹಳ್ಳಿ

೧೫. **ಭಾರತ ಉಪಖಂಡ: ಆಧುನಿಕಪೂರ್ವ ಚರಿತ್ರೆ** – (ಸಂ) ಡಾ. ಟಿ.ಪಿ ವಿಜಯ್

೧೬. **ಭಾರತ ಉಪಖಂಡ: ಆಧುನಿಕ ಚರಿತ್ರೆ** – (ಸಂ) ಡಾ. ಟಿ.ಪಿ ವಿಜಯ್

೧೭. **ಏಷ್ಯಾ** – (ಸಂ) ಡಾ. ಕೆ. ಮೋಹನ್‌ಕೃಷ್ಣ ರೈ

೧೮. **ಯುರೋಪ್** – (ಸಂ) ಡಾ. ಕೆ. ಮೋಹನ್‌ಕೃಷ್ಣ ರೈ

೧೯. **ಸಮಕಾಲೀನ ಕರ್ನಾಟಕ** – (ಸಂ) ಡಾ. ಎನ್. ಚಿನ್ನಸ್ವಾಮಿ ಸೋಸಲೆ

೨೦. **ಆಫ್ರಿಕಾ** – (ಸಂ) ಡಾ. ಎನ್. ಚಿನ್ನಸ್ವಾಮಿ ಸೋಸಲೆ

೨೧. **ಅಮೆರಿಕ** – (ಸಂ) ಡಾ. ವಿರೂಪಾಕ್ಷಿ ಪೂಜಾರಹಳ್ಳಿ

೨೨. **ಕೃಷಿ: ಪಾರಂಪರಿಕ ಜ್ಞಾನ** – (ಸಂ) ಡಾ. ಸ.ಚಿ. ರಮೇಶ್

೨೩. **ಬಿಜಾಪುರ ಜಿಲ್ಲಾ ಶಾಸನ ಸಂಪುಟ** – (ಪ್ರ.ಸಂ.) ಡಾ. ದೇವರಕೊಂಡಾರೆಡ್ಡಿ

೨೪. **ಹರದೇಶಿ–ನಾಗೇಶಿ** – ಡಾ. ಶೈಲಜ ಹಿರೇಮಠ

೨೫. **ಹಸ್ತಪ್ರತಿ ವ್ಯಾಸಂಗ ೧೦** – (ಸಂ) ಡಾ. ಎಸ್.ಆರ್. ಚನ್ನವೀರಪ್ಪ

೨೬. **ಕುವೆಂಪು ಬಿಂಬಿಸಿದ ಆರ್ಥಿಕ ನೆಲೆಗಳು** – ಡಾ. ಕೆ.ಸಿ. ಚನ್ನಮ್ಮ

೨೭. **ನಾಗಮಂಗಲ** – (ಸಂ) ಡಾ. ಸಿ. ಮಹದೇವ

೨೮. **ಕನ್ನಡ ಸಾರ್ವಭೌಮತ್ವ: ಕನಸಿನ ಆಯಾಮಗಳು** – (ಸಂ) ಡಾ. ಮಂಜುನಾಥ ಬೇವಿನಕಟ್ಟಿ

೨೯. **ದಕ್ಷಿಣ ಭಾರತದ ಆಳ್ವಾರರು** – ಡಾ. ಎನ್.ಕೆ. ರಾಮಶೇಷನ್

೩೦. **ಸಮಾಜ ಸಂಶೋಧನೆ** – ಡಾ. ಚಂದ್ರ ಪೂಜಾರಿ (ಮರುಮುದ್ರಣ)

೩೧. **ಸಂಶೋಧನಾ ಜವಾಬ್ದಾರಿ** – ಡಾ. ಚಂದ್ರ ಪೂಜಾರಿ (ಮರುಮುದ್ರಣ)

೩೨. **ಮಾತು ತಲೆಯೆತ್ತುವ ಬಗೆ** – (ಸಂ) ರಹಮತ್ ತರೀಕೆರೆ (ಮರುಮುದ್ರಣ)

೩೩. **ಕನ್ನಡ ಮೋಡಿಲಿಪಿ: ಸಂರಚನೆ ಮತ್ತು ಸಂವರ್ಧನೆ** – ಡಾ. ವೀರೇಶ ಬಡಿಗೇರ

೩೪. **ದಿನಕರ ದೇಸಾಯಿ ನೂರು: ನೆನಪು** – (ಸಂ) ಡಾ. ಅಮರೇಶ ನುಗಡೋಣಿ

೩೫. **ಸಂಶೋಧನೆ ಏನು? ಏಕೆ? ಹೇಗೆ?** – ಡಾ. ಎಂ. ಚಂದ್ರ ಪೂಜಾರಿ (ಮರುಮುದ್ರಣ)

೩೬. **ಕನ್ನಡ ಸಂಶೋಧನೆ ವೈಧಾನಿಕತೆಗಳು** – (ಸಂ) ಡಾ. ಅಮರೇಶ ನುಗಡೋಣಿ (ಮರುಮುದ್ರಣ)

೩೭. **ಅಧ್ಯಯನದ ವಿಧಿವಿಧಾನಗಳು** – (ಸಂ) ಡಾ. ಕೆ. ರವೀಂದ್ರನಾಥ (ಮರುಮುದ್ರಣ)

೩೮. **ಮಸ್ಕಿ ಕನ್ನಡದಾಗ ವಿಬಕ್ತಿ ರೂಪಗಳು** – ಡಾ. ಬಸವರಾಜ ಕೋಡಗುಂಟಿ

೩೯. **ಸುಲಭ ಸಂಜೀವಿನಿ** – ಡಾ. ಸತ್ಯನಾರಾಯಣ ಭಟ್

೪೦. **ತುಳುಗೊಳ್: ಸಂಕಥನ** – ಡಾ. ಡಿ.ವಿ. ಪರಮಶಿವಮೂರ್ತಿ

೪೧. **ಮಧುರಾ ವಿಜಯಂ ಅಥವಾ ವೀರಕಂಪರಾಯ ಚರಿತೆ** – (ಅನು)ಡಾ. ಕೆ. ಕುಶಾಲಪ್ಪ ಗೌಡ

೪೨. **ದಳವಾಯಿ: ಸಾಂಸ್ಕೃತಿಕ ಅಧ್ಯಯನ** – ಡಾ. ಲಿಂಗದಹಳ್ಳಿ ಹಾಲಪ್ಪ

೪೩. **ಹಾಲುಮತ ವ್ಯಾಸಂಗ–೩** – (ಸಂ) ಡಾ. ಎಫ್.ಟಿ. ಹಳ್ಳಿಕೇರಿ

೪೪. **Forest Blossomes and Concret Jungle** - (Ed.) Dr. K.M. Metry

೪೫. **ಬಹುಸಂಸ್ಕೃತಿ ಮತ್ತು ದೇಸಿ ಜಾತ್ರೆಗಳ ಮಹಾಸಮನ್ವಯ** – ಡಾ. ಹೆಬ್ಬಾಲೆ ಕೆ. ನಾಗೇಶ್

೪೬. **ಮುಕ್ಕೊಡೆ** – (ಸಂ) ಡಾ. ಸಿ.ಎಸ್. ವಾಸುದೇವನ್

೪೭. **ರಾಮಮನೋಹರ ಲೋಹಿಯಾ ಚಿಂತನೆ** – (ಸಂ) ಡಾ. ನಟರಾಜ್ ಹುಳಿಯಾರ್ (ಮರುಮುದ್ರಣ)

೪೮. **ರಾವ್‌ಸಾಹೇಬ ಮಲ್ಲಪ್ಪ ಶಂಕ್ರಪ್ಪ ಸಿಂಹಾಸನ** – ಡಿ.ಜಿ. ಸಕ್ರಿ, (ಸಂ) ಮಹೇಶ ತಿಪ್ಪಶೆಟ್ಟಿ

೪೯. **ರಾಮರಾಜನ ಬಖೈರು** – (ಸಂ) ಪ್ರೊ. ಲಕ್ಷ್ಮಣ್ ತೆಲಗಾವಿ

ನಾಡೋಜ ಮಾಲೆ

೫೦. **ನಾಡೋಜ ಡಾ. ಚಂದ್ರಶೇಖರ ಕಂಬಾರ** – ಡಾ. ವೀರೇಶ ಬಡಿಗೇರ

೫೧. **ನಾಡೋಜ ಡಾ. ಗಂಗೂಬಾಯಿ ಹಾನಗಲ್** – ಡಾ. ಮೀನಾಕ್ಷಿ

ಮಂಟಪ ಮಾಲೆ

೫೨. **ಬಲೀಂದ್ರ** – ಡಾ. ಸ.ಚಿ. ರಮೇಶ್

೫೩. **ಕುಮಾರರಾಮ** – ಡಾ. ಎಂ.ಕೆ. ದುರುಗಪ್ಪ

೫೪. **ಮಲೆಮಾದಯ್ಯನ ಸಾಂಸ್ಕೃತಿಕ ಚರಿತ್ರೆ** – ಮಹದೇವ ಶಂಕನಪುರ

೫೫. **ತುಳು ಪರಿಪು** – ಮಹಾಲಿಂಗ ಭಟ್ಟ ಕೆ.

೫೬. **ಸಾಹಿತ್ಯ ಸಂದರ್ಭ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯ** – ಆರ್. ದೇವರಾಜು

೫೭. **ಮಂಟೇದಯ್ಯನ ಸಾಂಸ್ಕೃತಿಕ ಚರಿತ್ರೆ** – ಡಾ. ಪ್ರಕಾಶ ಮಂಟೇದ

೫೮. **ಆರೂಢ ಪರಂಪರೆ** – ಶಾರದ ಮುಳ್ಳೂರ

೫೯. **ಗೊಲ್ಲರ ಇತಿಹಾಸ ಕಥನ** – ಡಾ. ಮಲ್ಲಿಕಾರ್ಜುನ ಕಲಮರಳ್ಳಿ

೬೦. **ಸಮಕಾಲೀನ ಶಿಲ್ಪಕಲೆ** – ಡಾ. ಶಿವಾನಂದ ಎಚ್. ಬಂಟನೂರ

೬೧. **ಗುಲಬರ್ಗಾ ಜಿಲ್ಲೆಯ ಜೈನ ಪರಂಪರೆ** – ಡಿ.ಎನ್. ಅಕ್ಕಿ

೬೨. **ನಾಗರಾಳ ದಿಗಂಬರೇಶ್ವರ ಚರಿತ್ರೆ** – ಡಾ. ವೀರೇಶ ಬಡಿಗೇರ

೬೩. **ಸ್ವಾತಂತ್ರ್ಯ ಸಂಗ್ರಾಮಕ್ಕೆ ಹಲಗಲಿ ಬೇಡರ ಕೊಡುಗೆ** – ವೀರೇಂದ್ರ ಶೀಲವಂತ

೬೪. **ಮೂರುಜಾವಿ ದೇವರ ಪರಂಪರೆ** – ಮನೋಹರ ಎಸ್. ದೊಡ್ಡಮನಿ

೬೫. **ಮಹಿಳೆಯ ದುಡಿಮೆ ಏಕರೂಪತೆಯ ಪ್ರಶ್ನೆ** – ಕೆ.ಸಿ. ಚನ್ನಮ್ಮ

೬೬. **ಚಿತ್ರ ಕಲಾವಿದ ಎಸ್.ಎಂ. ಪಂಡಿತ್** – ಡಾ. ಮೋಹನರಾವ್ ಬಿ. ಪಂಚಾಳ

೬೭. **ಮಣ್ಣು ಪರೀಕ್ಷೆ** – ಡಾ. ಅಶೋಕ ಎಸ್. ಆಲೂರು ಮತ್ತು ಇತರರು

೬೮. **ಶೇಂಗಾ ಬೀಜೋತ್ಪಾದನೆಯ ತಂತ್ರಜ್ಞಾನಗಳು** – ಡಾ. ಅಶೋಕ ಎಸ್. ಆಲೂರ ಮತ್ತು ಇತರರು

೬೯. **ಬರಡಾಗುತ್ತಿರುವ ನಮ್ಮ ಭೂಸಂಪತ್ತು ಹಾಗೂ ಅದರ ರಕ್ಷಣೆ** – ಡಾ. ಅಶೋಕ ಎಸ್. ಆಲೂರ ಮತ್ತು ಇತರರು

೭೦. **ದಾಳಿಂಬೆ** – ಡಾ. ಅಶೋಕ ಎಸ್. ಆಲೂರ ಮತ್ತು ಇತರರು

೭೧. **ಸಮಗ್ರ ಕೃಷಿ ಅಭಿವೃದ್ಧಿಗೆ ಬಲಶಾಲಿ ರೈತ ಸಂಘಟನೆಗಳು** – ಡಾ. ಶಿವಾನಂದ ಬಿ. ಹೊಸಮನಿ ಮತ್ತು ಇತರರು

೭೨. **ಮಾವು** – ಡಾ. ಶಿವಾನಂದ ಬಿ. ಹೊಸಮನಿ ಮತ್ತು ಇತರರು

೭೩. **ಕಪ್ಪರ ಪಡಿಯಮ್ಮ** – ರಾಜೇಶ್ವರಿ ವಿ. ಶೀಲವಂತ

೭೪. **ಜಮಖಂಡಿ ಅಪ್ಪಾಲಾಲ ನಧಾಪ** – ಅರ್ಜುನ ಕೋರಟಕರ

೭೫. **ಹಲಸಂಗಿ ಭಾಗದ ಲಾವಣಿಕಾರರು** – ಶಂಕರ ಬೈಚಬಾಳ

೭೬. **ವೈ. ನಾಗೇಶ ಶಾಸ್ತ್ರೀ** – ಡಾ. ಮೃತ್ಯುಂಜಯ ರುಮಾಲೆ

೭೭. **ಕನ್ನಡ ಪತ್ರಿಕೋದ್ಯಮಕ್ಕೆ ರೆ. ಹೆರ್ಮನ್ ಮೊಗ್ಲಿಂಗ್ ಕೊಡುಗೆ** – ಜೈನುಲ್ಲಾ ಬಳ್ಳಾರಿ

೭೮. **ಕನ್ನಡ ಶಾಸನಾಧ್ಯಯನದ ಬಹುಮುಖಿ ಆಯಾಮಗಳು** – ಡಾ. ಡಿ.ಕೆ. ಚಿತ್ತಯ್ಯ ಪೂಜಾರ್

೭೯. **ಶಿಲಾಶ್ರಯ ಕಲೆಯ ದೃಶ್ಯಧ್ಯಾನ** – ಕೆ.ವಿ. ಸುಬ್ರಹ್ಮಣ್ಯಂ

೮೦. **ಸಾವಯವ ಕೃಷಿ** – ಈ ತಿಪ್ಪೇಸ್ವಾಮಿ

೮೧. **ಸಾಮಾಜಿಕ ಹೊರತಳ್ಳುವಿಕೆಯ ಪರಿಕಲ್ಪನೆ** – ಡಾ. ಗುರುಲಿಂಗಯ್ಯ

೮೨. **ಶಾಸನಗಳ ಪ್ರಕಾರ ಮತ್ತು ಅವುಗಳ ಮಹತ್ವ** – ಡಾ. ನಾಯಕರ ಹುಲುಗಪ್ಪ

೮೩. **ಬಾಲಕಾರ್ಮಿಕರ ಬದುಕು** – ಡಾ. ಯಮನೂರಪ್ಪ ಅಣ್ಣಿಗೇರಿ

೮೪. **ಮರೇಗುದ್ದಿ ಅಡವಿಸಿದ್ಧೇಶ್ವರ ಮಠದ ಪರಂಪರೆ** – ಡಾ. ಅಶೋಕ ನರೋಡೆ

೮೫. **ದಲಿತ ಸ್ತ್ರೀ ದೈವಗಳು** – ಡಾ. ಹೆಬ್ಬಾಲೆ ನಾಗೇಶ್

೮೬. **ಕನ್ನಡ ಸಾಹಿತ್ಯ ವಿಮರ್ಶೆ** – ಡಾ. ಬಸವರಾಜ ಸಬರದ

೮೭. **ಕೊಡವಡ ನಮ್ಮೆನಾಳ್, ಮಂಗಲ ಪಿಂಞ ಚಾವ್ ಪದ್ಧತಿ** – ಹೊಟ್ಟೇಂಗಡ ಸ್ವಾತಿ

೮೮. **ವಿತರಣಾ ಸ್ವತಂತ್ರ ಪ್ರತಿದರ್ಶಕಗಳು** – ಡಾ. ಶಾರದ ವಿ. ಭಟ್ಟ

೮೯. **ಹದಿನೆಂಟು ಜಾತಿಗಳು** – ವಿಜಯಶ್ರೀ ಇಟ್ಟಣ್ಣವರ್

೯೦. **ಅನುಪಮಾ ನಿರಂಜನ** – ಡಾ. ಎಲ್. ಲಕ್ಷ್ಮೀದೇವಿ

೯೧. **ಜೈನ ವಾಙ್ಮಯ ಮತ್ತು ಕನ್ನಡ ಸಾಹಿತ್ಯ** – ಡಾ. ಎಲ್. ಲಕ್ಷ್ಮೀದೇವಿ

೯೨. **ಗ್ರಾಮಒಕ್ಕಲಿಗರ ಸಾಂಸ್ಕೃತಿಕ ಅನನ್ಯತೆ** – ಡಾ. ಗಣಪತಿಗೌಡ

೯೩. **ಮಂಟೇಸ್ವಾಮಿ ಕಾವ್ಯ** – ಡಾ. ಚಂದ್ರು ಕಾಳೇನಹಳ್ಳಿ

೯೪. **ಅಂಬೇಡ್ಕರ್ ಮತ್ತು ಸ್ವಾತಂತ್ರ್ಯೋತ್ತರ ಭಾರತ** – ಎಂ. ಮಂಜಣ್ಣ

೯೫. **ಸಂಶೋಧನಾ ಪ್ರಸ್ತಾವ** – ಡಾ. ಚಂದ್ರ ಪೂಜಾರಿ (ಮರುಮುದ್ರಣ)

೯೬. **ಗೆದರೆಬೆಟ್ಟ ಮತ್ತು ಗುರುಮಕ್ಕಳು ಪರಂಪರೆ** – ಮ.ನಾ. ಕೃಷ್ಣಮೂರ್ತಿ

೯೭. **ಪಾಂಚಾಳರ ಬದುಕು ಮತ್ತು ಸಂಸ್ಕೃತಿ** – ಡಾ. ಶೇಖರಾಚಾರಿ

೯೮. **ಕರ್ನಾಟಕ ಜೈನ ಮಠಗಳು ಮತ್ತು ಕನ್ನಡ ಸಾಹಿತ್ಯ** – ಡಾ. ಕೆ. ರವೀಂದ್ರನಾಥ

೯೯. **ಮಾಧ್ಯಮ ಮತ್ತು ಮಹಿಳೆ** – ಡಾ. ಬಿ.ಜಿ. ಕಲಾವತಿ

೧೦೦. **ಜನಪರ ಚಳುವಳಿಗಳು ಮತ್ತು ಸಾಂಸ್ಕೃತಿಕ ಚಾಥಗಳು** – ಡಾ. ರವಿಕುಮಾರ ಬಾಗಿ

೧೦೧. **ಕುಕ್ಕಲನಾಡು ದೇವಾಲಯ ಮತ್ತು ಶಿಲ್ಪಗಳು** – ಡಾ. ನಿರಂಜನ ರಾ.ನ.

೨೦ನೆಯ ನುಡಿಹಬ್ಬದಲ್ಲಿ ಪದವಿ ಪಡೆದವರ ವಿವರ

೧. ಡಿ.ಲಿಟ್ ಪದವಿ ಪಡೆದವರು – ಇಲ್ಲ

೨. ಪಿಎಚ್.ಡಿ ಪದವಿ ಪಡೆದವರು – ೪೭

೩. ಎಂ.ಫಿಲ್ ಪದವಿ ಪಡೆದವರು – ೫೧

ಸೂಚನೆ: ವಿವರಗಳಿಗೆ ಅಧ್ಯಯನಾಂಗದ ಶೀರ್ಷಿಕೆಯಲ್ಲಿ ಗಮನಿಸಿ

ನಮ್ಮ ಹಬ್ಬ

೨೦ನೇ ನುಡಿಹಬ್ಬದ ನಂತರ ೨೭ನೇ ಡಿಸೆಂಬರ್ ೨೦೧೧ರಂದು ನಡೆಯಬೇಕಾಗಿದ್ದ ನುಡಿಹಬ್ಬವನ್ನು ಮಾನ್ಯ ಎಸ್.ಬಂಗಾರಪ್ಪನವರ ನಿಧನದಿಂದ ಮುಂದೂಡಲಾಗಿತ್ತು. ೭ನೇ ಜನವರಿ ೨೦೧೨ರಂದು ಶನಿವಾರ ನಮ್ಮಹಬ್ಬವನ್ನು ಆಚರಿಸಲಾಯಿತು. ವಿಶ್ವವಿದ್ಯಾಲಯದ ಉದ್ಯೋಗಿಗಳು ಮತ್ತು ಕುಟುಂಬ ವರ್ಗದವರಿಗಾಗಿ ಆಚರಿಸಲ್ಪಡುವ ನಮ್ಮಹಬ್ಬದಲ್ಲಿ ಸಂಗೀತ, ನೃತ್ಯ, ಓಟ, ರಂಗೋಲಿ ಹಾಕುವುದು, ವಿವಿಧ ಬಗೆಯ ವೇಷಭೂಷಣ ದಂತಹ ಮೊದಲಾದ ಸ್ಪರ್ಧೆಗಳಲ್ಲಿ ವಯಸ್ಸಿನ ಅಂತರವಿಲ್ಲದೆ ಎಲ್ಲರೂ ಬೆರೆತರು.

ಇಳಿಹೊತ್ತಿನಲ್ಲಿ ಬಹುಮಾನ ವಿತರಣೆಯ ವೇದಿಕೆಯಲ್ಲಿ ಕುಲಪತಿ ಡಾ.ಎ.ಮುರಿಗೆಪ್ಪ, ಕುಲಸಚಿವ ಡಾ.ಮಂಜುನಾಥ ಬೇವಿನಕಟ್ಟಿ ಅವರೊಂದಿಗೆ ಡಾ.ವೀರೇಶ ಬಡಿಗೇರ, ಡಾ.ಕಲವೀರ ಮನ್ವಾಚಾರ, ಡಾ.ಮೋಹನ್‌ಕೃಷ್ಣ ರೈ ಉಪಸ್ಥಿತರಿದ್ದರು.

ನಮ್ಮಹಬ್ಬವು ಕನ್ನಡ ವಿಶ್ವವಿದ್ಯಾಲಯದ ವಿಶೇಷವಾಗಿದೆ. ನಮ್ಮಹಬ್ಬವು ಬೇರೆಯಾವುದೇ ವಿಶ್ವವಿದ್ಯಾಲಯಗಳಲ್ಲಿ ಆಚರಿಸುವುದಿಲ್ಲ.

೨೯. ಕನ್ನಡ ಸಂಸ್ಕೃತಿ ಬಹುತ್ವದ ನೆಲೆಗಳು

ಕನ್ನಡ ವಿಶ್ವವಿದ್ಯಾಲಯವು ಕನ್ನಡ ಸಂಸ್ಕೃತಿಯ ಬಹುತ್ವದ ನೆಲೆಗಳನ್ನು ಹುಡುಕುವ, ಗಟ್ಟಿಗೊಳಿಸುವ, ಹರಡುವ ಕಾಯಕವನ್ನು ನೋಂಪಿಯಂತೆ ನಡೆಸಿಕೊಂಡು ಬಂದಿದೆ. ಕನ್ನಡ ಸಂಸ್ಕೃತಿಯನ್ನು ಮತ್ತೆ ಮತ್ತೆ ನಿರ್ವಚನ ಮಾಡಿಕೊಳ್ಳುವ ಪ್ರಕ್ರಿಯೆಯಲ್ಲಿ ಕನ್ನಡ ವಿಶ್ವವಿದ್ಯಾಲಯವು ಒಂದು ಆಡುಂಬೊಲವಾಗಿ ಕಾರ್ಯ ನಿರ್ವಹಿಸುತ್ತಿದೆ. ನಮಗೆ ಗೊತ್ತಿರುವ ಸಂಸ್ಕೃತಿಯ ಅರ್ಥಗಳಾಚೆಗೆ ಅನೂಹ್ಯ ಲೋಕಗಳ ಕಡೆಗೆ ತನ್ನನ್ನು ಮತ್ತು ಕನ್ನಡಿಗರನ್ನು ಒಯ್ಯುವ ಪಯಣದ ದಾರಿಗಳನ್ನು ರೂಪಿಸಿದೆ.

ಕಳೆದ ವರ್ಷ ಡಿಸೆಂಬರ್ ೨೦೦೫ರಿಂದ ಇಂದಿನ ನುಡಿಹಬ್ಬದ ವರೆಗಿನ ಸುಮಾರು ಹನ್ನೊಂದವರೆ ತಿಂಗಳ ಅವಧಿಯಲ್ಲಿ ನಮ್ಮ ವಿಶ್ವವಿದ್ಯಾಲಯವು ಬಹುಮುಖಿಯಾಗಿ, ಭೌತಿಕವಾಗಿ ಮತ್ತು ಬೌದ್ಧಿಕವಾಗಿ ಬೆಳೆದಿದೆ ಮತ್ತು ವಿಸ್ತರಣಗೊಂಡಿದೆ. ಅವಕಾಶಗಳನ್ನು ಹೊಸತಾಗಿ ರೂಪಿಸುವ ಮತ್ತು ಒಳಗೊಳ್ಳುವ ಕೆಲಸಗಳು ಕನ್ನಡನಾಡಿನ ತುಂಬೆಲ್ಲ ಬಹುಬಗೆಗಳಲ್ಲಿ ನಡೆದಿವೆ.

ಕನ್ನಡ ವಿಶ್ವವಿದ್ಯಾಲಯದ ಎಲ್ಲಾ ಶೈಕ್ಷಣಿಕ ವಿಭಾಗಗಳಲ್ಲಿ ಅಧ್ಯಯನ, ಪ್ರಕಟಣೆ ಮತ್ತು ವಿಸ್ತರಣೆಯ ಚಟುವಟಿಕೆಗಳು ನಿರಂತರವಾಗಿ ವೈವಿಧ್ಯಮಯವಾಗಿ ಜನಮುಖಿಯಾಗಿ ನಡೆದಿವೆ. ವಿಚಾರಸಂಕಿರಣ, ಕಮ್ಮಟ, ತರಬೇತಿ ಶಿಬಿರ, ವಿಶೇಷ ಉಪನ್ಯಾಸ, ಸಮ್ಮೇಳನ, ವೈಯಕ್ತಿಕ ಮತ್ತು ಸಾಂಸ್ಥಿಕ ಸಂಶೋಧನ ಯೋಜನೆಗಳು ವರ್ಷದ ಉದ್ದಕ್ಕೂ ವಿಶೇಷವಾಗಿ ನಡೆದಿವೆ.

ಕನ್ನಡ ಭಾಷಾಧ್ಯಯನ ವಿಭಾಗವು ಸಾಂಸ್ಥಿಕ ಯೋಜನೆಯಡಿಯಲ್ಲಿ ಕನ್ನಡ ಉಪಭಾಷಾ ಪದಕೋಶವನ್ನು ನಿರ್ವಹಿಸುತ್ತಿದೆ. ಇದಲ್ಲದೆ ಭಾರತೀಯ ಭಾಷೆಗಳ ಕೇಂದ್ರ, ಸಂಸ್ಥೆ, ಮೈಸೂರು, ಭಾರತೀಯ ಭಾಷೆಗಳ ಭಾಷಿಕ ದತ್ತಾಂಶ ಒಕ್ಕೂಟದ ಸಹಯೋಗದಲ್ಲಿ ಸಹಜ ಭಾಷಾ ಸಂಸ್ಕರಣ ಪರಿಚಯ ಮತ್ತು ತರಬೇತಿ ಶಿಬಿರ'ವನ್ನು ಡಿಸೆಂಬರ್ ೧೪ ರಿಂದ ೨೩, ೨೦೧೧ರ ವರೆಗೆ ಹತ್ತು ದಿನಗಳ ಕಾಲ ನಡೆಸಿದೆ. 'ಕನ್ನಡ ಭಾಷೆ: ಅಧ್ಯಯನದ ಸಾಧ್ಯತೆಗಳು' ಎಂಬ ವಿಷಯದ ಮೇಲೆ ವಿಶೇಷ ಉಪನ್ಯಾಸಗಳನ್ನು ಮದ್ರಾಸ್ ವಿಶ್ವವಿದ್ಯಾಲಯದ ನಿವೃತ್ತ ಪ್ರಾಧ್ಯಾಪಕರೂ ಕನ್ನಡ ಭಾಷಾ ತಜ್ಞರೂ ಆದ ಡಾ.ಚೆ.ರಾಮಸ್ವಾಮಿ ಅವರಿಂದ ೨೭–೦೯೨೦೧೧ರಂದು ವಿಭಾಗದಲ್ಲಿ ನಡೆಸಲಾಯಿತು. ಬೆಂಗಳೂರು ವಿಶ್ವವಿದ್ಯಾಲಯದ ಸಹ ಪ್ರಾಧ್ಯಾಪಕರಾದ ಡಾ.ಡಿ.ಡೊಮಿನಿಕ್ ಅವರಿಂದ ದಿನಾಂಕ ೨೬–೧೧–೨೦೧೧ರಂದು ಸಂಶೋಧನಾ ವಿದ್ಯಾರ್ಥಿಗಳಿಗಾಗಿ ವಿಶೇಷ ಉಪನ್ಯಾಸ ಏರ್ಪಡಿಸಲಾಯಿತು.

ಕನ್ನಡ ಸಾಹಿತ್ಯ ಅಧ್ಯಯನ ವಿಭಾಗವು 'ಶಿಶುನಾಳ ಶರೀಫರ ತತ್ವಪದಗಳು: ಸಾಂಸ್ಕೃತಿಕ ಮುಖಾಮುಖಿ' ಎಂಬ ವಿಚಾರ ಸಂಕಿರಣವನ್ನು ಹಮ್ಮಿಕೊಳ್ಳಲಿದೆ. ಡಾ.ಬಿ.ಎಂ.ಪುಟ್ಟಯ್ಯ ಅವರು 'ಸಮಯ ಪರೀಕ್ಷೆ: ಸಾಂಸ್ಕೃತಿಕ ಮುಖಾಮುಖಿ', 'ಪಠ್ಯಪುಸ್ತಕಗಳ ಮತ್ತು ಸಾಹಿತ್ಯ ಸಂಶೋಧನೆ', ಡಾ.ರಹಮತ್ ತರೀಕೆರೆ ಅವರು 'ಶಾಕ್ತಪಂಥ ಮತ್ತು ಕರ್ನಾಟಕ ಸಂಸ್ಕೃತಿ', ಕನ್ನಡ ಸಾಹಿತ್ಯ ಅಧ್ಯಯನ: ಹೊಸ ಸಾಧ್ಯತೆಗಳು' ಎಂಬ ಯೋಜನೆಗಳನ್ನು ನಿರ್ವಹಿಸಿದ್ದಾರೆ. ಡಾ.ಅಮರೇಶ ನುಗಡೋಣಿ ಅವರು 'ಕಥೆ:ಸೃಷ್ಟಿಪ್ರಕ್ರಿಯೆ ಆಯಾಮಗಳು'ಎಂಬ ಯೋಜನೆಯನ್ನು ನಿರ್ವಹಿಸಿದ್ದಾರೆ. ಸಾಂಸ್ಥಿಕ ಯೋಜನೆಯಾಗಿ 'ಕವಿ ಸರ್ವಜ್ಞ ಸಮಗ್ರ ಸಾಹಿತ್ಯ ಪ್ರಕಟಣೆ' ಯೋಜನೆ ಪ್ರಗತಿಯಲ್ಲಿದೆ. ಡಾ.ಅಮರೇಶ ನುಗಡೋಣಿ ಅವರು 'ದಿನಕರ ದೇಸಾಯಿ ನೂರು: ನೆನಪು', 'ನುಡಿ ದಂದುಗ', ಎಂಬ ಕೃತಿಗಳನ್ನು ಡಾ.ರಹಮತ್ ತರೀಕೆರೆ ಅವರು 'ಕದಳಿ ಹೊಕ್ಕೂ ಬಂದೆ'(ಸುತ್ತಾಟದ ಕಥನಗಳು), 'ಮಾತು ತಲೆಯೆತ್ತುವ ಬಗೆ'(ಷಿನೇ ಆವೃತ್ತಿ)ಎಂಬ ಕೃತಿಗಳನ್ನು ರಚಿಸಿದ್ದಾರೆ. ಡಾ.ಬಿ.ಎಂ.ಪುಟ್ಟಯ್ಯ ಅವರಿಗೆ ಎಚ್. ನರಸಿಂಹಯ್ಯ ಪ್ರಶಸ್ತಿ ದೊರಕಿದೆ ಹಾಗೂ ಅವರು 'ಚಿಕ್ಕಮಗಳೂರು ತಾಲೂಕು ಷಿನೇ ಕನ್ನಡ ಸಾಹಿತ್ಯ ಸಮ್ಮೇಳನ'ದ ಅಧ್ಯಕ್ಷರಾಗಿದ್ದಾರೆ. ಡಾ. ರಹಮತ್ ತರೀಕೆರೆ ಅವರಿಗೆ 'ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ', ಮುಂಬೈ ಕರ್ನಾಟಕ ಸಂಘದ 'ಸುನೀತಿಳೆಟ್ಟಿ ಪ್ರಶಸ್ತಿಗಳು' ಲಭಿಸಿವೆ.

ಭಾಷಾಂತರ ಅಧ್ಯಯನ ವಿಭಾಗದ ಡಾ.ಕರೀಗೌಡ ಬೀಚನಹಳ್ಳಿ ಅವರು 'ಬಿ.ಎಂ.ಶ್ರೀ ಕನ್ನಡ ಏಕೀಕರಣ ಮತ್ತು ಭಾಷಾಂತರ', ಎಂಬ ಕೃತಿಯನ್ನು ಡಾ.ಎ.ಮೋಹನ ಕುಂಟಾರ್ ಅವರು 'ಮಾಧ್ಯಮ ಮತ್ತು ಭಾಷಾಂತರ', ಎಂಬ ಕೃತಿಯನ್ನು ಡಾ.ವಿಠಲರಾವ್ ಟಿ.ಗಾಯಕ್ವಾಡ್ 'ಕನ್ನಡ ಕೃತಿಗಳ ಅಂತರ್ ಸಂಸ್ಕೃತಿ ಅಧ್ಯಯನ' ಡಾ.ಕೆ.ಸಿ.ಶಿವಾರೆಡ್ಡಿ ಅವರ ಎರಡು 'ಕುವೆಂಪು ಸಮಗ್ರ ಸಂಪುಟಗಳು' ಪ್ರಕಟವಾಗಿದ್ದು, ಉಳಿದ ಮೂರು ಸಂಪುಟಗಳು ಮುದ್ರಣಕ್ಕೆ ಸಿದ್ಧವಾಗಿವೆ. ಅದಲ್ಲದೆ ಡಾ.ಕೆ.ಸಿ.ಶಿವಾರೆಡ್ಡಿ ಮತ್ತು ಡಾ.ಎಂ.ಉಷಾ ಅವರು 'ಶೇಕ್ಸ್‌ಪಿಯರ್ ಭಾಷಾಂತರ ಸಂಪುಟ' ಎಂಬ ಯೋಜನೆಯನ್ನು ಕೈಗೆತ್ತಿಕೊಂಡಿದ್ದಾರೆ. ಡಾ.ಉಷಾ ಅವರು 'ಭಾಷಾಂತರ ಕೈಪಿಡಿ' ಎಂಬ ಯೋಜನೆಯನ್ನು ನಿರ್ವಹಿಸುತ್ತಿದ್ದಾರೆ. ಸಾಂಸ್ಥಿಕ ಯೋಜನೆಯಡಿಯಲ್ಲಿ 'ದತ್ತ ಕಣಜ' ಯೋಜನೆ ಸಿದ್ಧಗೊಳ್ಳುತ್ತಿದೆ. ಡಾ.ಎ.ಮೋಹನ ಕುಂಟಾರ್ ಅವರಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, 'ಯಕ್ಷಗಾನ ಅಹಾರ್ಯ' ಕೃತಿಗೆ ಲಭಿಸಿದೆ.

ಹಸ್ತಪ್ರತಿಶಾಸ್ತ್ರ ವಿಭಾಗ ಕನ್ನಡ ಶಾಸ್ತ್ರೀಯ ಭಾಷೆ ಯೋಜನೆಯಡಿಯಲ್ಲಿ ಡಾ.ವೀರೇಶ ಬಡಿಗೇರ ಅವರು 'ಕನ್ನಡ ಮೋಡಿಲಿಪಿ: ಸಂರಚನೆ ಮತ್ತು ಸಂವರ್ಧನೆ' ಎಂಬ ಯೋಜನೆಯನ್ನು ಪೂರೈಸಿ ಪ್ರಕಟಿಸಿದ್ದಾರೆ. ಹಾಗೂ ಹಸ್ತಪ್ರತಿ ಸೂಚಿ ಸಂಪುಟ ೫ನ್ನು ಪೂರೈಸಿ ಪ್ರಕಟಣೆಗೆ ನೀಡಿದ್ದಾರೆ. ಅಲ್ಲದೆ ನಾಡೋಜ ಮಾಲೆಯಲ್ಲಿ 'ಡಾ.ಚಂದ್ರಶೇಖರ ಕಂಬಾರರ' ಕುರಿತು ಪುಸ್ತಕ ಪ್ರಕಟಿಸಿದ್ದಾರೆ. ವೈಯಕ್ತಿಕ ಯೋಜನೆ ಅಡಿಯಲ್ಲಿ 'ವೀರಭದ್ರ ಕಲ್ಯಾಣ' ಯೋಜನೆಯನ್ನು ನಿರ್ವಹಿಸುತ್ತಿದ್ದಾರೆ. ಡಾ.ಎಫ್.ಟಿ. ಹಳ್ಳಿಕೇರಿ ಅವರು 'ಲೌಕಿಕ ಶಾಸ್ತ್ರಸಾಹಿತ್ಯ: ಸರ್ವೇಕ್ಷಣೆ ಮತ್ತು ದಾಖಲೀಕರಣ' ಎಂಬ ಯೋಜನೆಯನ್ನು, ಡಾ.ಕೆ.ರವೀಂದ್ರನಾಥ ಅವರು 'ಹಸ್ತಪ್ರತಿಗಳ ಮುಖೇನ ಪ್ರಾಚೀನ ಕನ್ನಡಿಗರ ಬದುಕು'ಎಂಬ ಯೋಜನೆಯನ್ನು ನಿರ್ವಹಿಸಿದ್ದಾರೆ. ಸಾಂಸ್ಥಿಕ ಯೋಜನೆಯಾಗಿ 'ಹಸ್ತಪ್ರತಿ ಸಂಗ್ರಹ'ವನ್ನು ಹಮ್ಮಿಕೊಂಡಿದ್ದಾರೆ. ಇದೇ ವಿಭಾಗವು ವಿಚಾರ ಸಂಕಿರಣದ ಮಾಲೆಯಡಿಯಲ್ಲಿ ಮೈಸೂರಿನಲ್ಲಿ 'ಅಖಿಲ ಕರ್ನಾಟಕ ಹಸ್ತಪ್ರತಿ ಸಮ್ಮೇಳನ', 'ಗುಳೇದಗುಡ್ಡದಲ್ಲಿ ಹಸ್ತಪ್ರತಿ ತರಬೇತಿ ಶಿಬಿರ', ಮುಂಡರಗಿಯಲ್ಲಿ 'ಹಳಗನ್ನಡ ಸಾಹಿತ್ಯ ಬೋಧನ ಶಿಬಿರ', 'ಬಿಜಾಪುರದಲ್ಲಿ ಐತಿಹಾಸಿಕ ಪರಂಪರೆ ಉಳಿಸಿ ಸಪ್ತಾಹ'ಗಳನ್ನು ನಡೆಸಿಕೊಟ್ಟಿದೆ. ಡಾ.ವೀರೇಶ ಬಡಿಗೇರ ಅವರಿಗೆ 'ಸಂಸ್ಕೃತಿ ಸಂಕಥನ' ಕೃತಿಗೆ ಈ ವರ್ಷದ ಗುಲಬರ್ಗಾ ವಿಶ್ವವಿದ್ಯಾಲಯದ ಪ್ರಸಾರಾಂಗವು ನೀಡುವ 'ರಾಜ್ಯೋತ್ಸವ ಕೃತಿ ಪ್ರಶಸ್ತಿ', ಬೆಂಗಳೂರಿನ 'ಸ್ನೇಹಸೇತು ಸಾಹಿತ್ಯ ಪ್ರಶಸ್ತಿ', ಹಾರೂಗೇರಿಯ 'ಆಜೂರು ಪುಸ್ತಕ ಪ್ರಶಸ್ತಿ', ಎಂಡಿಗೇರಿಯ 'ಶ್ರೇಷ್ಠ ಜಾನಪದ ಸಂಶೋಧನ ಪ್ರಶಸ್ತಿ' ಬಂದಿರುವುದು ಹೆಮ್ಮೆಯ ಸಂಗತಿಯಾಗಿದೆ. ಡಾ.ಎಸ್.ಎಸ್.ಅಂಗಡಿ ಅವರಿಗೆ 'ದಾಸ ಸಾಹಿತ್ಯ ಭಾಷೆ' ಕೃತಿಗೆ ಕನ್ನಡ ಸಾಹಿತ್ಯ ಪರಿಷತ್ತು ನೀಡುವ 'ಅಸುಂಡಿ ಹುದ್ದಾರ ಕೃಷ್ಣರಾವ್ ಸ್ಮಾರಕ ಪ್ರಶಸ್ತಿ' ದೊರತಿದೆ. ಡಾ.ಕೆ.ರವೀಂದ್ರನಾಥ ಅವರು ಬಸವ ಸಮಿತಿ ಪ್ರಕಟಣಾ ವಿಭಾಗದ ಸಮಿತಿ ಸದಸ್ಯ ಹಾಗೂ ಕರ್ನಾಟಕ ರಾಜ್ಯ ಪತ್ರಗಾರ ಇಲಾಖೆಯ ಪ್ರಾಚೀನ ಪ್ರಕಟಣಾ ಸದಸ್ಯರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

ಡಾ.ವೀರೇಶ ಬಡಿಗೇರ ಅವರು ಯೋಜನಾ ಸಂಯೋಜಕರಾದ ಹಸ್ತಪ್ರತಿ ಸಂಪನ್ಮೂಲ ಹಾಗೂ ಸಂರಕ್ಷಣಾ ಕೇಂದ್ರದ ವತಿಯಿಂದ ಒಂದು ಲಕ್ಷ ಇಪ್ಪತ್ತು ಸಾವಿರ ಹಸ್ತಪ್ರತಿಗಳನ್ನು ದಾಖಲೀಕರಣಕ್ಕೆ ಒಳಪಡಿಸಲಾಗಿದೆ. ೨೦೦೪ರಿಂದ ಭಾರತ ಸರಕಾರದ ಪ್ರವಾಸೋದ್ಯಮ ಹಾಗೂ ಸಂಸ್ಕೃತಿ ಇಲಾಖೆಯ ಅಂಗ ಸಂಸ್ಥೆಯಾದ ನ್ಯಾಷನಲ್ ಮಿಷನ್ ಫಾರ್ ಮ್ಯಾನ್ಯುಸ್ಕ್ರಿಪ್ಟ್ಸ್ ಇವರು ಹಸ್ತಪ್ರತಿ ಸಂಪನ್ಮೂಲ ಕೇಂದ್ರವನ್ನು ನೀಡಿದ್ದರು. ಕೇಂದ್ರದ ಸಕಾರಾತ್ಮಕ ಪ್ರಗತಿಯನ್ನು ಗಮನಿಸಿದ ಸದರಿ ಸಂಸ್ಥೆ ೨೦೧೧ನೇ ಸಾಲಿನಲ್ಲಿ ಹಸ್ತಪ್ರತಿ ಸಂಪನ್ಮೂಲ ಕೇಂದ್ರವನ್ನು 'ಹಸ್ತಪ್ರತಿ ಸಂರಕ್ಷಣಾ ಕೇಂದ್ರ'ವೆಂದು ಮಾನ್ಯ ಮಾಡಿರುವುದು ಗಮನಾರ್ಹ. ಉತ್ತರ ಕರ್ನಾಟಕದ ೧೧ ಜಿಲ್ಲೆಗಳಲ್ಲಿರುವ ಹಸ್ತಪ್ರತಿಗಳ ಸಂರಕ್ಷಣೆ ಕೇಂದ್ರದ ಉದ್ದೇಶವಾಗಿದೆ.

ಕೇಂದ್ರದ ವತಿಯಿಂದ ಸೆಪ್ಟೆಂಬರ್ ೧೩ ರಿಂದ ೨೭ರ ವರೆಗೆ 15days Basic Lavel Monuscriptology and Paleography Workshopನ್ನು ಯಶಸ್ವಿಯಾಗಿ ನಡೆಸಲಾಯಿತು. ಈ ಕಾರ್ಯಾಗಾರದ ಉದ್ಘಾಟನೆಯನ್ನು ಎನ್.ಎಂ.ಎಂ.ನ ನಿರ್ದೇಶಕರಾದ ಪ್ರೊ.ದೀಪ್ತಿ ತ್ರಿಪಾಠಿಯವರು ನೆರವೇರಿಸಿದರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರಾದ ಸನ್ಮಾನ್ಯ ಶ್ರೀ ಗೋವಿಂದ ಎಂ.ಕಾರಜೋಳ, ಡಾ.ವೀರೇಶ ಬಡಿಗೇರ ಅವರು ಬರೆದ 'ಕನ್ನಡ ಮೋಡಿಲಿಪಿ: ಸಂರಚನೆ ಹಾಗೂ ಸಂವರ್ಧನೆ' ಕೃತಿಯನ್ನು ಬಿಡುಗಡೆ ಮಾಡಿದರು. ವಿಧಾನಪರಿಷತ್ ಸದಸ್ಯರಾದ ಪ್ರೊ.ಕೃಷ್ಣಭಟ್ ಹಸ್ತಪ್ರತಿ ಪ್ರಚಾರ ಸಾಮಗ್ರಿಗಳನ್ನು ಬಿಡುಗಡೆ ಮಾಡಿದರು. ಕಾರ್ಯಾಗಾರದಲ್ಲಿ ಒಟ್ಟು ೫೨ಜನ ಸಂಪನ್ಮೂಲ ವ್ಯಕ್ತಿಗಳ ಹಾಗೂ ಕರ್ನಾಟಕದ ವಿವಿಧ ಭಾಗದ ೧೧೦ ವಿದ್ಯಾರ್ಥಿಗಳು ಭಾವಹಿಸಿದ್ದರು.

ದ್ರಾವಿಡ ಸಂಸ್ಕೃತಿ ಅಧ್ಯಯನ ವಿಭಾಗವು ಸಾಂಸ್ಥಿಕ ಯೋಜನೆಯಾಗಿ 'ತೆಲುಗು ಸಾಹಿತ್ಯ ಚರಿತ್ರೆ', 'ಮಲಯಾಳಂ ಸಾಹಿತ್ಯ ಚರಿತ್ರೆ'ಯನ್ನು ನಿರ್ವಹಿಸುತ್ತಿದೆ. 'ತೆಲುಗು ಸಾಹಿತ್ಯ ಚರಿತ್ರೆ: ಅನುವಾದ ಕಮ್ಮಟ ಮತ್ತು ಮಲಯಾಳಂ ಸಾಹಿತ್ಯ ಚರಿತ್ರೆ ಸಿದ್ಧತಾ ಕಮ್ಮಟಗಳನ್ನು ಮುಕ್ತಾಯಗೊಳಿಸಿದೆ. ವೈ.ನಾಗೇಶಶಾಸ್ತ್ರಿ ದತ್ತಿನಿಧಿ ಉಪನ್ಯಾಸವನ್ನು ಕೂಡ ನಡೆಸಿಕೊಟ್ಟಿದೆ. ವಿಶೇಷ ಉಪನ್ಯಾಸ ಮಾಲಿಕೆಯಡಿಯಲ್ಲಿ ಡಾ.ಎನ್.ಎಸ್. ತಾರಾನಾಥ ಅವರಿಂದ 'ಸಂಶೋಧನೆಯ ವಿಧಿವಿಧಾನ', ಪ್ರೊ.ಆರ್.ಶೇಷಶಾಸ್ತ್ರಿ ಅವರಿಂದ ಸಂಶೋಧನ ವಿಧಿವಿಧಾನ', ಡಾ.ಕೆ.ಕಮಲಾಕ್ಷ ಅವರಿಂದ 'ಸಂಶೋಧನ ವಿಧಿವಿಧಾನ', ಡಾ.ಬಸವರಾಜ ಮಲಶೆಟ್ಟಿ ಅವರಿಂದ 'ಸಂಶೋಧನ ವಿಧಿವಿಧಾನ'ಗಳನ್ನು ಕುರಿತು ಉಪನ್ಯಾಸ ನಡೆಸಲಾಗಿದೆ. ಡಾ.ಎ.ಸುಬ್ಬಣ್ಣ ರೈ ಅವರು 'ಬ್ಯಾರಿ ಭಾಷಾ ನಿಘಂಟು', ಡಾ.ಮಾಧವ ಪೆರಾಜೆ ಅವರು 'ಮಹಾಕವಿ ಪಂಪ ಸಾಹಿತ್ಯ ಸಂಗಾತಿ', ಶ್ರೀ ಸಿ.ವೆಂಕಟೇಶ 'ರಾವಣಾಚರಣೆ', ಡಾ.ಸುಚೇತಾ ನವರತ್ನ ಅವರು 'ದ್ರಾವಿಡ ಸಂಶೋಧನೆಗಳು' ಎಂಬ ಯೋಜನೆಗಳನ್ನು ಕೈಗೆತ್ತಿಕೊಂಡಿದ್ದಾರೆ. ಇದಲ್ಲದೆ ಈ ವಿಭಾಗಕ್ಕೆ ಪ್ರೊ.ಎಂ.ಎ.ರೆಹಮಾನ್, ಡಾ.ಎ.ಎಂ.ಶ್ರೀಧರ, ಡಾ.ಕೆ.ಕಮಲಾಕ್ಷ, ಡಾ. ಲಿಸ್ಸಿ ಮ್ಯಾಥ್ಯೂ, ಡಾ.ಕೆ.ಎಂ.ಅನಿಲ್ ಎಂಬ ವಿದ್ವಾಂಸರು ಭೇಟಿ ನೀಡಿದ್ದಾರೆ.

ಮಹಿಳಾ ಅಧ್ಯಯನ ವಿಭಾಗವು ಮೂರು ದಿನಗಳ 'ವಿಜ್ಞಾನ ಕಮ್ಮಟ'ವನ್ನು ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತಿನ ಸಹಯೋಗದಲ್ಲಿ ಕಳೆದ ತಿಂಗಳು ನಡೆಸಿಕೊಟ್ಟಿದೆ. ಅಲ್ಲಂ ಸುಮಂಗಳಮ್ಮ ದತ್ತಿನಿಧಿಯಡಿಯಲ್ಲಿ 'ಸಂಶೋಧನೆಯಲ್ಲಿ ಸಮಸ್ಯೀಕರಣ ಎಂಬ ವಿಷಯದ ಮೇಲೆ ವಿಶೇಷ ಉಪನ್ಯಾಸವನ್ನು ನಡೆಸಿಕೊಟ್ಟಿದೆ.

ಮಹಿಳಾ ಅಧ್ಯಯನ ಕೇಂದ್ರವು ಉತ್ತರ ಕರ್ನಾಟಕದ ನೆರೆ ಹಾವಳಿ ಪೀಡಿತ ಪ್ರದೇಶಗಳಿಗೆ ಭೇಟಿ ನೀಡಿ ವರದಿಯನ್ನು ಸಿದ್ಧಪಡಿಸಿ ಸಲ್ಲಿಸಿದೆ. 'ಜಾಗತೀಕರಣ: ಹೆಣ್ಣಿನ ದೇಹ ಲೈಂಗಿಕತೆ' ಎಂಬ ವಿಚಾರ ಸಂಕಿರಣವನ್ನು ಹಮ್ಮಿಕೊಂಡು ಯಶಸ್ವಿಗೊಳಿಸಿದೆ. 'ಹದಿ ಹರೆಯದ ಹೆಣ್ಣು ಮಕ್ಕಳ ಆರೋಗ್ಯ ಜಾಗೃತಿ' ಶಿಬಿರವನ್ನು ಹಮ್ಮಿಕೊಳ್ಳಲಾಗಿತ್ತು.

ಚರಿತ್ರೆ ವಿಭಾಗವು 'ಜಯಚಾಮರಾಜ ಒಡೆಯರ್ ಕಾಲದ ಮೈಸೂರು ಸಂಸ್ಥಾನ' ಎಂಬ ವಿಷಯದ ಮೇಲೆ ಎರಡು ದಿನಗಳ ವಿಚಾರ ಸಂಕಿರಣವನ್ನು ಬೆಂಗಳೂರಿನಲ್ಲಿ ಹಮ್ಮಿಕೊಂಡಿದೆ. 'ವಿಜಯನಗರ ಕಲೆ ಮತ್ತು ವಾಸ್ತುಶಿಲ್ಪ' ಎಂಬ ವಿಷಯದ ಮೇಲೆ ದತ್ತಿ ಉಪನ್ಯಾಸವನ್ನು ಬಾಗಲಕೋಟೆಯಲ್ಲಿ ಹಮ್ಮಿಕೊಂಡು ಮುಕ್ತಾಯಗೊಳಿಸಲಾಗಿದೆ. ಡಾ.ಟಿ.ಪಿ.ವಿಜಯ್ ಪ್ರಧಾನ ಸಂಪಾದಕರಾಗಿ, ಡಾ.ಕೆ.ಮೋಹನ್‌ಕೃಷ್ಣ ರೈ, ಡಾ.ಎನ್. ಚಿನ್ನಸ್ವಾಮಿ, ಡಾ.ವಿರೂಪಾಕ್ಷಿ ಪೂಜಾರಹಳ್ಳಿ ಅವರುಗಳು ಸಂಪುಟ ಸಂಪಾದಕರಾಗಿ ೮ ಚರಿತ್ರೆ ಸಂಪುಟಗಳನ್ನು ಸಿದ್ಧಪಡಿಸಿ ಮುದ್ರಣಗೊಂಡಿವೆ. ಶಾಸ್ತ್ರೀಯ ಭಾಷೆ ಯೋಜನೆಯಡಿಯಲ್ಲಿ ಡಾ.ತಂಬಂಡ ಪೂಣಚ್ಚ ವಿಜಯ್ ಅವರು 'ಪಶ್ಚಿಮಘಟ್ಟ ಪ್ರದೇಶಗಳ ಜನರ ಸಾಮರಸ್ಯ ಮತ್ತು ಸಂಘರ್ಷಗಳು', ಡಾ.ಕೆ.ಮೋಹನ್‌ಕೃಷ್ಣ ರೈ ಅವರು 'ತುಳುನಾಡು ಕನ್ನಡ ನುಡಿ(ತುಳು ಕರ್ನಾಟಕದ ನಾಡು–ನುಡು ಚಿಂತನೆ)', ಡಾ.ವಿರೂಪಾಕ್ಷಿ ಪೂಜಾರಹಳ್ಳಿ ಅವರು 'ಕನ್ನಡಿಗರ ಚಾರಿತ್ರಿಕ ಪ್ರಜ್ಞೆ', ಡಾ.ಚಿನ್ನಸ್ವಾಮಿ ಸೋಸಲೆ ಅವರು 'ದಲಿತರ ಬದುಕು–ಮೆಲಕು(ಗ್ರಾಮೀಣ ದಲಿತರ, ಸಂವೇದನೆ ನೆಲೆಯ ಅಧ್ಯಯನ)' ಎಂಬ ಯೋಜನೆಗಳನ್ನು ಕೈಗೊಂಡು ಮುಕ್ತಾಯಗೊಳಿಸಿದ್ದಾರೆ. ಡಾ.ಚಿನ್ನಸ್ವಾಮಿ ಸೋಸಲೆ ಅವರ ಸಂಪಾದಕತ್ವದಲ್ಲಿ 'ದಿವಾನ್‌ಸರ್ ಮಿರ್ಜಾ ಎಂ. ಇಸ್ಮಾಯಿಲ್ ಕಾಲದ ಮೈಸೂರು ಸಂಸ್ಥಾನ' ಕೃತಿ ಪ್ರಕಟಗೊಂಡಿದೆ. ವಿಭಾಗಕ್ಕೆ ಪ್ರೊ.ಎಸ್.ಶೆಟ್ಟರ್, ಪ್ರೊ.ಸುರೇಂದ್ರರಾವ್, ಪ್ರೊ.ಎಸ್.ಚಂದ್ರಶೇಖರ್, ಡಾ.ಎಚ್.ಎಸ್.ಗೋಪಾಲರಾವ್ ಎಂಬ ಚರಿತ್ರೆ ವಿದ್ವಾಂಸರು ಭೇಟಿ ನೀಡಿ ಮಾರ್ಗದರ್ಶನ ನೀಡಿದ್ದಾರೆ.

ಪ್ರಾಚೀನ ಮತ್ತು ಪುರಾತತ್ವ ಅಧ್ಯಯನ ವಿಭಾವು 'ಪುರಾತತ್ವ ಮತ್ತು ಇತರ ವಿಜ್ಞಾನಗಳ ಕಾರ್ಯಾಗಾರ'ವನ್ನು ಸುತ್ತೂರಿನಲ್ಲಿ 'ಸ್ಥಳೀಯ ಚರಿತ್ರೆ ಮತ್ತು ಪುರಾತತ್ವ ಮಾಲೆ' ವಿಚಾರ ಸಂಕಿರಣವನ್ನು ಬೆಂಗಳೂರಿನಲ್ಲಿ 'ಪರಂಪರೆ ಕೂಟ' ಕಮ್ಮಟವನ್ನು ಹಂಪಿಯಲ್ಲಿ ಹಾಗೂ 'ಪಾರಂಪರಿಕ ನಡಿಗೆ' ಹಂಪಿಯಲ್ಲಿ ಹಮ್ಮಿಕೊಂಡು ಯಶಸ್ವಿಗೊಳಿಸಿದೆ. ಇದೇ ವಿಭಾಗವು 'ನಾಗಮಂಗಲ', 'ಕುಮ್ಮಟದುರ್ಗದ ಅರಸರು', 'ಬ್ರಹ್ಮಗಿರಿ', 'ಜಗಳೂರು', 'ಬಸವನ ಬಾಗೇವಾಡಿ', ಕರ್ನಾಟಕದ ಪ್ರಮುಖ ನದಿಗಳು ಎಂಬ ಯೋಜನೆಯನ್ನು ಸಿದ್ಧಪಡಿಸಿ ಪ್ರಕಟಿಸಿದೆ. ಡಾ.ಸಿ.ಮಹದೇವ ಅವರು ಶ್ರೀರಂಗಪಟ್ಟಣ ತಾಲ್ಲೂಕು ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರಾಗಿದ್ದಾರೆ. ಡಾ.ವಾಸುದೇವ ಬಡಿಗೇರ ಅವರಿಗೆ ವರವಿ ಶ್ರೀಕ್ಷೇತ್ರದಿಂದ ಗೌರವ ಸನ್ಮಾನ ಲಭಿಸಿದೆ. ಇದೇ ವಿಭಾಗದ ಜೊತೆ ಕರ್ನಾಟಕ ಸರಕಾರದ ಪ್ರಾಚ್ಯ ವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು ಇವರ ಸಹಯೋಗದೊಂದಿಗೆ ಪ್ರತಿ ವರ್ಷವು ಪುರಾತತ್ವ ವಿಶೇಷ ಕಾರ್ಯಾಗಾರವನ್ನು ಹಮ್ಮಿಕೊಂಡು ಬಂದಿದೆ.

ಶಾಸನಶಾಸ್ತ್ರ ವಿಭಾಗವು 'ಶಾಸನ ಅಧ್ಯಯನ ತರಬೇತಿ' ಕಮ್ಮಟವನ್ನು ಗೇರುಸೊಪ್ಪೆಯಲ್ಲಿ ರಾಣಿ ಚೆನ್ನ ಭೈರಾದೇವಿ ದಿಗಂಬರ ಜೈನ ಟ್ರಸ್ಟ್ ಕ್ಷೇಮಪುರ ಅವರ ಸಹಯೋಗದಲ್ಲಿ ಹಮ್ಮಿಕೊಂಡಿತ್ತು. 'ಶಾಸನಗಳಲ್ಲಿ ಮೌಲ್ಯಗಳ ಪರಿಕಲ್ಪನೆ ಮತ್ತು ಪ್ರತಿನಿಧೀಕರಣ' ಎಂಬ ವಿಚಾರ ಸಂಕಿರಣವನ್ನು ಬರುವ ಏಪ್ರಿಲ್‌ನಲ್ಲಿ ದಾವಣಗೆರೆಯಲ್ಲಿ ಹಮ್ಮಿಕೊಳ್ಳಲಾಗಿದೆ. ಡಾ.ಕೆ.ಜಿ.ಭಟ್‌ಸೂರಿ ಅವರು 'ಹಾಡುವಳ್ಳಿ ಜೈನ ಶಾಸನ ವಾಸ್ತು ಮತ್ತು ಮೂರ್ತಿಶಿಲ್ಪ', ಡಾ.ಡಿ.ವಿ.ಪರಮಶಿವಮೂರ್ತಿ ಅವರು 'ತುರುಗೋಳು ಸಂಕಥನ', ಡಾ.ಎಂ.ಕೊಟ್ರೇಶ್ ಅವರು 'ಬಳ್ಳಾರಿ ಜಿಲ್ಲೆಯ ಕೋಟೆಗಳು' ಎಂಬ ಕೃತಿಗಳನ್ನು ಹೊರತಂದಿದ್ದಾರೆ. 'ವಿಜಾಪುರ ಜಿಲ್ಲಾ ಶಾಸನ ಸಂಪುಟ ೧೦' ಯೋಜನೆಯನ್ನು ಡಾ.ದೇವರಕೊಂಡಾರೆಡ್ಡಿ, ಡಾ.ಕೆ.ಜಿ.ಭಟ್‌ಸೂರಿ, ಡಾ.ಕಲವೀರ ಮನ್ನಾಚಾರ್, ಡಾ.ಡಿ.ವಿ.ಪರಮಶಿವಮೂರ್ತಿ ಅವರುಗಳು ಕೈಗೊಂಡು ಪೂರ್ಣಗೊಳಿಸಿದ್ದಾರೆ. ಸಾಂಸ್ಥಿಕ ಯೋಜನೆಯಡಿಯಲ್ಲಿ ಡಾ.ಕೆ.ಜಿ.ಭಟ್‌ಸೂರಿ ಅವರ 'ಧಾರವಾಡ ಜಿಲ್ಲಾ ಶಾಸನ ಸಂಪುಟ' ಮುದ್ರಣ ಹಂತದಲ್ಲಿದೆ. ಡಾ.ಡಿ.ವಿ. ಪರಮಶಿವಮೂರ್ತಿ ಅವರ 'ಗದಗ ಜಿಲ್ಲಾ ಶಾಸನ ಸಂಪುಟ' ಮುಕ್ತಾಯ ಹಂತದಲ್ಲಿದೆ. ಡಾ.ಎಂ.ಕೊಟ್ರೇಶ್ ಮತ್ತು ಡಾ.ದೇವರಕೊಂಡಾರೆಡ್ಡಿ ಅವರ 'ಹಾವೇರಿ ಜಿಲ್ಲಾ ಶಾಸನ ಸಂಪುಟ' ಪ್ರಗತಿಯಲ್ಲಿದೆ. ಡಾ.ಕಲವೀರ ಮನ್ನಾಚಾರ 'ಬೆಳಗಾಂವ ಜಿಲ್ಲಾ ಶಾಸನ ಸಂಪುಟ' ಯೋಜನೆಯನ್ನು ಕೈಗೆತ್ತಿಕೊಂಡಿದ್ದಾರೆ. ಡಾ.ಕೆ.ಜಿ.ಭಟ್‌ಸೂರಿ ಅವರ 'ಮಂಜಗುಣಿ ಒಂದು ಐತಿಹಾಸಿಕ ಅಧ್ಯಯನ' ವೈಯಕ್ತಿಕ ಯೋಜನೆ ಪ್ರಗತಿಯಲ್ಲಿದೆ. ಶಾಸ್ತ್ರೀಯ ಭಾಷೆ ಯೋಜನೆಯಡಿ ಯಲ್ಲಿ ಡಾ.ಡಿ.ವಿ. ಪರಮಶಿವಮೂರ್ತಿ ಅವರ 'ಸಂಗಮರ ಶಾಸನಗಳು' ಮುದ್ರಣ ಹಂತದಲ್ಲಿದೆ. ಡಾ.ಕಲವೀರ ಮನ್ನಾಚಾರ ಅವರ 'ರಟ್ಟಿಹಳ್ಳಿ ಶಾಸನಗಳು ಒಂದು ಅಧ್ಯಯನ' ಪ್ರಗತಿಯಲ್ಲಿದೆ. ಡಾ.ಎಂ.ಕೊಟ್ರೇಶ್ ಅವರ 'ಅಚ್ಚುತರಾಯನ ಶಾಸನಗಳು' ಪ್ರಗತಿಯಲ್ಲಿದೆ.

ಅಭಿವೃದ್ಧಿ ಅಧ್ಯಯನ ವಿಭಾಗ ಡಾ.ಟಿ.ಆರ್.ಚಂದ್ರಶೇಖರ, ಡಾ.ಎಂ. ಚಂದ್ರಪೂಜಾರಿ, ಡಾ.ಸಿದ್ಧಗಂಗಮ್ಮ, ಡಾ.ಜನಾರ್ದನ ಅವರುಗಳು ಸಾಂಸ್ಥಿಕವಾಗಿ 'ಜಿಲ್ಲಾ ಪಂಚಾಯತ್, ಗದಗ' ಯೋಜನೆಯನ್ನು ನಿರ್ವಹಿಸುತ್ತಿದ್ದಾರೆ. ಡಾ.ಬಿ.ಶೇಷಾದ್ರಿ ಮತ್ತು ಶ್ರೀ ಮೋಹನ್ ಅವರುಗಳು ವಿಭಾಗಕ್ಕೆ ಭೇಟಿ ನೀಡಿ ಮಾರ್ಗದರ್ಶನ ನೀಡಿದ್ದಾರೆ. ಡಾ.ಟಿ.ಆರ್. ಚಂದ್ರಶೇಖರ್ ಅವರು 'ವಿಜಾಪುರ ಜಿಲ್ಲೆ ಅಭಿವೃದ್ಧಿ ಮತ್ತು ದುಸ್ಥಿತಿ: ಒಂದು ನೋಟ', 'ಹಕ್ಕು ಮತ್ತು ಹಂಗು: ಅಭಿವೃದ್ಧಿ ಅಧ್ಯಯನ ಪ್ರಬಂಧಗಳು', 'ಕರ್ನಾಟಕದಲ್ಲಿ ಸಾಕ್ಷರತೆಯ ಲಿಂಗಸಂಬಂಧಿ ಆಯಾಮಗಳು', 'ಲಿಂಗ ಸಂಬಂಧಗಳು ಮತ್ತು ಅಭಿವೃದ್ಧಿ', 'ವಿಜಾಪುರ ಜಿಲ್ಲಾ ಮಾನವ ಅಭಿವೃದ್ಧಿ ವರದಿ', 'Bijapur District Human Development Report-2008' ಎಂಬ ಯೋಜನೆಗಳು ಪ್ರಕಟಗೊಂಡಿವೆ. ಡಾ.ಚಂದ್ರಪೂಜಾರಿ ಅವರ 'ಇನ್‌ಸ್ಟ್ರೂಲಾಯಿಜೇಶನ್ ಡಿಸೆಂಟ್ರಲಾಯಿಜೇಶನ್ ಮತ್ತು ಡೆವಲಪ್‌ಮೆಂಟ್', 'ಯಾಕೀಗ ಭೂಮಿ ಪ್ರಶ್ನೆ', 'ಕರ್ನಾಟಕದ ಪಂಚವಾರ್ಷಿಕ ಯೋಜನೆಗಳು' ಪ್ರಕಟಗೊಂಡಿವೆ. ಡಾ.ಎ.ಶ್ರೀಧರ ಅವರ 'ಯಾರಿಗೆ ಪ್ರಜಾಪ್ರಭುತ್ವ' ಪ್ರಕಟಗೊಂಡಿದೆ. ಡಾ.ಎಚ್.ಡಿ.ಪ್ರಶಾಂತ್ ಅವರ '8th Karnataka Sociology Conference Procedings', 'ಶೈಕ್ಷಣಿಕ ಪ್ರೇರಕಾಂಶಗಳ ಸಾಮಾಜಿಕ ಆಯಾಮಗಳು'ಎಂಬ ಯೋಜನೆ ಪ್ರಕಟಗೊಂಡಿದೆ. 'ಡಿಪ್ಲೊಮಾ ಇನ್ ಪಂಚಾಯತ್ ರಾಜ್ ಸ್ಟಡೀಸ್' ಕೋರ್ಸ್‌ನ್ನು ನಡೆಸಲು ಒಡಂಬಡಿಕೆ ಮಾಡಿಕೊಳ್ಳಲಾಗಿದೆ. ಡಾ. ಜನಾರ್ದನ್ ಅವರ 'ಅಂಗನವಾಡಿ ಕೇಂದ್ರಗಳು ಮತ್ತು ಗ್ರಾಮೀಣಾಭಿವೃದ್ಧಿ' ಎಂಬ ಯೋಜನೆ ಪ್ರಕಟಗೊಂಡಿದೆ.

ಬುಡಕಟ್ಟು ಅಧ್ಯಯನ ವಿಭಾಗವು ವೈಯಕ್ತಿಕ ಯೋಜನೆಯಡಿಯಲ್ಲಿ ಡಾ.ಹಿ.ಚಿ. ಬೋರಲಿಂಗಯ್ಯ ಅವರು 'ಕರ್ನಾಟಕದ ಬುಡಕಟ್ಟು ಮತ್ತು ಜನಪದ ಮಹಾಕಾವ್ಯಗಳ ತಾತ್ವಿಕ ವಿವೇಚನೆ', ಡಾ.ಕೇಶವನ್ ಪ್ರಸಾದ್ ಅವರು 'ಅರಣ್ಯ ಕಾಯ್ದೆಯ ಅನುಷ್ಠಾನದ ಸಾಧಕ ಬಾಧಕಗಳು', ಡಾ.ಚಲುವರಾಜು ಅವರು 'ಅದಿವಾಸಿಗಳ ದೈವ ದಂಡಿನ ದುರುಗಮ್ಮ', ಡಾ.ಗಂಗಾಧರ ದೈವಜ್ಞ ಅವರು 'ದೀವರ ಪಾರಂಪರಿಕ ಕೃಷಿ ಮತ್ತು ಆಧುನಿಕತೆ, ಡಾ.ಎ.ಎಸ್.ಪ್ರಭಾಕರ ಅವರು ಸಮುದಾಯ ಅಧ್ಯಯನಗಳ ತಾತ್ವಿಕ ವಿವೇಚನೆ'ಗಳನ್ನು ನಿರ್ವಹಿಸಿದ್ದಾರೆ. ಇದೇ ವಿಭಾಗದಿಂದ ಎರಡು ದಿನಗಳ ಕಾಲ ಕುಪ್ಪಳಿಯಲ್ಲಿ 'ಕೊರಗ ಬುಡಕಟ್ಟು ಯುವಕರಿಗೆ ಕಾರ್ಯಾಗಾರವನ್ನು ಏರ್ಪಡಿಸಲಾಗಿತ್ತು. ಸಾಂಸ್ಥಿಕ ಯೋಜನೆಯಾಗಿ ಯುಜಿಸಿ ಧನಸಹಾಯ ಆಯೋಗದವತಿಯಿಂದ ಅರಣ್ಯ ಮತ್ತು ಬುಡಕಟ್ಟು ಸಮುದಾಯಗಳ ಜಾನಪದ ಎಂಬ ಯೋಜನೆಯನ್ನು ನಿರ್ವಹಿಸಲಾಗುತ್ತಿದೆ. ಡಾ.ಹಿ.ಚಿ.ಬೋರಲಿಂಗಯ್ಯ ಅವರು 'ಕುಣಬಿಯರು', ಡಾ. ಕೇಶವನ್ ಪ್ರಸಾದ್ 'ಬುಂಡೆ ಬೆಸ್ತರು', ಡಾ.ಗಂಗಾಧರ ದೈವಜ್ಞ ಅವರು 'ಗೊಂದಲಿಗರು', ಡಾ.ಎ.ಎಸ್.ಪ್ರಭಾಕರ ಅವರು 'ಹೆಳವರು' ಎಂಬ ಪುಸ್ತಕಗಳನ್ನು ಪ್ರಕಟಿಸಿದ್ದಾರೆ. ಬುಡಕಟ್ಟು ಅಧ್ಯಯನ ವಿಭಾಗಕ್ಕೆ ಜರ್ಮನಿಯ ವೂಟ್ಸ್‌ಬರ್ಗ್ ವಿಶ್ವವಿದ್ಯಾಲಯದ ಭಾರತೀಯಶಾಸ್ತ್ರ ಮುಖ್ಯಸ್ಥರಾದ ಪ್ರೊ.ಬ್ರೂಕ್ನರ್ ಮತ್ತು ಅವರ ಸಂಶೋಧನಾ ವಿದ್ಯಾರ್ಥಿಗಳಾದ

ಶ್ರೀ ಬೆಂಜಮಿನ್, ಶ್ರೀಮತಿ ಪೌಲಿನಿ ಸಹ ಭೇಟಿ ನೀಡಿದ್ದಾರೆ. ಡಾ. ಚಲುವರಾಜು ಅವರು ಸಂದರ್ಶಕ ಪ್ರಾಧ್ಯಾಪಕರಾಗಿ ವೂಟ್ಸ್‌ಬರ್ಗ್ ವಿಶ್ವವಿದ್ಯಾಲಯದ ಭಾರತೀಯಶಾಸ್ತ್ರ ವಿಭಾಗಕ್ಕೆ ಭೇಟಿ ನೀಡಲಿದ್ದಾರೆ.

ಮಾನವಶಾಸ್ತ್ರ ವಿಭಾವು ಡಾ.ಎಲ್.ಶ್ರೀನಿವಾಸ ಅವರ ಸಂಚಾಲಕತ್ವದಲ್ಲಿ ದಿನಾಂಕ ೭ ರಿಂದ ೯ನೇ ಫೆಬ್ರವರಿ ೨೦೧೧ರ ವರೆಗೆ ಅಂಡಮಾನ್ ನಿಕೋಬಾರ್‌ನಲ್ಲಿ ಎ.ಎಸ್.ಐ.ಕಲ್ಕತ್ತ ಹಾಗೂ ಮೈಸೂರಿನ ಸಿ.ಐ.ಐ.ಎಲ್.ಅವರ ಸಹಯೋಗದಲ್ಲಿ "ಆದಿವಾಸಿ ಜೀವನದಲ್ಲಿ ಸಾಂಸ್ಕೃತಿಕ ಬದಲಾವಣೆಗಳು' ಎಂಬ ರಾಷ್ಟ್ರಮಟ್ಟದ ವಿಚಾರ ಸಂಕಿರಣವನ್ನು ಯಶಸ್ವಿಯಾಗಿ ನೆರವೇರಿಸಿತು. ಡಾ.ತಾರಿಹಳ್ಳಿ ಹನುಮಂತಪ್ಪ ಅವರ ಸಂಚಾಲಕತ್ವದಲ್ಲಿ ಸೆಪ್ಟೆಂಬರ್ ೭ ಮತ್ತು ೮ರಂದು 'ಕರ್ನಾಟಕದ ರೈತರು ಮತ್ತು ಸಮಕಾಲೀನ ಸವಾಲುಗಳು ಎನ್ನುವ ರಾಜ್ಯಮಟ್ಟದ ವಿಚಾರ ಸಂಕಿರಣವನ್ನು ಹಮ್ಮಿಕೊಳ್ಳಲಾಗಿತ್ತು. ಡಾ.ಎಲ್.ಶ್ರೀನಿವಾಸ ಅವರು 'ಗಂಗಾಮತ ಮತ್ತು ಅದರ ಉಪಜಾತಿಗಳ ಕುಲಶಾಸ್ತ್ರೀಯ ಅಧ್ಯಯನ' ಎಂಬ ಯೋಜನೆಯನ್ನು ಪೂರ್ಣಗೊಳಿಸಿ ಸರಕಾರಕ್ಕೆ ವರದಿಯನ್ನು ಸಲ್ಲಿಸಿದ್ದಾರೆ. ನವೆಂಬರ್ ೨೦೧೧ ವಿಶೇಷ ಉಪನ್ಯಾಸವನ್ನು ವಿಭಾಗ ನಡೆಸಿತು.

ದೃಶ್ಯಕಲಾ ವಿಭಾಗ ಸ್ನಾತಕೋತ್ತರ ಎಂ.ವಿ.ಎ.(ಚಿತ್ರಕಲೆ), ಎಂ.ಫಿಲ್ ಮತ್ತು ಪಿಹೆಚ್.ಡಿ ಅಧ್ಯಯನದ ಬೋಧನೆ ಮತ್ತು ಸಂಶೋಧನೆ ನಡೆಯುತ್ತಿದ್ದು, ವಿಭಾಗದ ವಿದ್ಯಾರ್ಥಿಗಳು ಮತ್ತು ಅಧ್ಯಾಪಕರು ರಾಜ್ಯ, ರಾಷ್ಟ್ರ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಚಿತ್ರಕಲಾಕೃತಿಗಳ ಪ್ರದರ್ಶನಗಳನ್ನು ಏರ್ಪಡಿಸಿದ್ದಾರೆ. ಬೆಂಗಳೂರಿನ ವೆಂಕಟಪ್ಪ ಆರ್ಟ್ ಗ್ಯಾಲರಿ, ರೋರಿಚ್ ಆರ್ಟ್ ಗ್ಯಾಲರಿ, ಬಿಜಾಪೂರ, ಧಾರವಾಡ ಮತ್ತು ಪೂಣೆ, ನಾಗಪುರ, ದೆಹಲಿ, ಇಂಡೋನೇಷಿಯಾ, ಇಟಲಿ ಮುಂತಾದ ಕಡೆಗೆ ಚಿತ್ರಕಲಾ ಪ್ರದರ್ಶನಗಳು ನಡೆದಿವೆ. ವಿಭಾಗದಲ್ಲಿನ ಅನೇಕ ವಿದ್ಯಾರ್ಥಿಗಳಿಗೆ ಪ್ರಶಸ್ತಿ ಪುರಸ್ಕಾರಗಳು ಬಂದಿವೆ.

ರಾಷ್ಟ್ರೀಯ ಮಟ್ಟದ ಇಪ್ಪತ್ತು ಜನ ಶಿಲ್ಪಿಗಳ ಶಿಲ್ಪಕಲಾ ಶಿಬಿರವನ್ನು ವಿಶ್ವವಿದ್ಯಾಲಯದ ಆವರಣದಲ್ಲಿ ಹಮ್ಮಿಕೊಳ್ಳಲಾಗಿದೆ. ಡಾ. ಎಸ್.ಸಿ.ಪಾಟೀಲರು ಮೈಸೂರಿನಲ್ಲಿ ಏಕವ್ಯಕ್ತಿ ಚಿತ್ರಕಲಾ ಪ್ರದರ್ಶನವನ್ನು ನಡೆಸಿದ್ದಾರೆ. ಇವರಿಗೆ ಮೈಸೂರು ಆರ್ಟ್ ಗ್ಯಾಲರಿಯ ರಾಜ್ಯಮಟ್ಟದ **ಶಿವಕಲಾ ಪ್ರಶಸ್ತಿ**, ಕೇರಳದ ಕಾಸರಗೋಡಿನಲ್ಲಿ ನಡೆದ ಕೇರಳ ರಾಜ್ಯ ೪ನೇ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಇವರಿಗೆ **ರಾಷ್ಟ್ರೀಯ ಶ್ರೇಷ್ಠ ಕಲಾವಿದ ಪ್ರಶಸ್ತಿ**ಗಳು ಬಂದಿವೆ. U.G.C. ನ್ಯೂ ದೆಹಲಿಯ NET ಮೌಲ್ಯಮಾಪನ ಮಂಡಳಿಯ ಮತ್ತು U.G.C. SET ಪರೀಕ್ಷೆಯ ಮುಖ್ಯ ನಿರೀಕ್ಷಕರಾಗಿ ರಾಷ್ಟ್ರಮಟ್ಟದಲ್ಲಿ ಕಾರ್ಯನಿರ್ವಹಿಸಿದ್ದಾರೆ. ದೂರದರ್ಶನ ಕೇಂದ್ರ, ಬೆಂಗಳೂರು ಚಂದನದಲ್ಲಿ ಇವರ ಬದುಕು, ಕಲೆ ಮತ್ತು ಸಾಧನೆ ಕುರಿತು ವಿಶೇಷ ಸಂದರ್ಶನ ಕಾರ್ಯಕ್ರಮ ನಡೆದಿದೆ. ಲಲಿತಕಲಾ ನಿಕಾಯದ ಡೀನ್ ಆಗಿ ಕಾರ್ಯನಿರ್ವಹಿಸುತ್ತಿದ್ದಾರೆ.

ವಿಭಾಗದ ಯೋಜನೆಗಳಾಗಿ 'ಹಸೆ ಚಿತ್ರಕಲೆಯ ಆಶಯ ಮತ್ತು ಅಭಿವ್ಯಕ್ತಿ' ಹಾಗೂ ಶಾಸ್ತ್ರೀಯ ಭಾಷಾ ಯೋಜನೆ 'ದೃಶ್ಯಭಾಷಾ ಪಾರಿಭಾಷಿಕ ಕನ್ನಡ ವಿಷಯ ವಿಶ್ವಕೋಶ' ಯೋಜನೆಗಳನ್ನು ಪೂರ್ಣಗೊಳಿಸಿ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ್ದಾರೆ. ನಾಡೋಜ ಚಿತ್ರಕಲಾವಿದ ವಿ.ಟಿ.ಕಾಳೆ, 'ಕರ್ನಾಟಕದ ಚಿತ್ರಕಲಾ ವಿವರಣಾತ್ಮಕ ಗ್ರಂಥಸೂಚಿ' ಗ್ರಂಥಗಳನ್ನು ಪ್ರಕಟಣೆಗೆ ನೀಡಿದ್ದಾರೆ.

ಸಂಗೀತ ಮತ್ತು ನೃತ್ಯಕಲಾ ವಿಭಾಗವು ಬಿ.ಮ್ಯೂಸಿಕ್ ಪದವಿ ತರಗತಿಗಳು ನಡೆಯುತ್ತಿದ್ದು, ಈ ವರ್ಷ ಸ್ನಾತಕೋತ್ತರ ಎಂ.ಮ್ಯೂಸಿಕ್ ಪದವಿ ತರಗತಿಗಳನ್ನು ಪ್ರಾರಂಭಿಸಲಾಗಿದೆ. ಇಲ್ಲಿನ ಅನೇಕ ಜನ ವಿದ್ಯಾರ್ಥಿಗಳು ಉಡುಪಿ, ಕಾರ್ಕಳ, ಬಳ್ಳಾರಿ, ಹಂಪಿ ಉತ್ಸವ, ಧಾರವಾಡ ಹೀಗೆ ರಾಜ್ಯದ ಬೇರೆ ಬೇರೆ ಕಡೆಗೆ ಸಂಗೀತ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದಾರೆ. ವಿಭಾಗದ ಅಧ್ಯಾಪಕರು ಹಂಪಿ ಉತ್ಸವ, ೭೮ನೇ ಕನ್ನಡ ಸಾಹಿತ್ಯ ಸಮ್ಮೇಳನ, ಗಂಗಾವತಿ, ಧಾರವಾಡ, ಹೊಸಪೇಟೆ ಆಕಾಶವಾಣಿ ಕೇಂದ್ರ ಮುಂತಾದ ಕಡೆಗೆ ಸಂಗೀತ ಕಾರ್ಯಕ್ರಮಗಳನ್ನು ನೀಡಿದ್ದಾರೆ. ಮತ್ತು ಕನ್ನಡ ವಿಶ್ವವಿದ್ಯಾಲಯದಲ್ಲಿ ಅನೇಕ ಕಾರ್ಯಕ್ರಮಗಳಲ್ಲಿ ಸಂಗೀತ ವಿಭಾಗದ ವಿದ್ಯಾರ್ಥಿಗಳು, ಅಧ್ಯಾಪಕರು ಸಂಗೀತ ಕಾರ್ಯಕ್ರಮಗಳನ್ನು ನಡೆಸಿಕೊಟ್ಟಿದ್ದಾರೆ. ವಿಭಾಗದಲ್ಲಿ ಪ್ರತಿ ಶುಕ್ರವಾರ ವಾರದ ಸಂಗೀತ ಕಾರ್ಯಕ್ರಮ ನಿರಂತರವಾಗಿ ನಡೆಸುತ್ತಾ ಬರಲಾಗಿದೆ. ಬೆಂಗಳೂರಿನ ಚಲನಚಿತ್ರ ನಟ ಮತ್ತು ನೃತ್ಯಪಟು ಶ್ರೀ ಶ್ರೀಧರ್ ಅವರು ವಿಭಾಗದಲ್ಲಿ ಭರತನ ನಾಟ್ಯಶಾಸ್ತ್ರದಲ್ಲಿ ನಟನ ಪಾತ್ರದ ಕುರಿತು ವಿಶೇಷ ಉಪನ್ಯಾಸ ಮತ್ತು ಪ್ರಾತ್ಯಕ್ಷಿಕೆ ನೀಡಿದ್ದಾರೆ.

ಶಿಲ್ಪ ಮತ್ತು ವರ್ಣಚಿತ್ರಕಲಾ ವಿಭಾಗ(ಬಾದಾಮಿ ಕೇಂದ್ರ)ವು ಚಿತ್ರಕಲೆ ಮತ್ತು ಶಿಲ್ಪಕಲೆಯ ಐದು ವರ್ಷದ ಪದವಿ ತರಗತಿಗಳು ನಡೆಯುತ್ತಿವೆ. ಇಲ್ಲಿ ವಿದ್ಯಾರ್ಥಿಗಳ ಮತ್ತು ಅಧ್ಯಾಪಕರ ಶಿಲ್ಪ ಮತ್ತು ಚಿತ್ರಕಲಾ ಕೃತಿಗಳು ಮೈಸೂರು ದಸರಾ

ಕಲಾಪ್ರದರ್ಶನ, ಕ್ಯಾಮ್ಲಿನ್ ಕಲಾಪ್ರದರ್ಶನ, ಬೆಂಗಳೂರು, ಸೌತ್ ಸೆಂಟ್ರಲ್ ಝೋನ್, ನಾಗಪೂರ್, ಪೂಣೆ, ಧರ್ಮಸ್ಥಳ, ಹುಬ್ಬಳ್ಳಿ, ಗದಗ, ಬಾದಾಮಿ, ಬಾಗಲಕೋಟ, ಗುಲಬರ್ಗಾ ಹೀಗೆ ರಾಜ್ಯ ಮತ್ತು ಹೊರರಾಜ್ಯದಲ್ಲಿ ಪ್ರದರ್ಶನಗೊಂಡಿವೆ. ಮತ್ತು ಹಿರಿಯ ಕಲಾವಿದರ ಕಲಾಪ್ರಾತ್ಯಕ್ಷಿಕೆ, ವಿಶೇಷ ಉಪನ್ಯಾಸಗಳನ್ನು ಹಮ್ಮಿಕೊಳ್ಳಲಾಗಿದೆ. ಡಾ. ಶಂಕರ್ ಕುಂದಗೋಳ ಅವರು ಕರ್ನಾಟಕ ರಾಜ್ಯ ಲಲಿತಕಲಾ ಅಕಾಡೆಮಿಯ ಸದಸ್ಯರಾಗಿ ಹಾಗೂ ಮಹಾಂತೇಶ ಫಲದಿನ್ನಿ ಅವರು ಶಿಲ್ಪಕಲಾ ಅಕಾಡೆಮಿಯ ಸದಸ್ಯರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

ರಾಷ್ಟ್ರೀಯ ಶಿಲ್ಪಕಲಾ ಶಿಬಿರ, ಕೇಂದ್ರ ಕಛೇರಿ ಹಂಪಿಯಲ್ಲಿ ವಿಭಾಗದ ಅಧ್ಯಾಪಕರು ಮತ್ತು ವಿದ್ಯಾರ್ಥಿಗಳು ಭಾಗವಹಿಸಿ ಕಲಾಕೃತಿಗಳನ್ನು ನಿರ್ಮಿಸಿದ್ದಾರೆ. ಮೈಸೂರು ದಸರಾ ಪ್ರದರ್ಶನದಲ್ಲಿ ಹಾಗೂ ಗುಲ್ಬರ್ಗಾ ಅಕಾಡೆಮಿಯ ರಾಷ್ಟ್ರೀಯ ಕಲಾಪ್ರದರ್ಶನದಲ್ಲಿ ವಿದ್ಯಾರ್ಥಿಗಳು ಪ್ರಶಸ್ತಿಗಳನ್ನು ಪಡೆದಿದ್ದಾರೆ. ಮತ್ತು ಲಲಿತಕಲಾ ಅಕಾಡೆಮಿಯ ಫೆಲೋಶಿಪ್‌ಗಳನ್ನು ಆರು ಜನ ವಿದ್ಯಾರ್ಥಿಗಳು ಪಡೆದಿದ್ದಾರೆ. ಅಧ್ಯಾಪಕರು ರಾಷ್ಟ್ರ ಮತ್ತು ರಾಜ್ಯ ಮಟ್ಟದ ವಿಚಾರಸಂಕಿರಣ, ಸಮ್ಮೇಳನಗಳಲ್ಲಿ ಭಾಗವಹಿಸಿ ಪ್ರಬಂಧಗಳನ್ನು ಮಂಡಿಸಿದ್ದಾರೆ.

ಒಟ್ಟಾರೆ ಲಲಿತಕಲಾ ನಿಕಾಯದಲ್ಲಿ ಈ ವರ್ಷ ಕರ್ನಾಟಕ ಸರ್ಕಾರ ಮುರಾರ್ಜಿ ದೇಸಾಯಿ ಪ್ರೌಢಶಾಲೆಗಳಲ್ಲಿ ೪೫೧ ಕಲಾಶಿಕ್ಷಕರ ನೇಮಕಾತಿ ಮಾಡಿದ್ದು, ಬಾದಾಮಿ ಕೇಂದ್ರ ಮತ್ತು ದೃಶ್ಯಕಲಾ ವಿಭಾಗ, ಸಂಗೀತ ವಿಭಾಗದಿಂದ ಒಟ್ಟು ೯೩ ವಿದ್ಯಾರ್ಥಿಗಳು ಆಯ್ಕೆಯಾಗಿದ್ದು, ಕನ್ನಡ ವಿಶ್ವವಿದ್ಯಾಲಯ, ಲಲಿತಲಾ ನಿಕಾಯದ ವಿಧ್ಯಾರ್ಥಿಗಳು ರಾಜ್ಯದಲ್ಲಿ ಅತಿಹೆಚ್ಚಿನ ಸಂಖ್ಯೆಯಲ್ಲಿ ಆಯ್ಕೆಯಾಗಿ ಹೊಸ ದಾಖಲೆಯನ್ನು ನಿರ್ಮಿಸಿದ್ದಾರೆ.

ದೂರಶಿಕ್ಷಣ ನಿರ್ದೇಶನಾಲಯದ ವತಿಯಿಂದ ಡಿಪ್ಲೊಮಾ ಮತ್ತು ಎಂ.ಎ. ವಿದ್ಯಾರ್ಥಿಗಳಿಗೆ ನಾಡಿನ ಬೇರೆ ಬೇರೆ ವಿದ್ವಾಂಸರನ್ನು ಆಹ್ವಾನಿಸಿ ಸಂಪರ್ಕ ತರಗತಿಗಳನ್ನು ನಡೆಸಲಾಯಿತು. ಮಾನ್ಯತೆ ಪಡೆದಿರುವ ವಿವಿಧ ಅಧ್ಯಯನ ಕೇಂದ್ರಗಳ ಸಂಯೋಜಕರನ್ನು ಆಹ್ವಾನಿಸಿ ಒಂದು ದಿನದ ಕಾರ್ಯಾಗಾರವನ್ನು ಹಮ್ಮಿಕೊಳ್ಳಲಾಗಿತ್ತು. ೨೦೧೦–೧೧ನೇ ಸಾಲಿನಲ್ಲಿ ದೂರಶಿಕ್ಷಣ ನಿರ್ದೇಶನಾಲಯಕ್ಕೆ ಮಾನ್ಯತೆ ಪಡೆದಿರುವ ಅಧ್ಯಯನ ಕೇಂದ್ರಗಳು ಸೇರಿ ಒಟ್ಟು ೩೦೧೪ ವಿದ್ಯಾರ್ಥಿಗಳು ಪ್ರವೇಶವನ್ನು ಪಡೆದಿದ್ದಾರೆ. ಈವರೆಗೆ ಡೆಕ್ ಅನುದಾನದಿಂದ ಒಂದು ಕೋಟಿಗೂ ಹೆಚ್ಚು ಹಣ ಕ್ರೋಢೀಕೃತವಾಗಿದೆ. ಈ ಸಾಲಿನಲ್ಲಿ ಒಟ್ಟು ನಾಲ್ಕು ಕೇಂದ್ರಗಳಿಗೆ ಹೊಸದಾಗಿ ಅಧ್ಯಯನ ಕೇಂದ್ರಗಳನ್ನು ಪ್ರಾರಂಭಿಸಲು ಅನುಮತಿ ನೀಡಲಾಗಿದೆ. ೨೦೧೦–೧೧ನೇ ಸಾಲಿನಲ್ಲಿ ದೂರಶಿಕ್ಷಣ ನಿರ್ದೇಶನಾಲಯಕ್ಕೆ ದೂರಶಿಕ್ಷಣ ಪರಿಷತ್‌ನಿಂದ ೨೫ಲಕ್ಷ ಅನುದಾನ ಲಭಿಸಿದೆ.

ಪ್ರಸಾರಾಂಗವು ಇದೇ ನುಡಿಹಬ್ಬದಲ್ಲಿ ೧೦೧ ಪುಸ್ತಕಗಳನ್ನು ಬಿಡುಗಡೆ ಮಾಡಿದೆ. ೨೦೧೦–೧೧ನೇ ಸಾಲಿನಲ್ಲಿ ಒಟ್ಟು ರೂ.೪೦,೯೪,೮೮೭.೦೦ಗಳಷ್ಟು ಪುಸ್ತಕಗಳು ಮಾರಾಟವಾಗಿವೆ.

ದೇಸಿ ಅಧ್ಯಯನಕೇಂದ್ರ, ಕುರುಬನಕಟ್ಟೆಯಲ್ಲಿ 'ಬಿಳಿಗಿರಿರಂಗನ ಕಾವ್ಯ ಸಾಂಸ್ಕೃತಿಕ ಮುಖಾಮುಖಿ' ಮತ್ತು 'ಮುಪ್ಪಿನ ಷಡಕ್ಷರಿಗಳ ಸ್ವರವಚನಗಳು' ಎಂಬ ವಿಚಾರ ಸಂಕಿರಣವನ್ನು ಆಯೋಜಿಸಲಾಗಿತ್ತು. ಕನ್ನಡ ಶಾಸ್ತ್ರೀಯ ಭಾಷಾ ಯೋಜನೆಯಡಿಯಲ್ಲಿ 'ಮಂಟೇಸ್ವಾಮಿ ಕಾವ್ಯ ಓದುವ ಪಠ್ಯ ನಿರ್ಮಾಣ' ಎಂಬ ಯೋಜನೆಯನ್ನು ಸಿದ್ಧಪಡಿಸಿ ಪ್ರಕಟಣೆಗೆ ಸಲ್ಲಿಸಲಾಗಿದೆ. ಚಾಮರಾಜನಗರ ಜಿಲ್ಲೆ ಕರ್ನಾಟಕದ ಹಿಂದುಳಿದ ಜಿಲ್ಲೆಗಳಲ್ಲಿ ಒಂದಾದರೂ ಸಾಂಸ್ಕೃತಿಕವಾಗಿ ಮತ್ತು ಜನಪದೀಯವಾಗಿ ಅತಂತ್ಯ ಶ್ರೀಮಂತವಾದ ಜಿಲ್ಲೆಯಾಗಿದೆ. ಇದಕ್ಕೆ ಬಹಳ ಮುಖ್ಯ ಕಾರಣ ಯಾವುದೇ ರಾಜನ ನೇರ ಆಳ್ವಿಕೆ ಅಥವಾ ಸಾಮ್ರಾಜ್ಯ ಸ್ಥಾಪನೆಗಳು ಈ ಭೂ ಭಾಗದಲ್ಲಿ ಆಗದೆ ಇರುವುದರಿಂದ ಜನ ಸಂಸ್ಕೃತಿಗೆ ಹೆಚ್ಚು ಪ್ರೇರೇಪಣೆ ಸಿಕ್ಕಿ ವೈವಿಧ್ಯಮವಾದ ಜನ ಸಂಸ್ಕೃತಿಗಳು ನಿರ್ಮಾಣವಾಗಿವೆ. ಈ ಎಲ್ಲ ವಿಷಯಗಳನ್ನು ತಿಳಿಸುವ ಚಾಮರಾಜನಗರ ಜಿಲ್ಲಾ ಜ್ಞಾನಕೋಶ ವೆಬ್‌ಸೈಟ್‌ನ್ನು ಅನಾವರಣಗೊಳಿಸಲಾಗುತ್ತಿದೆ. ಯುಜಿಸಿ ಪ್ರಧಾನ ಯೋಜನೆಯಡಿಯಲ್ಲಿ 'Index of Karnataka Folk Epic narrators and its Cultural Significace'(2010-2012), 'ಚಾಮರಾಜನಗರ ಜಿಲ್ಲೆಯ ಸೋಲಿಗ ಸಮುದಾಯದ ಸಾಂಸ್ಕೃತಿಕ ಸ್ಥಿತ್ಯಂತರಗಳು' ಎಂಬ ಯೋಜನೆ ಪ್ರಗತಿಯಲ್ಲಿದೆ. ಇದೇ ತಿಂಗಳು ದೇಸಿ ಸಂಸ್ಕೃತಿ ಅಧ್ಯಯನ ಕೇಂದ್ರದಲ್ಲಿ ಸಂಶೋಧನ ಕಮ್ಮಟವನ್ನು ಆಯೋಜಿಸಿ ನಾನಾ ವಿದ್ವಾಂಸರನ್ನು ಆಹ್ವಾನಿಸಿ ಉಪನ್ಯಾಸವನ್ನು ಏರ್ಪಡಿಸಲಾಯಿತು.

ಕುಪ್ಪಳಿಯ ಕುವೆಂಪು ಕನ್ನಡ ಅಧ್ಯಯನ ಕೇಂದ್ರದಲ್ಲಿ 'ಕುವೆಂಪು' ಅವರ ಕುರಿತು ದೆಹಲಿಯಲ್ಲಿ ರಾಷ್ಟ್ರೀಯ ವಿಚಾರ ಸಂಕಿರಣವನ್ನು ಕೇಂದ್ರ ಸಾಹಿತ್ಯ ಅಕಾಡೆಮಿಯವರ ಸಹಯೋಗದಲ್ಲಿ ನಡೆಸಲಾಯಿತು. ಕಲ್ಕತ್ತದಲ್ಲಿ 'ಕುವೆಂಪು' ಅವರ

ಕುರಿತು ರಾಷ್ಟ್ರೀಯ ವಿಚಾರಸಂಕಿರಣವನ್ನು ಕೇಂದ್ರ ಸಾಹಿತ್ಯ ಅಕಾಡೆಮಿ ಅವರ ಸಹಯೋಗದಲ್ಲಿ ಹಮ್ಮಿಕೊಳ್ಳ ಲಾಗಿತ್ತು. 'ಕುವೆಂಪು ಅವರ ಮಹಿಳಾ ಮಂಥನ ಪುಸ್ತಕವು ಈ ಕೇಂದ್ರದಿಂದ ಪ್ರಕಟವಾಗಿದೆ. ಇದಲ್ಲದೆ ಮೂರುವರೆ ಎಕರೆ ಜಮೀನಿನಲ್ಲಿ ೫೦ ಲಕ್ಷ ರೂ.ವೆಚ್ಚದಲ್ಲಿ ಸಹ್ಯಾದ್ರಿ ವಸ್ತುಸಂಗ್ರಹಾಲಯದ ಕಟ್ಟಡ ನಿರ್ಮಾಣವಾಗಿ ವಸ್ತುಗಳನ್ನು ಸಂಗ್ರಹಿಸುತ್ತಿವೆ. ಇದರ ಉದ್ಘಾಟನೆಗಾಗಿ ಸಿದ್ಧತೆಗಳು ನಡೆಯುತ್ತಿವೆ.

ಶಿಲ್ಪ ಮತ್ತು ವರ್ಣಚಿತ್ರಕಲಾ ವಿಭಾಗದ ವಿದ್ಯಾರ್ಥಿಗಳಿಗೆ ಪ್ರತಿ ತಿಂಗಳು ಪ್ರೋತ್ಸಾಹ ಧನವಾಗಿ ರೂ.೧೦೦೦ವನ್ನು ಮತ್ತು ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ರೂ.೧೦೦೦ಗಳನ್ನು ಮತ್ತು ಪ.ಜಾತಿ ಮತ್ತು ಪ.ಪಂ.ವಿದ್ಯಾರ್ಥಿಗಳಿಗೆ ರೂ.೨೦೦೦ ಗಳನ್ನು ಪ್ರೋತ್ಸಾಹ ಧನವಾಗಿ ಕೊಡಮಾಡಲಾಗುತ್ತಿದೆ.

ದಲಿತ ಅಧ್ಯಯನ ಪೀಠದ ವತಿಯಿಂದ ದಿನಾಂಕ ೩೧–೦೩–೨೦೧೦ರಂದು ಅಂತರ್ ರಾಷ್ಟ್ರೀಯ ಮಹಿಳಾ ದಿನಾಚರಣೆ ಆಚರಿಸಲಾಯಿತು. ಇದೇ ಸಂದರ್ಭದಲ್ಲಿ ತರಕಾರಿ ಮಾರಿ ಕುಟುಂಬ ನಿರ್ವಹಿಸುತ್ತಿರುವ ಅಸಂಘಟಿತ ವಲಯದ ಮಹಿಳೆಯರನ್ನು ಸನ್ಮಾನಿಸಲಾಯಿತು.

ಹಾಲುಮತ ಅಧ್ಯಯನ ಪೀಠದ ವತಿಯಿಂದ ಡಾ.ಎಫ್.ಟಿ.ಹಳ್ಳಿಕೇರಿ ಅವರ ಸಂಪಾದಕತ್ವದಲ್ಲಿ 'ಹಾಲುಮತ ಸಾಂಸ್ಕೃತಿಕ ಕೋಶ'ವನ್ನು ತಜ್ಞರ ನೆರವಿನಿಂದ ಸಿದ್ಧಪಡಿಸಲಾಗಿದೆ. ಹಾಗೆಯೇ ಕಳೆದ ಆಗಸ್ಟ್‌ನಲ್ಲಿ ಬಾಗಲಕೋಟೆಯಲ್ಲಿ ನಾಲ್ಕನೆಯ 'ಹಾಲುಮತ ಸಂಸ್ಕೃತಿ ಸಮ್ಮೇಳನ'ವನ್ನು ಹಮ್ಮಿಕೊಳ್ಳಲಾಗಿತ್ತು. 'ಹಾಲುಮತ ವ್ಯಾಸಂಗ ಸಂಪುಟ ೩' ಹಾಗೂ 'ಹಾಲುಮತ ಅಧ್ಯಯನ ಸಂಪುಟ ೧'ನ್ನು ಈಗಾಗಲೇ ಪ್ರಕಟಿಸಲಾಗಿದೆ.

ಡಾ.ಶಂಬಾ ಜೋಶಿ ಅಧ್ಯಯನ ಪೀಠದಿಂದ ಡಾ.ಎಸ್.ಎಸ್.ಅಂಗಡಿಯವರ 'ಶಂಬಾ ಭಾಷಿಕ ಚಿಂತನೆ' ಪುಸ್ತಕ ಮತ್ತು ಪ್ರೊ.ಜೋತಿ ಹೊಸೂರ ಅವರ 'ಡಾ.ಶಂಬಾ ಜೋಶಿ ಅವರ ಅಸಂಕಲಿತ ಲೇಖನಗಳು' ಕೃತಿಗಳು ಪ್ರಕಟವಾಗಿವೆ.

ನಾಡೋಜ ಡಾ.ರಾಜಕುಮಾರ್ ಅಧ್ಯಯನ ಪೀಠದ ವತಿಯಿಂದ 'ಚಲನಚಿತ್ರ ಕಥಾ ಕಮ್ಮಟ'ವನ್ನು ಬೆಂಗಳೂರಿನ ಹಂಸಲೇಖ ದೇಶಿ ಕಾಲೇಜಿನಲ್ಲಿ ಮೂರು ದಿನಗಳ ಕಾಲ ಆಯೋಜಿಸಲಾಗಿತ್ತು.

ಅಭಯರಾಜ್ ಬಲ್ಲೋಟ ಜೈನ ಅಧ್ಯಯನ ಪೀಠದ ವತಿಯಿಂದ 'ಮುಕ್ಕೊಡೆ', 'ಸಮಯಸುತ್ತ', 'ಜೈನ ಟೀಕಾ ಸಾಹಿತ್ಯ' ಕೃತಿಗಳು ಪ್ರಕಟಗೊಂಡಿವೆ. ಈ ವರ್ಷದ ಯೋಜನೆಯಾಗಿ ಶ್ವೇತಾಂಬರ ಅನುವಾದ ಯೋಜನೆಯನ್ನು ಹಮ್ಮಿಕೊಳ್ಳಲಾಗಿದೆ.

ಡಾ.ರಾಮಮನೋಹರ ಲೋಹಿಯಾ ಅಧ್ಯಯನ ಪೀಠದ ವತಿಯಿಂದ ಶ್ರೀ ಪೀರಬಾಷಾ ಅವರು 'ಸಮಾಜವಾದಿ ಹೋರಾಟಗಾರರ ಸಂದರ್ಶನ, ಸಂಪುಟ ಭಾಗ ೨', ಡಾ.ನಟರಾಜ ಹುಳಿಯಾರ್ ಅವರ 'ಲೋಹಿಯಾದ ಆಯ್ದ ಬರಹಗಳ ಸಂಪುಟ', ಶ್ರೀ ವಡ್ಡಗೆರೆ ನಾಗರಾಜಯ್ಯ ಅವರ 'ನಿಧನಾಗಿರುವ ಸಮಾಜವಾದಿಗಳ ನೆನಪಿನ ಸಂಪುಟ', ಡಾ.ಎ.ಎಸ್.ಪ್ರಭಾಕರ ಮತ್ತು ಡಾ.ಶ್ರೀಪಾದ ಶೆಟ್ಟಿ ಅವರ 'ಲೋಹಿಯಾ ಚಿಂತನೆಗಳ ವರ್ತಮಾನದ ಮುಖಾಮುಖಿ' ಎಂಬ ಪುಸ್ತಕಗಳು ಮುದ್ರಣ ಹಂತದಲ್ಲಿವೆ.

ವಾಲ್ಮೀಕಿ ಅಧ್ಯಯನ ಪೀಠವು ಸುರಪುರದಲ್ಲಿ ದಿನಾಂಕ ೧೮, ೧೯ ಮತ್ತು ೨೦ನೇ ಫೆಬ್ರವರಿ ೨೦೧೧ರಂದು 'ನಾಯಕರ ಮಹಾಸಂಸ್ಥಾನ' ಎಂಬ ಮೂರು ದಿನಗಳ ರಾಷ್ಟ್ರಮಟ್ಟದ ವಿಚಾರ ಸಂಕಿರಣವನ್ನು ಆಯೋಜಿಸಲಾಗಿತ್ತು. ದಿನಾಂಕ ೧೧.೧೦.೨೦೧೧ ರಂದು ಮಹರ್ಷಿ ವಾಲ್ಮೀಕಿ ಜಯಂತಿಯನ್ನು ಆಯೋಜಿಸಲಾಗಿತ್ತು.

ದಾಸ ಅಧ್ಯಯನ ಪೀಠವು ಡಾ.ಎಸ್.ಎಸ್.ಅಂಗಡಿ ಅವರ 'ದಾಸ ಭಾಷೆ', ಡಾ.ಅಮರೇಶ ನುಗಡೋಣಿ ಅವರ 'ಪುರಂದರ ಸಾಹಿತ್ಯ ಅಧ್ಯಯನ', ಡಾ.ಎಚ್.ಎಸ್. ಮುರಳೀಧರ ಅವರ 'ಈ ಪರಿಯ ಸೊಬಗು', ಚಂದ್ರಕಾಂತ ಪೋಕಳೆ ಅವರ 'ಕ್ರಾಂತಿಕಾರಿ ತುಕಾರಾಮ' ಎಂಬ ಪುಸ್ತಕಗಳನ್ನು ಪ್ರಕಟಿಸಿದ್ದಾರೆ. ಇದಲ್ಲದೆ ದಾಸ ಅಧ್ಯಯನ ಕಮ್ಮಟವು ಜನವರಿ ೨೦೧೦ರಂದು ನಡೆಸಲಾಯಿತು.

ಶ್ರೀರಂಗರ ದತ್ತಿನಿಧಿಯಿಂದ ಆದ್ಯ ರಂಗಚಾರ್ಯ ಅವರ ಸುಪುತ್ರಿ ಶ್ರೀಮತಿ ಉಷಾ ದೇಸಾಯಿ ಅವರು ರಂಗದತ್ತಿ ನಿಧಿಗೆ ನಾಲ್ಕು ಲಕ್ಷ ದೇಣಿಗೆ ನೀಡಿದರು. ಹಿಂದಿನ ಒಂದು ಲಕ್ಷ ಸೇರಿ ಒಟ್ಟು ದತ್ತಿನಿಧಿಗೆ ಐದು ಲಕ್ಷ ಸೇರಿಸಲಾಯಿತು. ಧಾರವಾಡದ ಹರ್ಷ ಡಂಬಳ ಅವರು ಶ್ರೀರಂಗರನ್ನು ಕುರಿತು ಉಪನ್ಯಾಸ ನೀಡಿದರು.

ಕನ್ನಡ ವಿಶ್ವವಿದ್ಯಾಲಯದ ಕ್ಯಾಂಪಸ್‌ನಲ್ಲಿ ಇಂಟರ್‌ನೆಟ್ ಬಳಸುವ ನಿಮಿತ್ತ ಎಲ್ಲಾ ಕಟ್ಟಡಗಳಿಗೆ ನೆಟ್‌ವರ್ಕ್ ಸಂಪರ್ಕವನ್ನು ಕಲ್ಪಿಸಲಾಗಿತ್ತು. ನಿರಂತರವಾಗಿ ಇಂಟರ್‌ನೆಟ್ ಬಳಸಲು ಅನುಕೂಲವಾಗಲಿ ಎಂದು ಎಲ್ಲಾ ವಿಭಾಗಗಳಲ್ಲಿ ಇರುವ ನೆಟ್‌ವರ್ಕ್ ರ್‍ಯಾಕ್‌ಗಳಿಗೆ ರೂ.೧೦.೦೦ ಲಕ್ಷಗಳಲ್ಲಿ ಯುಪಿಎಸ್ ಖರೀದಿಸಿ ಅಳವಡಿಸ ಲಾಗಿದೆ. ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ವಿದ್ಯಾರ್ಥಿಗಳಿಗೆ ಸಂಶೋಧನೆಗೆ ಅನುಕೂಲವಾಗಲಿ ಎಂದು ವಸತಿ ನಿಲಯದಲ್ಲಿ ವೈಫೈ ಸೌಲಭ್ಯವನ್ನು ಕಲ್ಪಿಸಲಾಗಿದೆ.

ಹೊಸದಾಗಿ ಕನ್ನಡ ವಿಶ್ವವಿದ್ಯಾಲಯದ ವೆಬ್‌ಸೈಟ್‌ನ್ನು ಇನ್ನಷ್ಟು ಸುಂದರವಾಗಿ ಹಾಗೂ ಪರಿಪೂರ್ಣವಾಗಿ ಅಭಿವೃದ್ಧಿಪಡಿಸಲಾಗಿದೆ. ಕುವೆಂಪು ತಂತ್ರಾಂಶದ ವಿಂಡೋಸ್ ಎನ್.ಟಿ. ಆವೃತ್ತಿಯನ್ನು ಸಿದ್ಧಪಡಿಸಿ ಬಿಡುಗಡೆ ಮಾಡಲಾಗಿದೆ. ಕುವೆಂಪು ತಂತ್ರಾಂಶವನ್ನು ಕರ್ನಾಟಕದ ಎಲ್ಲಾ ನ್ಯಾಯಾಲಯಗಳಲ್ಲಿ ಬಳಸಲಾಗುತ್ತಿದೆ. ಕುವೆಂಪು ತಂತ್ರಾಂಶದ ಯೂನಿಕೋಡ್ ಆವೃತ್ತಿಯನ್ನು ಸಿದ್ಧಪಡಿಸಲಾಗಿದೆ. ಲೈನಕ್ಸ್ ಆವೃತ್ತಿಯಲ್ಲಿ ಯೂನಿ ಕೋಡ್ ಸಿದ್ಧಪಡಿಸಲಾಗುತ್ತಿದೆ. ಕನ್ನಡ ಓಸಿಆರ್ ತಂತ್ರಾಂಶ ಮತ್ತು ಕನ್ನಡ ಆನ್‌ಲೈನ್ ಡಿಕ್ಷನರಿಯನ್ನು ಸಿದ್ಧಪಡಿಸಲು ಸರ್ಕಾರಕ್ಕೆ ಅನುದಾನವನ್ನು ಬಿಡುಗಡೆ ಮಾಡಲು ಪ್ರಸ್ತಾವನೆಯನ್ನು ಕಳುಹಿಸಲಾಗಿದೆ. ಅಧ್ಯಯನಾಂಗ, ದೂರಶಿಕ್ಷಣ, ಚಿತ್ರಕಲೆ ವಿಭಾಗಗಳಲ್ಲಿ ತಂತ್ರಾಂಶವನ್ನು ಅಭಿವೃದ್ಧಿ ಪಡಿಸಿಕೊಡಲಾಗಿದೆ.

ಕನ್ನಡ ವಿಶ್ವವಿದ್ಯಾಲಯಕ್ಕೆ ಸೆಕ್ಷನ್ ೧೨(ಬಿ) ಯುಜಿಸಿ ನಿಯಮ ೧೯೫೬ ೧೧ನೇ ಯೋಜನೆಯಡಿಯಲ್ಲಿ (Grant sanctioned under the Scheme of providing additional assistance to universities already covered under Section 12(B) of the UGC Act 1956 during XI plan) ರೂ.೯೦–೦೦ ಲಕ್ಷ ಅನುದಾನವನ್ನು ಯುಜಿಸಿಯಿಂದ ಮಂಜೂರು ಮಾಡಲಾಗಿತ್ತು. ಅದರಲ್ಲಿ ಟೆಂಡರ್ ಮೂಲಕ ಕನ್ನಡ ವಿಶ್ವವಿದ್ಯಾಲಯಕ್ಕೆ ಕಂಪ್ಯೂಟರ್, ಲ್ಯಾಪ್‌ಟ್ಯಾಪ್, ಪ್ರಿಂಟರ್, ಮಲ್ಟಿಮೀಡಿಯ ಪ್ರೊಜಕ್ಟರ್, ಕ್ಯಾಮರ, ಎಲ್.ಸಿ.ಡಿ. ಟಿ.ವಿ. ಹಾಗೂ ಕನ್ನಡ ವಿಶ್ವವಿದ್ಯಾಲಯದ ಗ್ರಂಥಾಲಯವನ್ನು ಸಂಪೂರ್ಣವಾಗಿ ಡಿಜಿಟೆಲ್‌ಲೈಜ್ ಮಾಡಲು ಕನ್ನಡ ವಿಶ್ವವಿದ್ಯಾಲಯದ ಗ್ರಂಥಾಲಯಕ್ಕೆ High End Book Scanner ಖರೀದಿಸಿ ಸಿರಿಗನ್ನಡ ಗ್ರಂಥಾಲಯದಲ್ಲಿ ಅಳವಡಿಸಲಾಗಿದೆ. ಈಗ ವಿಶ್ವವಿದ್ಯಾಲಯದ ಹಸ್ತಪ್ರತಿ ವಿಭಾಗದ ಹಸ್ತಪ್ರತಿಗಳನ್ನು ಸ್ಕ್ಯಾನ್ ಮಾಡಿ ಸಂಗ್ರಹಿಸುವ ಕಾರ್ಯವು ಆರಂಭವಾಗಿದೆ.

ಅದೇ ರೀತಿ ೨೦೧೧–೧೨ನೇ ಸಾಲಿಗೆ ಕನ್ನಡ ವಿಶ್ವವಿದ್ಯಾಲಯಕ್ಕೆ ಸೆಕ್ಷನ್ ೧೨(ಬಿ) ಯುಜಿಸಿ ನಿಯಮ ೧೯೫೬ ೧೧ನೇ ಯೋಜನೆಯಡಿಯಲ್ಲಿ (Grant sanctioned under the Scheme of providing additional assistance to universities already covered under Section 12(B) of the UGC Act 1956 during XI plan)ರೂ.೧೦,೦೦,೦೦೦/– ದಿಂದ ರೂ.೨೦,೦೦,೦೦೦/–(ಒಂದು ಕೋಟಿ ಇಂದ ಎರಡು ಕೋಟಿ) ಅನುದಾನವನ್ನು ಮಂಜೂರು ಮಾಡಲು ವಿಶ್ವವಿದ್ಯಾಲಯ ದಿಂದ ಪ್ರಸ್ತಾವನೆಯನ್ನು ಸಿದ್ಧಪಡಿಸಿ ಕಳುಹಿಸಲಾಗಿದೆ.

ದಿನಾಂಕ ೨೮–೨೯ ಸಪ್ಟೆಂಬರ್ ೨೦೧೦ ರಂದು ಬೆಳಗಾವಿಯ ಲಿಂಗರಾಜ ಕಲಾಮಹಾವಿದ್ಯಾಲಯ ಹಾಗೂ ಕನ್ನಡ ವಿಶ್ವವಿದ್ಯಾಲಯದ ಅಂತಾರಾಷ್ಟ್ರೀಯ ವಚನ ಅಧ್ಯಯನ ಕೇಂದ್ರ ಕೂಡಲಸಂಗಮ ಇವುಗಳ ಸಹಯೋಗದಲ್ಲಿ ವಚನ ಸಂಸ್ಕೃತಿ ಶಿಬಿರ ನಡೆಸಲಾಯಿತು. ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯ ಬಿಜಾಪುರ, ಕನ್ನಡ ಅಧ್ಯಯನ ವಿಭಾಗ ಹಾಗೂ ಕನ್ನಡ ವಿಶ್ವವಿದ್ಯಾಲಯ ಹಂಪಿ, ಅಂತಾರಾಷ್ಟ್ರೀಯ ವಚನ ಅಧ್ಯಯನ ಕೇಂದ್ರ ಕೂಡಲಸಂಗಮ ಇವುಗಳ ಸಹಯೋಗದಲ್ಲಿ ಒಂದು ದಿನದ ವಚನ ಕಮ್ಮಟ ಮಹಿಳಾ ವಿಶ್ವವಿದ್ಯಾಲಯದಲ್ಲಿ ದಿನಾಂಕ ೧೦–೧೨–೨೦೧೦ ರಂದು ಹಮ್ಮಿಕೊಳ್ಳಲಾಯಿತು. ದಿನಾಂಕ ೧೧–೧೨–೨೦೧೦ರಂದು 'ಬಸವನಬಾಗೇವಾಡಿ ದೇವಸ್ಥಾನ ಹಿನ್ನೋಟ–ಮುನ್ನೋಟ' ಎಂಬ ವಿಚಾರ ಸಂಕಿರಣ ಅಕ್ಕನಾಗಮ್ಮ ಬಾಲಕಿಯರ ಸರಕಾರಿ ಪದವಿಪೂರ್ವ ಕಾಲೇಜ ಬಸವನಬಾಗೇವಾಡಿಯಲ್ಲಿ ನಡೆಸಲಾಯಿತು. ದಿನಾಂಕ ೨೪–೨೫ ಫೆಬ್ರವರಿ ೨೦೧೧ರಂದು ಕರ್ನಾಟಕ ಸಾಹಿತ್ಯ ಅಕಾಡೆಮಿ ಹಾಗೂ ಅಂತಾರಾಷ್ಟ್ರೀಯ ವಚನ ಅಧ್ಯಯನ ಕೇಂದ್ರ ಕೂಡಲಸಂಗಮ ಇವುಗಳ ಸಹಯೋಗದಲ್ಲಿ 'ತಳವರ್ಗದ ವಚನಕಾರರ ಸಾಮಾಜಿಕ ಸ್ವರೂಪ' ಎಂಬ ವಿಷಯದ ಬಗ್ಗೆ ರಾಜ್ಯಮಟ್ಟದ ವಿಚಾರ ಸಂಕಿರಣವನ್ನು ಹಮ್ಮಿಕೊಳ್ಳಲಾಗಿತ್ತು. ದಿನಾಂಕ ೨೨–೦೨–೨೦೧೧ ರಿಂದ ೨೮–೦೨–೨೦೧೧ರವರೆಗೆ 'ಹಸ್ತಪ್ರತಿ ತರಬೇತಿ ಶಿಬಿರ'ವು ಹಸ್ತಪ್ರತಿ ವಿಭಾಗದ ಸಹಯೋಗದಲ್ಲಿ ನಡೆಸಿ ಯಶಸ್ವಿಗೊಳಿಸಲಾಯಿತು. ದಿನಾಂಕ ೧೬.೦೭.೨೦೧೧ರಂದು ವಚನ ಸಂಗೀತೋತ್ಸವ ಅಂತಾರಾಷ್ಟ್ರೀಯ ವಚನ ಅಧ್ಯಯನ ಕೇಂದ್ರ ಕೂಡಲಸಂಗಮ ಹಾಗೂ ಕೂಡಲಸಂಗಮ ಅಭಿವೃದ್ಧಿ ಮಂಡಳಿ ಇವುಗಳ ಸಹಯೋಗದಲ್ಲಿ ಹಮ್ಮಿಕೊಳ್ಳಲಾಗಿತ್ತು.

ಜಾನಪದ ವಿಭಾಗದ ಪ್ರಾಧ್ಯಾಪಕರೂ ಹಾಗೂ ಕುಲಸಚಿವರಾದ ಡಾ.ಮಂಜುನಾಥ ಬೇವಿನಕಟ್ಟಿ ಅವರಿಗೆ ಸ್ನೇಹ–ಸೇತು ಸಾಮಾಜಿಕ ಸಾಂಸ್ಕೃತಿಕ ಸಂಸ್ಥೆ, ಬೆಂಗಳೂರು ಇವರು 'ಸಾಂಸ್ಕೃತಿಕ ಅನನ್ಯತೆ ಮತ್ತು ಹಲಗಲಿ ಬೇಡರು'ಎಂಬ ಪುಸ್ತಕಕ್ಕೆ 'ಸ್ನೇಹ ಸೇತು ೨೦೧೦'ರ ಪ್ರಶಸ್ತಿ ಕೊಡಮಾಡಿದ್ದಾರೆ. ಜಾನಪದ ಸಾಹಿತ್ಯ ಪರಿಷತ್ತು ಯಂಡಿಗೇರಿಯವರು 'ಮೌಖಿಕ ಕಥನ'ಕ್ಕೆ ೨೦೧೦ರ 'ಕೃತಿ ಪ್ರಶಸ್ತಿ ನೀಡಿ ಗೌರವಿಸಿದ್ದಾರೆ. ವಿಶ್ವ ಕನ್ನಡ ಸಂರಕ್ಷಣಾ ಸಮಿತಿ, ಬೆಂಗಳೂರು ಇವರು 'ವಿಶ್ವಕನ್ನಡ ಕಣ್ಮಣಿ ಪ್ರಶಸ್ತಿ' ನೀಡಿ ಗೌರವಿಸಿದ್ದಾರೆ.

ಆಡಳಿತ ಸಿಬ್ಬಂದಿ ಶ್ರೀ ಜಿ.ಶಿವಕುಮಾರ ಅವರಿಗೆ ಡಾ.ಸುಭಾಷ್ ಭರಣಿ ಸಾಂಸ್ಕೃತಿಕ ವೇದಿಕೆಯಿಂದ ೨೦೧೧ನೇ ಸಾಲಿನ 'ಡಾ.ಸುಭಾಷ್ ಭರಣಿ ಪ್ರಶಸ್ತಿ' ಮತ್ತು ಸ್ನೇಹ–ಸೇತು ಸಾಮಾಜಿಕ ಸಾಂಸ್ಕೃತಿಕ ಸಂಸ್ಥೆ ಬೆಂಗಳೂರು ಇವರಿಂದ 'ಸ್ನೇಹ–ಸೇತು' ಪ್ರಶಸ್ತಿ ೨೦೦೯' ಲಭಿಸಿದೆ.

ತಾಂತ್ರಿಕ ವಿಭಾದ ವತಿಯಿಂದ ೨೦೧೧–೧೨ನೇ ಸಾಲಿನಲ್ಲಿ ದೃಶ್ಯಕಲಾ ವಿಭಾಗದ ಕಟ್ಟಡದ ಆಡಿಟೋರಿಯಂ ಮತ್ತು ಆರ್ಟ್ ಗ್ಯಾಲರಿಯನ್ನು ೪೪ ಲಕ್ಷದ ವೆಚ್ಚದಲ್ಲಿ ನಿರ್ಮಿಸಲಾಗಿದೆ. ವಿದ್ಯಾರಣ್ಯ ಆವರಣದ ರಸ್ತೆಗಳಿಗೆ ಡಾಂಬರೀಕರಣವನ್ನು ೩೫ ಲಕ್ಷ ರೂ.ವೆಚ್ಚದಲ್ಲಿ ಮಾಡಲಾಗಿದೆ. ನರ್ಸರಿ ಬೋರವೆಲ್‌ನಿಂದ ಪ್ರಸಾರಾಂಗ ಕಟ್ಟಡಕ್ಕೆ ೭೫ ಸಾವಿರ ರೂ.ಗಳಲ್ಲಿ ಪೈಪ್‌ಲೈನ್ ಮಾಡಲಾಗಿದೆ. ಗುಡ್ಡದ ಮೇಲಿನ ನೀರಿನ ಟ್ಯಾಂಕ್‌ನಿಂದ ಪ್ರಸಾರಾಂಗದ ಕಟ್ಟಡಕ್ಕೆ ೯೫ ಸಾವಿರ ರೂ.ಗಳಲ್ಲಿ ಪೈಪ್‌ಲೈನ್ ಮಾಡಿಸಲಾಗಿದೆ. ಶ್ರೀಶೈಲ ಅತಿಥಿಗೃಹದ ನೆಲಕ್ಕೆ ವೆಟ್ರಿಫೈಡ್ ಟೈಲ್ಸ್‌ನ್ನು ೯ ಲಕ್ಷ ರೂ.ಗಳ ವೆಚ್ಚದಲ್ಲಿ ಮಾಡಿಸಲಾಗಿದೆ. ವಿದ್ಯಾರಣ್ಯ ಆವರಣಕ್ಕೆ ೫೦ ಲಕ್ಷ ರೂ.ವೆಚ್ಚದಲ್ಲಿ ಆವರಣ ಗೋಡೆ ನಿರ್ಮಾಣವನ್ನು ಕೈಗೆತ್ತಿಕೊಳ್ಳಲಾಗಿದೆ. ಮಹಿಳೆಯರಿಗಾಗಿ ೫೦ ಲಕ್ಷ ರೂ.ವೆಚ್ಚದಲ್ಲಿ ಮೂಲಭೂತ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ. ಪ್ರಾಥಮಿಕ ಆರೋಗ್ಯ ಕೇಂದ್ರ ಮತ್ತು ಕ್ರೀಡಾ ಕಟ್ಟಡವನ್ನು ರೂ.೮೦ ಲಕ್ಷಗಳ ವೆಚ್ಚದಲ್ಲಿ ನಿರ್ಮಿಸಲು ಕ್ರಮವಹಿಸಲಾಗುತ್ತಿದೆ. ಮಹಿಳಾ ವಸತಿನಿಲಯವನ್ನು ರೂ.೭೫ ಲಕ್ಷಗಳ ವೆಚ್ಚದಲ್ಲಿ ನಿರ್ಮಿಸಲಾಗುತ್ತಿದೆ.

ವಿಶ್ವವಿದ್ಯಾಲಯದ ಧನಸಹಾಯ ಆಯೋಗದ NAACಸಲುವಾಗಿ ವರದಿ ತಯಾರಿಸಿ ಯುಜಿಸಿಗೆ ಸಲ್ಲಿಸಲಾಗಿದೆ. ೧೩ನೇ ಪಂಚವಾರ್ಷಿಕ ಅನುದಾನದ ಸಲುವಾಗಿ ವರದಿಯನ್ನು ಸಿದ್ಧಪಡಿಸಲಾಗುತ್ತಿದೆ. ಆವರಣದಲ್ಲಿ ಆಸ್ಪತ್ರೆ ಕಟ್ಟಡ, ಜಿಮ್ ಕಟ್ಟಡ, ವಿದ್ಯಾರ್ಥಿ–ವಿದ್ಯಾರ್ಥಿನಿಯರ ವಸತಿ ನಿಲಯ ಕಟ್ಟಡದ ನಿರ್ಮಾಣ ತಯಾರಿ ನಡೆಯುತ್ತಿದೆ.

ನುಡಿಹಬ್ಬ ೨೦ ಘಟಿಕೋತ್ಸವ ಭಾಷಣ

ಹಂಪಿ ವಿಶ್ವವಿದ್ಯಾಲಯ ನಾಡಿನ ಅತ್ಯಂತ ಪ್ರಮುಖ ಭಾಷಾ ವಿಶ್ವವಿದ್ಯಾಲಯಗಳಲ್ಲಿ ಒಂದಾಗಿದೆ. ಕರ್ನಾಟಕದ ಶ್ರೀಮಂತ ಇತಿಹಾಸ, ಸಂಸ್ಕೃತಿ, ಪರಂಪರೆಯನ್ನು ವಿಜಯನಗರಕ್ಕಿಂತ ಹೆಚ್ಚಿನ ವೈವಿಧ್ಯತೆಯಲ್ಲಿ ಕಾಣಿಸುವ ಪ್ರದೇಶ ಮತ್ತೊಂದಿಲ್ಲ.

ಒಂದು ರಾಷ್ಟ್ರದ ಭವಿಷ್ಯ ನಿರ್ಮಾಣವಾಗುವುದು ಶಿಕ್ಷಣ ಕ್ಷೇತ್ರದಲ್ಲಿ ಮೇಲಾಗಿ ವಿಶ್ವವಿದ್ಯಾನಿಲಯಗಳಲ್ಲಿ ಎಂಬುದು ಚಿರಂತನ ಸತ್ಯ. ಕಾರಣ ವಿಶ್ವವಿದ್ಯಾನಿಲಯಗಳಲ್ಲಿ ಶಿಕ್ಷಣ ಪಡೆದ ಯುವಕ, ಯುವತಿಯರೇ ರಾಷ್ಟ್ರದ ಎಲ್ಲ ಚಟುವಟಿಕೆಗಳಲ್ಲಿ ಪಾತ್ರಧಾರಿಗಳಾಗುತ್ತಾರೆ. ಹಾಗಾಗಿ ಒಂದು ರಾಷ್ಟ್ರದ ಪ್ರಗತಿ ಮತ್ತು ಸಂಪತ್ತಿನ ಅಳತೆಗೋಲು ವಿಶ್ವವಿದ್ಯಾಲಯಗಳಲ್ಲಿ ಶಿಕ್ಷಣ ಪಡೆದ ವಿದ್ಯಾರ್ಥಿಗಳ ಗುಣಮಟ್ಟದ ಮೇಲೆ ಅವಲಂಬಿತವಾಗಿರುತ್ತದೆ. ಹಂಪಿ ಹೆಸರು ಕೇಳುತ್ತಿದ್ದಂತೆ ಪ್ರತಿಯೊಬ್ಬ ಭಾರತೀಯನಿಗೂ ರೋಮಾಂಚನವಾಗುತ್ತದೆ.

ಇಂತಹ ಪವಿತ್ರ ಸ್ಥಳದಲ್ಲಿ ನಾಲ್ಕು ಶತಮಾನಗಳ ನಂತರ ವಿಜಯನಗರದ ಸಾಮ್ರಾಜ್ಯದ ವೈಭವವನ್ನು ಜ್ಞಾಪಿಸುವ ರೀತಿಯಲ್ಲಿ ಈ ಸರ್ವಸುಂದರ ವಿಶ್ವವಿದ್ಯಾಲಯ ಸ್ಥಾಪನೆಯಾಗಿರುವುದು ಮತ್ತು ಈ ನಗರಕ್ಕೆ ವಿದ್ಯಾರಣ್ಯ ಎಂದು ನಾಮಕರಣ ಮಾಡಿರುವುದು ಐತಿಹಾಸಿಕವಾಗಿದೆ. ಮತ್ತು ಅರ್ಥಪೂರ್ಣವಾಗಿದೆ.

ಈ ವಿಶ್ವವಿದ್ಯಾಲಯದ ಪ್ರಥಮ ಕುಲಪತಿಗಳೂ, ಅಂದಿನಿಂದ ನನ್ನ ಆತ್ಮೀಯ ಮಿತ್ರರೂ ಆಗಿರುವ ಡಾ. ಚಂದ್ರಶೇಖರ ಕಂಬಾರರು ಇದನ್ನು ಶ್ರಮವಹಿಸಿ ಕೇವಲ ಮೂರು ವರ್ಷಗಳಲ್ಲಿ ಕಟ್ಟಿದ್ದನ್ನು ಅಂದಿನ ಮುಖ್ಯಮಂತ್ರಿ ಶ್ರೀ ಎಚ್.ಡಿ. ದೇವೇಗೌಡರು ಮೊದಲನೆಯ ಘಟಿಕೋತ್ಸವ ಭಾಷಣದಲ್ಲಿ ಕೃತಜ್ಞತೆಯಿಂದ ಸ್ಮರಿಸಿದ್ದರು. ಇತ್ತೀಚೆಗೆ ಚಂದ್ರಶೇಖರ ಕಂಬಾರರು ಜ್ಞಾನಪೀಠ ಪ್ರಶಸ್ತಿಯಿಂದ ಪುರಸ್ಕೃತರಾಗಿ ಅಲಂಕೃತರಾಗಿರುವುದು ಕನ್ನಡ ವಿಶ್ವವಿದ್ಯಾಲಯಕ್ಕೂ, ನಮ್ಮೆಲ್ಲರಿಗೂ ಅಪಾರ ಆನಂದ ಉಂಟುಮಾಡಿದೆ.

ಐತಿಹಾಸಿಕ ಕಾರಣಗಳಿಂದ ಕನ್ನಡದ ಜನರು ನಾಲ್ಕೈದು ಭಾಗಗಳಾಗಿ ಬೇರೆ ಬೇರೆ ರಾಜ್ಯಗಳಲ್ಲಿ ಸೇರಿದ್ದು ೧–೧೧–೧೯೫೬ರಂದು ಏಕೀಕೃತ ಕರ್ನಾಟಕ ರಾಜ್ಯವಾಗಿ ಸ್ಥಾಪನೆಯಾದುದು ಎಲ್ಲ ಆರು ಕೋಟಿ ಕನ್ನಡಿಗರು ಒಂದು ರಾಜ್ಯ ವ್ಯವಸ್ಥೆಯಲ್ಲಿ ಕೂಡಿದ್ದು ಮತ್ತೊಂದು ಐತಿಹಾಸಿಕ ಘಟನೆ.

ಕನ್ನಡ ರಾಜ್ಯ ೧–೧೧–೧೯೫೬ರಂದು ಸ್ಥಾಪಿತವಾದರೂ ಕನ್ನಡ ಮಾತೃ ಭಾಷೆಯಾದವರಿಗೆ ಕನ್ನಡ ಭಾಷೆಯಲ್ಲೇ ಪ್ರಾಥಮಿಕ ಶಿಕ್ಷಣ ನೀಡಬೇಕೆಂಬ ನಿಯಮ ಮೂರುದಶಕಗಳ ಕಾಲ ಆಗದಿದ್ದುದು ನಮ್ಮ ಯಳಜಾಪು ಆಡಳಿತದ ಪುರಾವೆಯಾಗಿತ್ತು. ಕೊನೆಗೆ ಗೋಕಾಕ್ ಚಳುವಳಿಯ ನಂತರ ಹಾಗೆ ಮಾಡಲಾಗಿದ್ದರೂ ಅದು ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಕಗ್ಗಂಟಿನ ಪ್ರಶ್ನೆಯಾಯಿತು. ಅದನ್ನು ಮೂರು ಜನರ ನ್ಯಾಯಾಧೀಶರ ಪೀಠಕ್ಕೆ ವಹಿಸಿದಾಗ ಅದರ ಅಧ್ಯಕ್ಷನಾಗುವ ಅವಕಾಶ ನನಗೆ ಸಿಕ್ಕಿತ್ತು. ಸಂವಿಧಾನದ ೩೫೦–ಎ ವಿಧಿ ಪ್ರಕಾರ ಮಾತೃಭಾಷೆಯಲ್ಲೇ ಪ್ರಾಥಮಿಕ ಹಂತದ ಒಂದರಿಂದ ನಾಲ್ಕನೇ ತರಗತಿಗಳಲ್ಲಿ ಶಿಕ್ಷಣ ಆಗಬೇಕೆಂದೂ, ಆ ಹಂತದಲ್ಲಿ ನಮ್ಮಲ್ಲಿ ಯಾರ ಮಾತೃಭಾಷೆಯೂ ಅಲ್ಲದೆ ಆಂಗ್ಲಭಾಷೆಗೆ ಸ್ಥಾನವಿಲ್ಲವೆಂದೂ ನಾನು ಕೊಟ್ಟ ತೀರ್ಮಾನವನ್ನು ಸರ್ವಶ್ರೇಷ್ಠ ನ್ಯಾಯಾಲಯ ಮೇಲ್ಮನವಿಯಲ್ಲಿ ಎತ್ತಿ ಹಿಡಿದಿದ್ದರಿಂದ, ಮಾತೃಭಾಷೆಯಲ್ಲಿ ಪ್ರಾಥಮಿಕ ಶಿಕ್ಷಣ ಇರಬೇಕೆಂಬುದಕ್ಕೆ ಸಂವಿಧಾನದ ಬೆಂಬಲವೂ ದೊರಕಿತು.

ಹೀಗಾದ ನಂತರವೂ ಆಂಗ್ಲಭಾಷಾ ವ್ಯಾಮೋಹ ಹಾಗೂ ಮನೋದಾಸ್ಯತೆಯಿಂದ ಆಂಗ್ಲಭಾಷೆಯ ಆಮಿಷಕ್ಕೆ ಒಳಗಾಗಿರುವ ಅನೇಕರಿರುವುದು ನಮ್ಮ ದೌರ್ಭಾಗ್ಯ. ಆಂಗ್ಲಭಾಷೆ ಬೇಡ ಎಂದು ಯಾರೂ ಹೇಳುವುದಿಲ್ಲ. ಆದರೆ, ಮಹಾತ್ಮಾ ಗಾಂಧಿಯವರು ಹೇಳಿದಂತೆ ಹುಟ್ಟಿದ ಶಿಶುವಿಗೆ ತಾಯಿಯ ಎದೆ ಹಾಲು ಎಷ್ಟು ಅವಶ್ಯಕವೋ ಅದೇ ರೀತಿ ಪ್ರಾಥಮಿಕ ಹಂತದಲ್ಲಿ ಮಾತೃಭಾಷೆಯಲ್ಲೇ ಶಿಕ್ಷಣ ನೀಡಬೇಕಾದುದು ವೈಜ್ಞಾನಿಕವಾಗಿಯು, ವ್ಯವಹಾರಿಕವಾಗಿಯೂ ಸಮರ್ಪಕವೆಂಬುದು ಜಗತ್ತಿನ ಬಹುಪಾಲು ಎಲ್ಲ ಶಿಕ್ಷಣವೇತ್ತರ ಅಭಿಪ್ರಾಯವಾಗಿದೆ. ಅಲ್ಲದೆ ನಮ್ಮತನ ಉಳಿಸಿಕೊಳ್ಳುವ ಏಕೈಕ ಸಾಧನವಾಗಿದೆ.

ಕನ್ನಡ ಭಾಷೆಯನ್ನು ಸಮೃದ್ಧವಾಗಿ ಬೆಳಸಿ ಆಂಗ್ಲಭಾಷಾ ವ್ಯಾಮೋಹವನ್ನು ಕಡಮೆ ಮಾಡಿ, ಜಗತ್ತಿನ ಬೇರೆ ಬೇರೆ ಭಾಷೆಗಳಲ್ಲಿರುವ ಅಮೂಲ್ಯ ಸಾಹಿತ್ಯಗಳನ್ನು ಕನ್ನಡಕ್ಕೆ ಪರಿಣಾಮಕಾರಿಯಾಗಿ ಭಾಷಾಂತರಿಸಿ ಕನ್ನಡ ಭಾಷೆಯನ್ನು ಶ್ರೀಮಂತಗೊಳಿಸಿ

ಮಹೋನ್ನತಿಯನ್ನು ಸಾಧಿಸುವ ಕರ್ತವ್ಯ, ಜವಾಬ್ದಾರಿ ಕನ್ನಡ ವಿಶ್ವವಿದ್ಯಾಲಯದ್ದಾಗಿದೆ ಎಂಬುದನ್ನು ನಾನು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ.

ಸ್ವಾತಂತ್ರ್ಯ ಪಡೆದ ನಂತರ, ಶಿಕ್ಷಣ ಪ್ರಗತಿ ಹೊಂದಿದರೆ ಎಲ್ಲ ಸಮಸ್ಯೆಗಳು ಪರಿಹಾರವಾಗಿ ಸುಖ, ಸಂತೋಷ ಸಿಗುವುದೆಂಬುದು ನಮ್ಮ ಊಹೆಯಾಗಿತ್ತು. ಆದರೆ, ಹಾಗಾಗುವ ಬದಲು ಅಧಿಕಾರದಾಹ, ಧನದಾಹ, ಸ್ವಾರ್ಥಪರತೆ ಇವಕ್ಕಾಗಿ ಅನೈತಿಕ ಚಟುವಟಿಕೆಗಳು ಆರಂಭವಾಗಿ ಇಂದು ಮುಗಿಲುಮುಟ್ಟಿವೆ. ಇತ್ತೀಚೆಗೆ ಅಣ್ಣಾ ಹಜಾರೆಯವರ ನೇತೃತ್ವದಲ್ಲಿ ನಡೆಯುತ್ತಿರುವ ಲಂಚಕೋರತನ, ಭ್ರಷ್ಟಾಚಾರ ಇವುಗಳ ವಿರುದ್ಧ ಹೋರಾಟದಲ್ಲಿ ಅನೇಕರು ವಿದೇಶದಲ್ಲಿ ಅಪಾರ ಕಪ್ಪುಹಣ ಮುಚ್ಚಿಟ್ಟಿರುವುದು, ಇದರಲ್ಲಿ ದೇಶವನ್ನು ಆಳುತ್ತಿರುವ ಮಹಾನುಭಾವರಲ್ಲಿ ಅನೇಕರು ತೊಡಗಿರುವುದು ಬೆಳಕಿಗೆ ಬಂದಿರುವುದು ನಮ್ಮ ರಾಷ್ಟ್ರದ ತಳಹದಿಯನ್ನೇ ಸಡಿಲಗೊಳಿಸಿದೆ. ಲೋಕಪಾಲ ಕಾನೂನು ರಚನೆಯಾಗಲೇಬೇಕೆಂಬ ಒತ್ತಾಯ ಲಂಚಕೋರತನ ಪರಮಾವಧಿಯನ್ನು ಮುಟ್ಟಿದೆಯೆಂಬುದರ ಪುರಾವೆಯಾಗಿದೆ. ಇತ್ತೀಚಿನ ಕಾಮನ್‌ವೆಲ್ತ್ ಗೇಮ್ಸ್ ಹಗರಣ, ೨ಜಿ ಹಗರಣ, ೩ಜಿ ಹಗರಣ, ಸ್ಪೆಕ್ಟ್ರಂ ಹಗರಣಗಳಲ್ಲದೆ, ದಿನ ನಿತ್ಯದ ವ್ಯವಹಾರಗಳಲ್ಲಿ ಸಾಮಾನ್ಯ ಜನರು ಲಂಚದ ಹಾವಳಿಯಿಂದ ಪಡುತ್ತಿರುವ ಯಾತನೆಗಳು ಕಾನೂನುಬದ್ಧ ಸ್ವಚ್ಛ ಆಡಳಿತದ ಬುಡವನ್ನೇ ಅಲುಗಿಸಿ ರಾಷ್ಟ್ರ ಅಪಾಯದ ಅಂಚಿನಲ್ಲಿ ನಿಂತಿದೆ. ನೈತಿಕ ಅಧಃಪತನ ಪರಮಾವಧಿಯನ್ನು ಮುಟ್ಟಿದೆ.

ಹಣಕಾಸು ವಿಚಾರದಲ್ಲಿ ಆಗಿರುವ ನೈತಿಕ ಅಧಃಪತನದ ಜೊತೆಜೊತೆಯಲ್ಲಿ ಲೈಂಗಿಕವಾಗಿ ಆಗಿರುವ ನೈತಿಕ ಅಧಃಪತನ ಸಮಾಜದ ಸ್ವಾಸ್ಥ್ಯವನ್ನು ಹಾಳುಗೆಡಹಿದೆ. ಇತ್ತೀಚೆಗೆ ಸಂಸತ್ತಿನ ಪರಿಶೀಲನೆಗೆ ತಂದಿರುವ ಸರ್ಕಾರಿ ಹಾಗೂ ಖಾಸಗೀ ಕ್ಷೇತ್ರದಲ್ಲಿ ಸೇವೆ ಸಲ್ಲಿಸುತ್ತಿರುವ ಮಹಿಳೆಯರಿಗೆ ಅವರ ಕಾರ್ಯಕ್ಷೇತ್ರದಲ್ಲಿ ಲೈಂಗಿಕ ಕಿರುಕುಳದ ವಿರುದ್ಧ ಕ್ರಮಕೈಗೊಳ್ಳುವ ಮತ್ತು ಅಪರಾಧಿಗಳಿಗೆ ಶಿಕ್ಷೆ ನೀಡುವ ಮತ್ತು ಲೈಂಗಿಕವಾಗಿ ಮಕ್ಕಳನ್ನು ದುರುಪಯೋಗಿಸಿಕೊಳ್ಳುವವರಿಗೆ ಶಿಕ್ಷೆ ನೀಡುವ ಮಸೂದೆ, ಇವುಗಳು ಪ್ರಾಚೀನ ಕಾಲದಿಂದ ನಾವು ಬೆಳಸಿಕೊಂಡು ಬಂದ ಸಾಂಸ್ಕೃತಿಕ ಮೌಲ್ಯಗಳೆಲ್ಲಾ ನಾಶವಾಗಿರುವುದರ ಪುರಾವೆಯಾಗಿದೆ.

ಈಗ ಲಂಚ ಪಡೆಯುತ್ತಿರುವವರೆಲ್ಲರೂ ವಿದ್ಯಾವಂತರಲ್ಲವೇ? ಹೌದು. ಲೋಕೋಪಯೋಗಿ ವೃತ್ತಿಗಳಾದ ವೈದ್ಯಕೀಯ, ವಕೀಲ ಮತ್ತು ಶಿಕ್ಷಣ ವೃತ್ತಿಯೂ ಸೇರಿ ಪ್ರತಿಯೊಂದು ಕ್ಷೇತ್ರದಲ್ಲೂ ಹಣದಾಸೆಯಿಂದ ಸಹ ಮಾನವರ ಪೋಷಣೆ ಮಾಡುವುದರ ಬದಲು ಶೋಷಣೆ ಮಾಡುತ್ತಿರುವವರು ನಾನಾ ರೀತಿಯ ಹೊಸ ಹೊಸ ಅಪರಾಧಗಳನ್ನು ಮಾಡುತ್ತಿರುವವರು ಯಾರು? ಸೈಬರ್ ಅಪರಾಧಗಳನ್ನು ಮಾಡುತ್ತಿರುವವರು ಯಾರು? ಕಾಮನ್‌ವೆಲ್ತ್ ಗೇಮ್ಸ್ ಹಗರಣ, ೨ಜಿ ಹಗರಣ, ೩ಜಿ ಹಗರಣ, ಸ್ಪೆಕ್ಟ್ರಂ ಹಗರಣಗಳನ್ನು ಮಾಡಿ ಜೈಲಿನಲ್ಲಿ ಅಥವಾ ಬೇಲ್‌ನಲ್ಲಿ ಇರುವವರು ಯಾರು? ಅವರೆಲ್ಲರೂ ವಿದ್ಯಾವಂತರೇ ಎನ್ನುವುದರಲ್ಲಿ ಎರಡನೇ ಮಾತಿಲ್ಲ. ಅಂದ ಮೇಲೆ, ನಾವು ನೀಡುತ್ತಿರುವ ವಿದ್ಯೆಯಲ್ಲೇ ಏನೋ ತಪ್ಪಿರಬೇಕು; ಕೊರತೆ ಇರಬೇಕು ಎಂಬುದು ನಿಸ್ಸಂದೇಹ. ಅಂದರೆ, ಶಿಕ್ಷಣದಿಂದ ವಿದ್ಯಾವಂತರು ನಿರ್ಮಾಣವಾಗುತ್ತಿದ್ದಾರೆಯೇ ವಿನಃ ಪ್ರಾಮಾಣಿಕರು, ಚಾರಿತ್ರ್ಯವಂತರು ನಿರ್ಮಾಣವಾಗುತ್ತಿಲ್ಲ.

ವಿದ್ಯೆ ಮತ್ತು ಚಾರಿತ್ರ್ಯ ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ. ಒಂದು ಮುಖ ಸವಕಲಾದರೂ ಅದು ಚಲಾವಣೆಗೆ ಯೋಗ್ಯವಾಗುವುದಿಲ್ಲ. ಅಂತೆಯೇ ಚಾರಿತ್ರ್ಯವಿಲ್ಲದ ವಿದ್ಯಾವಂತರಿಂದ ದೇಶಕ್ಕೆ ಹಾನಿಯೇ ಜಾಸ್ತಿ. ಇಂದು ಉಂಟಾಗಿರುವ ಪರಿಸ್ಥಿತಿ ಅದೇ ಆಗಿದೆ. ವೃತ್ತಿಯಲ್ಲಿ ದಕ್ಷರೂ, ಪರಿಣಿತರು ಆದರೆ ಚಾರಿತ್ರ್ಯ ಹೀನರೂ ಆಗಿರುವವರ ಪ್ರಮಾಣ ಜಾಸ್ತಿಯಾಗಿದೆ. ಈ ಪರಿಸ್ಥಿತಿ ಬದಲಾದರೆ ಮಾತ್ರ ಲಂಚಕೋರತನ, ಭ್ರಷ್ಟಾಚಾರ, ಅನೈತಿಕ ಲೈಂಗಿಕತೆಯಿಂದ ಆಗುತ್ತಿರುವ ಅನಾಹುತಗಳನ್ನು ಅಂತ್ಯಗೊಳಿಸಲು ಸಾಧ್ಯ.

ಎಲ್ಲ ಮಾನವರ ಸಮಸ್ಯೆಗಳಿಗೆ ಪರಿಹಾರವಾದ ತ್ರಿವರ್ಗ ಸಿದ್ಧಾಂತ

ಮಾನವರ ಸಮಸ್ಯೆಗಳ ಆಳವಾದ ಅಧ್ಯಯನದ ನಂತರ ಅವುಗಳ ಪರಿಹಾರಕ್ಕಾಗಿ "ತ್ರಿವರ್ಗ ಸಿದ್ಧಾಂತ"ವನ್ನು ನಮ್ಮ ಪ್ರಾಚೀನ ಋಷಿಗಳು ಮತ್ತು ದಾರ್ಶನಿಕರು ರೂಪಿಸಿದರು.

ಧರ್ಮ, ಅರ್ಥ ಮತ್ತು ಕಾಮ [ತ್ರಿವರ್ಗ] ಇವುಗಳ ಸಮನ್ವಯದಿಂದ ಮಾತ್ರ ಸುಖ ಮತ್ತು ಸಂತೋಷವನ್ನು ಪಡೆಯಬಹುದು. **ಆದರೆ ಐಶ್ವರ್ಯ [ಅರ್ಥ] ಮತ್ತು ಆಸೆಗಳು [ಕಾಮ] ಧರ್ಮಕ್ಕೆ ವಿರೋಧವಾಗಿದ್ದಲ್ಲಿ ಅವುಗಳನ್ನು ತಿರಸ್ಕರಿಸಬೇಕು**[ಮನುಸ್ಮೃತಿ ೨–೨೨೪, ೪–೧೭೬].

ನಮ್ಮ ಪ್ರಾಚೀನಸಾಹಿತ್ಯ ಕೃತಿಗಳಾದ ರಾಮಾಯಣ, ಮಹಾಭಾರತ, ಎಲ್ಲ ಸ್ಮೃತಿಗಳು, ಕೌಟಿಲ್ಯನ ಅರ್ಥಶಾಸ್ತ್ರ, ಕಾಮಂಡಕ ನೀತಿಶಾಸ್ತ್ರ ಇವೆಲ್ಲವೂ ಮನುಷ್ಯನ ಸಮಸ್ಯೆಗಳನ್ನು ಬಗೆಹರಿಸಲು ತ್ರಿವರ್ಗ ಸಿದ್ಧಾಂತವೇ ಸಂಜೀವಿನಿ ಎಂಬ ಒಮ್ಮತದ

ಅಭಿಪ್ರಾಯವನ್ನು ಹೊಂದಿವೆ. ನಮ್ಮ ರಾಷ್ಟ್ರೀಯ ಶಿಕ್ಷಣ ವ್ಯವಸ್ಥೆಯಲ್ಲಿ ನಮ್ಮ ಸಂಸ್ಕೃತಿಯ ಅಡಿಪಾಯದ ಒಂದು ಭಾಗವಾಗಿರುವ ಇಂತಹ ಸಂಗತಿಯನ್ನು ಇನ್ನೂ ಅಳವಡಿಸಲಾಗಿಲ್ಲ ಎಂಬುದು ಖೇದದ ಸಂಗತಿ ಆಗಿದೆ.

ಧರ್ಮ, ಅರ್ಥ ಮತ್ತು ಕಾಮ ಇವು ಮೂರು ಮೂಲಭೂತವಾದ ತತ್ತ್ವಗಳಾಗಿದ್ದು, ಇವುಗಳ ಸಮಷ್ಟಿಯನ್ನು ತ್ರಿವರ್ಗ ಎಂದು ಕರೆಯಲಾಗಿದೆ. ನಮ್ಮ ಪ್ರಸಿದ್ಧ ಮಹಾಕಾವ್ಯಗಳು, ಮನುಸ್ಮೃತಿ, ಕೌಟಿಲ್ಯನ ಅರ್ಥಶಾಸ್ತ್ರ ಇವುಗಳಲ್ಲಿ ತ್ರಿವರ್ಗ ಸಿದ್ಧಾಂತದ ಉಪಯುಕ್ತತೆಯನ್ನು ಒಮ್ಮತದಿಂದ ಘೋಷಿಸಲಾಗಿದೆ ಹಾಗೂ ಈ ಸಿದ್ಧಾಂತ ಆಡಳಿತ ನಡೆಸುವವರನ್ನು ಮಾತ್ರವಲ್ಲದೆ ಪ್ರಜೆಗಳನ್ನು ಕೂಡ ನಿಯಂತ್ರಿಸುತ್ತದೆ. ವಾಸ್ತವವಾಗಿ ಧರ್ಮದ ನಿಯಮಗಳು ಮಾನವರ ಪ್ರತಿಯೊಂದು ಚಟುವಟಿಕೆಗಳನ್ನು, ಪ್ರತಿಯೊಂದು ವೃತ್ತಿಯನ್ನು, ಪ್ರತಿಯೊಂದು ಹವ್ಯಾಸವನ್ನು ನಿಯಂತ್ರಿಸುತ್ತವೆ. ತ್ರಿವರ್ಗ ಸಿದ್ಧಾಂತ ಮನುಷ್ಯನ ಚಟುವಟಿಕೆಯ ಸಾಮಾಜಿಕ, ರಾಜಕೀಯ, ಸ್ಥಳೀಯ ಹಾಗೂ ಅಂತರರಾಷ್ಟ್ರೀಯ ಮಟ್ಟಗಳಲ್ಲಿ ಒಳಿತನ್ನು ಉಂಟುಮಾಡುವ ಮೌಲ್ಯಗಳಿಂದ ಕೂಡಿದ ಒಂದು ಚಿರಂತನ ವ್ಯವಸ್ಥೆ ಆಗಿದೆ".

ಧರ್ಮಕ್ಕೆ ವಿರುದ್ಧವಾದ ಅರ್ಥ ಕಾಮಗಳನ್ನು ತ್ಯಜಿಸಿ ಎಂದು ನಿರ್ದೇಶಿಸಿರುವುದರಿಂದ 'ಧರ್ಮ' ಎಂದರೇನು ಎಂದು ವಿವರಿಸುವುದು ಅವಶ್ಯಕವಾಗಿದೆ. 'ಧರ್ಮ' ಎರಡಕ್ಷರದ ಸಂಸ್ಕೃತ ಭಾಷೆಯ ಅತಿಚಿಕ್ಕ ಪದ. ಆದರೆ ಅದರ ವ್ಯಾಪಕತೆ ಬಹುವಿಶಾಲ. ಈ ಪದವನ್ನು ಬಹಳಷ್ಟು ವೇಳೆ ಇಂಗ್ಲಿಷ್ ಭಾಷೆಯ 'ರಿಲಿಜನ್' ಪದಕ್ಕೆ ತಪ್ಪಾಗಿ ಭಾಷಾಂತರಿಸಲಾಗಿದೆ ಮತ್ತು ಅರ್ಥೈಸಲಾಗಿದೆ. ಆದ್ದರಿಂದ ನಾನು, ಧರ್ಮ ಪದದ ನಿಜವಾದ ಅರ್ಥವನ್ನು ಇಲ್ಲಿ ನೀಡಬಯಸುತ್ತೇನೆ. ಮಹಾಭಾರತದಲ್ಲಿ ಧರ್ಮದ ನಿಯಮಗಳು ಹೀಗಿವೆ:

ಅಕ್ರೋಧಃ ಸತ್ಯವಚನಂ ಸಂವಿಭಾಗಃ ಕ್ಷಮಾ ತಥಾ ।
ಪ್ರಜನಸ್ವೇಷು ದಾರೇಷು ಶೌಚಮದ್ರೋಹ ಏವ ಚ ॥
ಆರ್ಜವಂ ಭೃತ್ಯಭರಣಂ ನವೈತೇ ಸಾರ್ವವರ್ಣಿಕಾಃ ।

ಸತ್ಯನಿಷ್ಠೆ ಅಂದರೆ ಯಾವಾಗಲು ಸತ್ಯವನ್ನೇ ನುಡಿಯುವುದು, ಕೋಪದಿಂದ ಮುಕ್ತನಾಗಿರುವುದು, ಸಂಪತ್ತನ್ನು ಇತರರೊಂದಿಗೆ ಹಂಚಿಕೊಳ್ಳುವುದು(ಸಂವಿಭಾಗ), ಕ್ಷಮಾಗುಣ, ತನ್ನ ಸತಿಯಿಂದ ಮಾತ್ರ ಸಂತಾನವನ್ನು ಪಡೆಯುವುದು, ಪಾವಿತ್ರ್ಯತೆ, ದ್ವೇಷವಿಲ್ಲದಿರುವುದು, ನೇರಸ್ವಭಾವ, ತನ್ನ ಮೇಲೆ ಅವಲಂಬಿತರಾಗಿರುವವರನ್ನು ಪೋಷಿಸುವುದು, ಇವೇ ಎಲ್ಲಾ ವರ್ಣಕ್ಕೆ ಸೇರಿದವರು ಅನುಸರಿಸಬೇಕಾದ ಧರ್ಮದ ಒಂಬತ್ತು ನಿಯಮಗಳು(ಮ.ಭಾ. ಶಾಂತಿಪರ್ವ ೬,೭,೮).

ಮನುಸ್ಮೃತಿ ಇನ್ನೂ ಸಂಕ್ಷಿಪ್ತವಾಗಿ ಧರ್ಮವನ್ನು ಐದು ನಿಯಮಗಳಲ್ಲಿ ವಿಂಗಡಿಸಿದೆ:

ಅಹಿಂಸಾ ಸತ್ಯಮಸ್ತೇಯಂ ಶೌಚಮಿಂದ್ರಿಯನಿಗ್ರಹಃ ।
ಏತಂ ಸಾಮಾಸಿಕಂ ಧರ್ಮಂ ಚಾತುರ್ವರ್ಣ್ಯೆಬ್ರವೀನ್ಮನುಃ ॥

ಅಹಿಂಸಾ (ಯಾರನ್ನೂ ಹಿಂಸಿಸದಿರುವುದು), ಸತ್ಯ (ಸತ್ಯವನ್ನು ನುಡಿಯುವುದು) ಆಸ್ತೇಯ (ಮೋಸದ ಸಂಪಾದನೆಯನ್ನು ಮಾಡದಿರುವುದು), ಶೌಚಮ್ (ಅಂತರಂಗ ಹಾಗೂ ಬಹಿರಂಗ ಶುದ್ಧಿ) ಮತ್ತು ಇಂದ್ರಿಯನಿಗ್ರಹ (ಇಂದ್ರಿಯಗಳ ಮೇಲಿನ ಹತೋಟಿ) ಇವುಗಳು ಎಲ್ಲಾ ವರ್ಣಗಳು ಅನುಸರಿಸಬೇಕಾದ ಧರ್ಮದ ನಿಯಮಗಳು[ಮನು ೧೦–೬೩].

ಮೇಲ್ಕಂಡ ಪ್ರತಿಯೊಂದು ನಿಯಮವನ್ನು ಓದಿದಾಗ ಒಬ್ಬ ವ್ಯಕ್ತಿಗೆ ತಾನು ಏನು ಮಾಡಬೇಕು ಹಾಗೂ ಏನು ಮಾಡಬಾರದು ಎಂಬುದು ಮನದಟ್ಟಾಗುತ್ತದೆ. ಮೇಲ್ಕಂಡ ನಿಯಮಗಳನ್ನು ಅನುಸರಿಸಿದರೆ ಬದುಕಿನಲ್ಲಿ ಸಂತೋಷ, ಸಾಮರಸ್ಯಗಳು ಏರ್ಪಡುತ್ತವೆ. ಈ ವಾಕ್ಯಗಳಲ್ಲಿ ದೇವರ ಹೆಸರು ಇಲ್ಲದಿರುವುದನ್ನು ಗಮನಿಸಿ. ಇದು ಧರ್ಮಕ್ಕೂ ರಿಲಿಜನ್‌ಗೂ ಇರುವ ವ್ಯತ್ಯಾಸವನ್ನು ಧೃಢೀಕರಿಸುತ್ತದೆ.

ಧರ್ಮ ಮತ್ತು ರಿಲಿಜನ್ ಎಂಬ ಪದಗಳ ನಡುವೆ ಅಪಾರ ವ್ಯತ್ಯಾಸವಿದೆ. ಮನುಷ್ಯನ ಚಟುವಟಿಕೆಯ ಎಲ್ಲ ರಂಗಗಳಲ್ಲಿ ಕಂಡು ಬರುವ ಸಾತ್ವಿಕವಾದ ನಡವಳಿಕೆಯ ನಿಯಮಗಳು ಈ ನಾಡಿನಲ್ಲಿ ಅನಾದಿಕಾಲದಿಂದ ಅಸ್ತಿತ್ವದಲ್ಲಿದ್ದು ಇವೆಲ್ಲಾ 'ಧರ್ಮ' ಎಂಬ ಪದದ ವ್ಯಾಪ್ತಿಯೊಳಗೆ ಬರುತ್ತವೆ. ದೇವರನ್ನು ನಂಬುವ ಜನ ಆತನನ್ನು ಬೇರೆ ಬೇರೆ ಹೆಸರುಗಳಿಂದ ಕರೆದು ವಿವಿಧ ವಿಧಾನಗಳಲ್ಲಿ ಪೂಜೆ ಮಾಡುವುದು ರಿಲಿಜೆನ್. ಹಾಗಾಗಿ ರಿಲಿಜನ್‌ಗಳು ಅನೇಕ. ಇದಕ್ಕೆ ಅಂಟಿಕೊಂಡಂತೆ ಹುಟ್ಟಿಕೊಳ್ಳುವ ಅತಿಭಾವುಕತೆಯಿಂದ ಅನೇಕ ವಿರೋಧಗಳು, ವೈಮನಸ್ಸುಗಳು ಸೃಷ್ಟಿ ಆಗುತ್ತವೆ. 'ರಿಲಿಜನ್' [ಮಜಹಬ್] ಮಾನವರನ್ನು ಒಡೆಯುತ್ತದೆ. ಆದರೆ 'ಧರ್ಮ' ಒಂದುಗೂಡಿಸುತ್ತದೆ. ಅದು ಎಲ್ಲಾ ಮಾನವರಿಗೂ ಅನ್ವಯಿಸುತ್ತದೆ. ಅದು ಬದುಕನ್ನು ಧೃಡಗೊಳಿಸುತ್ತದೆ. ಅದು ವಿರೋಧವನ್ನು ಸೃಷ್ಟಿಸುವುದಿಲ್ಲ.

ನಾನು ಈ ಎಲ್ಲ ಅಂಶಗಳನ್ನು ೧೯೮೪ರಲ್ಲಿ ಪ್ರಕಟವಾದ ನನ್ನ 'ಲೀಗಲ್ ಅಂಡ್ ಕಾನ್ಸ್ಟಿಟ್ಯೂಷನಲ್ ಹಿಸ್ಟರಿ ಆಫ್ ಇಂಡಿಯಾ' ಪುಸ್ತಕದಲ್ಲಿ ವಿವರಿಸಿದ್ದೇನೆ. ಕಾನೂನು ಅಪರಾಧ ಮಾಡಿದ ನಂತರ ಅಪರಾಧಿಯನ್ನು ಶಿಕ್ಷಿಸುತ್ತದೆ. ಆದರೆ ಧರ್ಮ ಅಪರಾಧ ಮಾಡುವುದನ್ನೇ ತಪ್ಪಿಸುತ್ತದೆ. ಇದು ಕಾನೂನಿಗೂ ಧರ್ಮಕ್ಕೂ ಇರುವ ವ್ಯತ್ಯಾಸ ಮತ್ತು ಧರ್ಮದ ವೈಶಿಷ್ಟ್ಯತೆ. **ತಾತ್ಕಾಲಿಕ ಸುಖ ಶಾಶ್ವತ ದುಃಖಗಳಿಗೆ ಖಂಡಿತವಾಗಿ ಎಡೆಮಾಡಿಕೊಡುತ್ತದೆ** ಎಂಬುದನ್ನು ದಯವಿಟ್ಟು ನೆನಪಿಡಿ.

ಈ ಘಟಿಕೋತ್ಸವ ಭಾಷಣದ ಮೂಲಕ ನಾನು ಹೇಳುವುದೇ ನೆಂದರೆ, 'ಧರ್ಮ' ರಾಷ್ಟ್ರೀಯ ಶಿಕ್ಷಣದ ವಿಷಯವಾಗಿ ಮಾಡಲೇಬೇಕು. ರಾಷ್ಟ್ರದ ವಿವಿಧ ಕ್ಷೇತ್ರಗಳಿಗೆ ಪ್ರವೇಶಿಸುವ ಹಂತದಲ್ಲಿರುವ ನಿಮಗೆ ನನ್ನ ಸಲಹೆಯಂದರೆ, 'ಧರ್ಮಿಷ್ಠರಾಗಿ ಬಾಳಿ' ಎಂಬುದೇ ಆಗಿದೆ. ನೀವೆಲ್ಲರೂ ಈ ಕೆಳಕಂಡಂತೆ ಶಪಥ ಕೈಗೊಳ್ಳಬೇಕೆಂದು ನಾನು ವಿನಂತಿಸುತ್ತೇನೆ.

"ಭಾರತ ಮಾತೆಯೇ ನನ್ನ ಆರಾಧ್ಯ ದೇವತೆ ಹಾಗೂ ದೇಶ ಪ್ರೇಮವೇ ನನ್ನ ಮಂತ್ರ, ಸಹಮಾನವರ ಸೇವೆಯೇ ಪೂಜಾ ವಿಧಾನ. ಸಮಾಜದಲ್ಲಿ ನಾನು ಮುಂದೆ ಯಾವುದೇ ಸ್ಥಾನಮಾನಗಳಲ್ಲಿ ಕೆಲಸ ಮಾಡುವ ಸಂದರ್ಭ ಬರಲಿ, ನಾನು ಪ್ರಾಮಾಣಿಕನಾಗಿ, ಧರ್ಮಿಷ್ಠನಾಗಿ ನನ್ನ ಕರ್ತವ್ಯಗಳನ್ನು ನಿರ್ವಹಿಸುತ್ತೇನೆ. ನಾನು ನನ್ನ ಆಸೆ–ಆಕಾಂಕ್ಷೆಗಳನ್ನು ಈಡೇರಿಸಿಕೊಳ್ಳಲು ಎಂದಿಗೂ ಕಾನೂನುಬಾಹಿರ ಅಥವಾ ಅನೈತಿಕ ವಿಧಾನಗಳನ್ನು ಅನುಸರಿಸುವುದಿಲ್ಲ.

ಹೀಗೆ ಮಾಡಲು ಭಗವಂತ ನಿಮಗೆ ಅಗತ್ಯವಾದ ಇಚ್ಛಾಶಕ್ತಿಯನ್ನು ನೀಡಲೆಂದು ಆತನಲ್ಲಿ ನನ್ನ ಪ್ರಾರ್ಥನೆ.

ಕೊನೆಯಲ್ಲಿ ಕಠೋಪನಿಷತ್ತಿನಲ್ಲಿ ಕಂಡುಬರುವ ಈ ಕೆಳಕಂಡ ವಿಶ್ವಮಾನ್ಯವಾದ ಪ್ರಾರ್ಥನೆಯನ್ನು ಉಲ್ಲೇಖಿಸುತ್ತಾ ನನ್ನ ಈ ಭಾಷಣವನ್ನು ಮುಕ್ತಾಯ ಮಾಡುತ್ತೇನೆ.

ಓಂ ಸಹನಾಭವತು । ಸಹನೌ ಭುನಕ್ತು ।
ಸಹ ವೀರ್ಯಂ ಕರವಾವಹೈ ।
ತೇಜಸ್ವಿನಾವಧೀತಮಸ್ತು ಮಾ ವಿದ್ವಿಷಾವಹೈ ॥
ಓಂ ಶಾಂತಿಃ ಶಾಂತಿಃ ಶಾಂತಿಃ

ಪರಮಾತ್ಮನು ನಮ್ಮೆಲ್ಲರನ್ನೂ ರಕ್ಷಿಸಲಿ
ನಾವೆಲ್ಲಾ ಒಟ್ಟಿಗೆ ಹಂಚಿಕೊಂಡು ಊಟ ಮಾಡೋಣ
ನಾವು ಒಟ್ಟಾಗಿ ಇನ್ನೂ ಹೆಚ್ಚು ಶಕ್ತಿಯುತವಾಗಿ ದುಡಿಯೋಣ
ನಮ್ಮ ಅಧ್ಯಯನ ತೇಜಸ್ವಿಯಾಗಿ ಪರಿಣಾಮಕಾರಿಯಾಗಿ ಆಗಲಿ
ನಾವು ಯಾರನ್ನೂ ದ್ವೇಷಿಸದಂತಾಗಲಿ
ಓಂ ಶಾಂತಿಃ ಶಾಂತಿಃ ಶಾಂತಿಃ
ಲೋಕಾ ಸಮಸ್ತಾಃಸುಖಿನೋಭವನ್ತು

ಎಲ್ಲರೂ ಸುಖವಾಗಿ ಬಾಳಲಿ

– **ನ್ಯಾಯಮೂರ್ತಿ ಡಾ.ರಾಮಾಜೋಯಿಸ್** ಅವರು

(ನ್ಯಾಯಮೂರ್ತಿ ಡಾ.ರಾಮಾಜೋಯಿಸ್, ಪಾರ್ಲಿಮೆಂಟಿನ ಸದಸ್ಯರು, ಬಿಹಾರ ಮತ್ತು ಝಾರ್ಖಂಡದ ಮಾಜಿ ರಾಜ್ಯಪಾಲರು ಇವರ ಘಟಿಕೋತ್ಸವ ಭಾಷಣದ ಆಯ್ದ ಭಾಗ)

೩೦. 2011–12ನೇ ಸಾಲಿನ ಯೋಜನೆ ಅನುದಾನದ ನಿಜ ವೆಚ್ಚಗಳು

1 ಏಪ್ರಿಲ್ 2011 ರಿಂದ 31 ಮಾರ್ಚ್ 2012ರ ವರೆಗೆ

ವಿವರಗಳು	ವಾಸ್ತವಿಕ ವೆಚ್ಚಗಳು
01 ವೇತನ ವೆಚ್ಚಗಳು	**93762389.00**
1003 ಹಣಕಾಸು ಅಧಿಕಾರಿಗಳು	289225.00
1004 ಬೋಧಕ ಸಿಬ್ಬಂದಿ ವೇತನ	43486039.00
1005 ಆಡಳಿತ/ ಬೋಧಕೇತರ ಸಿಬ್ಬಂದಿ ವೇತನ	18036760.00
1006 ಬೋಧಕ ಮತ್ತು ಬೋಧಕೇತರ ಗಳಿಕೆ ರಜೆ ನಗದೀಕರಣ	2983714.00
ವೇತನ ಕಡಿತ – ಆದಾಯ ತೆರಿಗೆ	7679429.00
ವೇತನ ಕಡಿತ – ಇತರೆ ಬ್ಯಾಂಕ್ ಸಾಲ	4876846.00
ವೇತನ ಕಡಿತ – ಎಲ್.ಐ.ಸಿ	4382470.00
ವೇತನ ಕಡಿತ – ಕ್ಷೇಮನಿಧಿ	381219.00
ವೇತನ ಕಡಿತ – ಗೃಹಸಾಲ	298454.00
ವೇತನ ಕಡಿತ – ಜಿ.ಐ.ಎಸ್.	156130.00
ವೇತನ ಕಡಿತ – ಜಿ.ಪಿ.ಎಫ್	120000.00
ವೇತನ ಕಡಿತ – ನಿವೃತ್ತಿ ವೇತನ ವಂತಿಗೆ	383446.00
ವೇತನ ಕಡಿತ – ಪಿ.ಎಲ್.ಐ	157087.00
ವೇತನ ಕಡಿತ – ವೃತ್ತಿ ತೆರಿಗೆ	416550.00
ವೇತನ ಕಡಿತ – ಸಾಲ/ಪಿಪಿಎಫ್/ಆರ್.ಡಿ/ಷೇರ್	7848088.00
ವೇತನ – ಬಾಕಿ ತುಟ್ಟಿಭತ್ಯೆ	2205955.00
ವೇತನ – ಬಾಕಿ ವೇತನ	50177.00
ವೇತನ – ವಸತಿಗೃಹ ಬಾಡಿಗೆ	10800.00
02 ನಿವೃತ್ತಿ ವೇತನ – ವೆಚ್ಚಗಳು	**5963007.00**
1011 ನಿವೃತ್ತ ಬೋಧಕ ಮತ್ತು ಬೋಧಕೇತರ ಪಿಂಚಣಿ/ಕುಟುಂಬ ಪಿಂಚಣಿ	5555675.00
ಪಿಂಚಣಿದಾರರ ಕಡಿತದ ಆದಾಯ ತೆರಿಗೆ	407332.00
03 ಸಾಮಾನ್ಯ ಮತ್ತು ಆಡಳಿತ ವೆಚ್ಚಗಳು	**19401101.00**
1101 ಸಾದಿಲ್ವಾರು	456550.00
1102 ಲೇಖನಾ ಸಾಮಗ್ರಿಗಳು	73091.00
1103 ಪ್ರಯಾಣ ಭತ್ಯೆ	628898.00
1104 ವೈದ್ಯಕೀಯ ವೆಚ್ಚ ಮರುಪಾವತಿ	1328109.00

1105 ಕುಲಪತಿಗಳ ಗೃಹ ಕಚೇರಿ ಆತಿಥ್ಯ ವೆಚ್ಚ	11064.00
1107 ಸಿಂಡಿಕೇಟ್/ ಅಕಾಡೆಮಿಕ್ ಸಭೆಗಳ ವೆಚ್ಚ	1688837.00
1109 ನುಡಿಹಬ್ಬ	1055063.00
1110 ವಿದ್ಯುಚ್ಛಕ್ತಿ ವೆಚ್ಚ	2592421.00
1111 ದೂರವಾಣಿ ವೆಚ್ಚ	196400.00
1112 ವಾಹನ ರಿಪೇರಿ – ವೆಚ್ಚಗಳು	2043495.00
1113 ಬಾಡಿಗೆ/ ತೆರಿಗೆ/ ವಿಮೆ ಇತ್ಯಾದಿ	335299.00
1114 ಇಂಧನ ವೆಚ್ಚಗಳು	855251.00
1115 ಅಂಚೆ ಮತ್ತು ತಂತಿ	119853.00
1116 ದುರಸ್ಥಿ ಮತ್ತು ನಿರ್ವಹಣೆ(ಅತಿಥಿ ಗೃಹ ಮತ್ತು ಇತರೆ ವಿಭಾಗ)	280558.00
1117 ಲೆಕ್ಕ ತಪಾಸಣೆ ಶುಲ್ಕ	152172.00
1118 ವಿಚಾರ ಸಂಕಿರಣ	66371.00
1119 ಅಂಗೀಕಾರ ಶುಲ್ಕ	231818.00
1120 ಪೀಠೋಪಕರಣ ಮತ್ತು ಸಾಮಗ್ರಿ ಖರೀದಿ ಸಹಿತ ರಿಪೇರಿ ವೆಚ್ಚ	875875.00
1121 ಪಹರೆ ಮತ್ತು ಭದ್ರತೆ ವೆಚ್ಚ	1073041.00
1122 ಸೂಚನಾ ಪತ್ರಗಳು ಮತ್ತು ಜಾಹೀರಾತು	138692.00
1123 ತಾತ್ಕಾಲಿಕ/ಹಂಗಾಮಿ/ದಿನಗೂಲಿ ನೌಕರರ ವೇತನ	3825955.00
1124 ಕಾನೂನು ಸಲಹೆಗಾರರಿಗೆ ಫೀ ಮತ್ತು ಗೌರವ ಧನ	44500.00
1130 ವಿದ್ಯಾರ್ಥಿ ಕ್ಷೇಮಪಾಲನೆ ಮತ್ತು ಸಾಂಸ್ಕೃತಿಕ ಕಾರ್ಯಕ್ರಮ	98564.00
1132 ಸ್ವಚ್ಛತಾ ವೆಚ್ಚಗಳು	316279.00
1139 ಕಛೇರಿ ಸಾಮಾನ್ಯ ಮುದ್ರಣ ಮತ್ತು ಬೈಂಡಿಂಗ್	97450.00
1140 ನಮ್ಮ ಹಬ್ಬ	148350.00
1143 ಕರಕುಶಲ ಮಾರಾಟ ಕೇಂದ್ರ ನಿರ್ವಹಣೆ	212840.00
1144 ದಿನಪತ್ರಿಕೆ ಹಾಗೂ ನಿಯತಕಾಲಿಕೆಗಳು	1056.00
1145 ವೈದ್ಯರ ಸಂಭಾವನೆ	50000.00
1146 ಟಿ.ವಿ.ಕೇಬಲ್ ಬಾಡಿಗೆ	12000.00
1147 ಅಧಿಕಾರಿಗಳ ಗೃಹಕಛೇರಿ ವೆಚ್ಚ	33000.00
1148 ಉಪಕುಲಸಚಿವರು ಶೈಕ್ಷಣಿಕ	149849.00
2514 ಚಾರ್ಟರ್ಡ್ ಅಕೌಂಟೆಂಟ್‌ಗೆ ಪಾವತಿ	208400.00
04 ಅಧ್ಯಯನ ವಿಭಾಗದ ವೆಚ್ಚಗಳು	**8493325.00**
ಎಲ್ಲಾ ವಿಭಾಗಗಳ ಯೋಜನೆ ವೆಚ್ಚ (ಕ್ಷೇತ್ರಕಾರ್ಯ)	460812.00
1200 ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ – ವೆಚ್ಚಗಳು	**26930.00**
1200–01ಸಾದಿಲ್ವಾರು ವೆಚ್ಚ	4000.00
1200–02 ಗ್ರಂಥಾಲಯಕ್ಕೆ ಪುಸ್ತಕ ಖರೀದಿ	0.00
1200–03 ಸಭೆಗಳ ವೆಚ್ಚ	–45.00

1200–04 ವಿಶಿಷ್ಟ ಉಪನ್ಯಾಸ(ಗೌರವ ಸಂಭಾವನೆ)	23085.00
1200–05 ವಿಚಾರ ಸಂಕಿರಣ/ ಕಾರ್ಯಾಗಾರ	–110.00
1250 ಮಹಿಳಾ ಅಧ್ಯಯನ ವಿಭಾಗ – ವೆಚ್ಚಗಳು	**30293.00**
1250–01 ಸಾದಿಲ್ವಾರು	4300.00
1250–02 ಗ್ರಂಥಾಲಯಕ್ಕೆ ಪುಸ್ತಕ ಖರೀದಿ	6051.00
1250–03 ಸಭೆಗಳ ವೆಚ್ಚ	9980.00
1250–04 ವಿಶಿಷ್ಟ ಉಪನ್ಯಾಸ(ಗೌರವ ಸಂಭಾವನೆ)	0.00
1250–05 ವಿಚಾರ ಸಂಕಿರಣ/ ಕಾರ್ಯಾಗಾರ	9962.00
1300 ಕನ್ನಡ ಭಾಷಾಧ್ಯಯನ ವಿಭಾಗ – ವೆಚ್ಚಗಳು	**31397.00**
1300–01 ಸಾದಿಲ್ವಾರು	6302.00
1300–02 ಗ್ರಂಥಾಲಯಕ್ಕೆ ಪುಸ್ತಕ ಖರೀದಿ	7075.00
1300–03 ಸಭೆಗಳ ವೆಚ್ಚ	0.00
1300–04 ವಿಶಿಷ್ಟ ಉಪನ್ಯಾಸ(ಗೌರವ ಸಂಭಾವನೆ)	5060.00
1300–05 ವಿಚಾರ ಸಂಕಿರಣ/ ಕಾರ್ಯಾಗಾರ	12960.00
1350 ದ್ರಾವಿಡ ಸಂಸ್ಕೃತಿ ಅಧ್ಯಯನ ವಿಭಾಗ – ವೆಚ್ಚಗಳು	**15061.00**
1350–01 ಸಾದಿಲ್ವಾರು	3213.00
1350–02 ಗ್ರಂಥಾಲಯಕ್ಕೆ ಪುಸ್ತಕ ಖರೀದಿ	5034.00
1350–03 ಸಭೆಗಳ ವೆಚ್ಚ	–1643.00
1350–04 ವಿಶಿಷ್ಟ ಉಪನ್ಯಾಸ(ಗೌರವ ಸಂಭಾವನೆ)	8457.00
1350–05 ವಿಚಾರ ಸಂಕಿರಣ/ ಕಾರ್ಯಾಗಾರ	0.00
1400 ಭಾಷಾಂತರ ಅಧ್ಯಯನ ವಿಭಾಗ – ವೆಚ್ಚಗಳು	**194058.00**
1400–01 ಸಾದಿಲ್ವಾರು	5898.00
1400–02 ಗ್ರಂಥಾಲಯಕ್ಕೆ ಪುಸ್ತಕ ಖರೀದಿ	7630.00
1400–03 ಸಭೆಗಳ ವೆಚ್ಚ	9383.00
1400–04 ವಿಶಿಷ್ಟ ಉಪನ್ಯಾಸ(ಗೌರವ ಸಂಭಾವನೆ)	15000.00
1400–05 ವಿಚಾರ ಸಂಕಿರಣ/ ಕಾರ್ಯಾಗಾರ	156147.00
1450 ಹಸ್ತಪ್ರತಿಶಾಸ್ತ್ರ ವಿಭಾಗ – ವೆಚ್ಚಗಳು	**89894.00**
1450–01 ಸಾದಿಲ್ವಾರು	2490.00
1450–02 ಗ್ರಂಥಾಲಯಕ್ಕೆ ಪುಸ್ತಕ ಖರೀದಿ	5060.00
1450–03 ಸಭೆಗಳ ವೆಚ್ಚ	–10.00
1450–04 ವಿಶಿಷ್ಟ ಉಪನ್ಯಾಸ(ಗೌರವ ಸಂಭಾವನೆ)	18849.00
1450–05 ವಿಚಾರ ಸಂಕಿರಣ/ ಕಾರ್ಯಾಗಾರ	63505.00
1500 ಶಿಲ್ಪಕಲೆ ಮತ್ತು ಚಿತ್ರಕಲೆ ವಿಭಾಗ, ಬಾದಾಮಿ – ವೆಚ್ಚಗಳು	**312144.00**
1500–01 ಸಾದಿಲ್ವಾರು	13279.00
1500–02 ಪ್ರಯಾಣ ವೆಚ್ಚ	28298.00

1500–03 ವಸತಿ ನಿಲಯ ಕಟ್ಟಡದ ಬಾಡಿಗೆ	108390.00
1500–04 ವಿಚಾರಸಂಕಿರಣ/ಶಿಬಿರ/ಕಮ್ಮಟ	0.00
1500–05 ಸಭೆಗಳ ವೆಚ್ಚ	16500.00
1500–06 ಪೀಠೋಪಕರಣ	66677.00
1500–07 ಗ್ರಂಥಾಲಯಕ್ಕೆ ಪುಸ್ತಕ ಖರೀದಿ	0.00
1500–08 ಕ್ಷೇತ್ರಕಾರ್ಯ/ ಶಿಷ್ಯವೇತನ	79000.00
1550 ಸಂಗೀತ ಮತ್ತು ನೃತ್ಯ ವಿಭಾಗ – ವೆಚ್ಚಗಳು	**166184.00**
1550–01 ಸಾದಿಲ್ವಾರು	2770.00
1550–02 ಗ್ರಂಥಾಲಯಕ್ಕೆ ಪುಸ್ತಕ ಖರೀದಿ	0.00
1550–03 ಸಭೆಗಳ ವೆಚ್ಚ	3414.00
1550–04 ವಿಶಿಷ್ಟ ಉಪನ್ಯಾಸ(ಗೌರವ ಸಂಭಾವನೆ)	160000.00
1550–05 ವಿಚಾರ ಸಂಕಿರಣ/ ಕಾರ್ಯಾಗಾರ	0.00
1600 ದೃಶ್ಯಕಲಾ ವಿಭಾಗ – ವೆಚ್ಚಗಳು	**104756.00**
1600–01 ಸಾದಿಲ್ವಾರು	4341.00
1600–02 ಗ್ರಂಥಾಲಯಕ್ಕೆ ಪುಸ್ತಕ ಖರೀದಿ	15000.00
1600–03 ಸಭೆಗಳ ವೆಚ್ಚ	–2579.00
1600–04 ವಿಶಿಷ್ಟ ಉಪನ್ಯಾಸ(ಗೌರವ ಸಂಭಾವನೆ)	0.00
1600–05 ವಿಚಾರ ಸಂಕಿರಣ/ ಕಾರ್ಯಾಗಾರ	87994.00
1650 ಚರಿತ್ರೆ ವಿಭಾಗ ವೆಚ್ಚಗಳು	**60365.00**
1650–01 ಸಾದಿಲ್ವಾರು	4085.00
1650–02 ಗ್ರಂಥಾಲಯಕ್ಕೆ ಪುಸ್ತಕ ಖರೀದಿ	13040.00
1650–03 ಸಭೆಗಳ ವೆಚ್ಚ	14140.00
1650–04 ವಿಶಿಷ್ಟ ಉಪನ್ಯಾಸ(ಗೌರವ ಸಂಭಾವನೆ)	28580.00
1650–05 ವಿಚಾರ ಸಂಕಿರಣ/ ಕಾರ್ಯಾಗಾರ	520.00
1700 ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ವಿಭಾಗ – ವೆಚ್ಚಗಳು	**70366.00**
1700–01 ಸಾದಿಲ್ವಾರು	11030.00
1700–02 ಗ್ರಂಥಾಲಯಕ್ಕೆ ಪುಸ್ತಕ ಖರೀದಿ	3229.00
1700–03 ಸಭೆಗಳ ವೆಚ್ಚ	13868.00
1700–04 ವಿಶಿಷ್ಟ ಉಪನ್ಯಾಸ(ಗೌರವ ಸಂಭಾವನೆ)	26689.00
1700–05 ವಿಚಾರ ಸಂಕಿರಣ/ ಕಾರ್ಯಾಗಾರ	15550.00
1750 ಅಭಿವೃದ್ಧಿ ಅಧ್ಯಯನ ವಿಭಾಗ – ವೆಚ್ಚಗಳು	**43565.00**
1750–01 ಸಾದಿಲ್ವಾರು	6898.00
1750–02 ಗ್ರಂಥಾಲಯಕ್ಕೆ ಪುಸ್ತಕ ಖರೀದಿ	11127.00
1750–03 ಸಭೆಗಳ ವೆಚ್ಚ	0.00
1750–04 ವಿಶಿಷ್ಟ ಉಪನ್ಯಾಸ(ಗೌರವ ಸಂಭಾವನೆ)	25000.00

1750–05 ವಿಚಾರ ಸಂಕಿರಣ/ ಕಾರ್ಯಾಗಾರ	540.00
1800 ಶಾಸನಶಾಸ್ತ್ರ ವಿಭಾಗ – ವೆಚ್ಚಗಳು	**146829.00**
1800–01 ಸಾದಿಲ್ವಾರು	4504.00
1800–02 ಗ್ರಂಥಾಲಯಕ್ಕೆ ಪುಸ್ತಕ ಖರೀದಿ	11901.00
1800–03 ಸಭೆಗಳ ವೆಚ್ಚ	14032.00
1800–04 ವಿಶಿಷ್ಟ ಉಪನ್ಯಾಸ(ಗೌರವ ಸಂಭಾವನೆ)	24684.00
1800–05 ವಿಚಾರ ಸಂಕಿರಣ/ ಕಾರ್ಯಾಗಾರ	91708.00
1850 ಬುಡಕಟ್ಟು ಅಧ್ಯಯನ ವಿಭಾಗ – ವೆಚ್ಚಗಳು	**63257.00**
1850–01 ಸಾದಿಲ್ವಾರು	–7630.00
1850–02 ಗ್ರಂಥಾಲಯಕ್ಕೆ ಪುಸ್ತಕ ಖರೀದಿ	15000.00
1850–03 ಸಭೆಗಳ ವೆಚ್ಚ	23390.00
1850–04 ವಿಶಿಷ್ಟ ಉಪನ್ಯಾಸ(ಗೌರವ ಸಂಭಾವನೆ)	0.00
1850–05 ವಿಚಾರ ಸಂಕಿರಣ/ ಕಾರ್ಯಾಗಾರ	32497.00
1900 ಜಾನಪದ ಅಧ್ಯಯನ ವಿಭಾಗ – ವೆಚ್ಚಗಳು	**109466.00**
1900–01 ಸಾದಿಲ್ವಾರು	4587.00
1900–02 ಗ್ರಂಥಾಲಯಕ್ಕೆ ಪುಸ್ತಕ ಖರೀದಿ	17653.00
1900–03 ಸಭೆಗಳ ವೆಚ್ಚ	12321.00
1900–04 ವಿಶಿಷ್ಟ ಉಪನ್ಯಾಸ(ಗೌರವ ಸಂಭಾವನೆ)	33275.00
1900–05 ವಿಚಾರ ಸಂಕಿರಣ/ ಕಾರ್ಯಾಗಾರ	41630.00
1950 ವಸ್ತು ಸಂಗ್ರಹಾಲಯದ ವೆಚ್ಚಗಳು	**5249.00**
1950–01 ಸಾದಿಲ್ವಾರು	5249.00
1950–02 ಗ್ರಾಮವಾರು ಕ್ಷೇತ್ರಕಾರ್ಯ	0.00
2000 ಅಧ್ಯಯನಾಂಗ – ವೆಚ್ಚಗಳು	**898030.00**
2000–01 ಪರೀಕ್ಷಾ ವೆಚ್ಚಗಳು	384271.00
2000–02 ಮೌಲ್ಯಮಾಪನ ವೆಚ್ಚ	195669.00
2000–03 ಸಂಯೋಜನಾ ಕಮ್ಮಟ	169128.00
2000–04 ಪರೀಕ್ಷಾ ಸಭೆಗಳು	21727.00
2000–05 ನಿಕಾಯ ಸಭೆಗಳು	48202.00
2000–06 ಪಿಎಚ್.ಡಿ, ಎಂ.ಫಿಲ್, ಡಿ.ಲಿಟ್ ಸಭೆಗಳು	36771.00
2000–07 ಸಾದಿಲ್ವಾರು	42262.00
2025 ಅಧ್ಯಯನಾಂಗ ಚಿತ್ರಕಲೆ ವಿಭಾಗ – ವೆಚ್ಚಗಳು	**2579813.00**
2025–01 ಪರೀಕ್ಷಾ ಪಠ್ಯಕ್ರಮ ಚಟುವಟಿಕೆ	1011840.00
2025–02 ಸಭೆಗಳು	57225.00
2025–03 ಪ್ರಾಯೋಗಿಕ ಪಠ್ಯಗಳ ಸಾಧನ ಸಾಮಗ್ರಿಗಳು	34664.00
2025–04 ಮೌಲ್ಯಮಾಪನ	795811.00

2025–05 ಪರೀಕ್ಷಾ ಸಿಬ್ಬಂದಿ ಸಂಭಾವನೆ	605511.00
2025–06 ಸಾದಿಲ್ವಾರು	74762.00
2050 ಮಾಹಿತಿಕೇಂದ್ರ – ವೆಚ್ಚಗಳು	**125854.00**
2050–01 ಸಾದಿಲ್ವಾರು	17586.00
2050–02 ಪ್ರಯಾಣ ವೆಚ್ಚ	12476.00
2050–03 ಸಭೆಗಳ ವೆಚ್ಚ	0.00
2050–04 ಪ್ರಚಾರ ಮಾಧ್ಯಮ ಸಂಪರ್ಕಗಳ ವೆಚ್ಚ	63437.00
2050–05 ಕ್ಷೇತ್ರಕಾರ್ಯ	32355.00
2060 ವಿಜ್ಞಾನ ಇತಿಹಾಸ ವಿಭಾಗ ವೆಚ್ಚಗಳು	**0.00**
2060–01 ಸಾದಿಲ್ವಾರು	0.00
2060–02 ಗ್ರಂಥಾಲಯಕ್ಕೆ ಪುಸ್ತಕ ಖರೀದಿ	0.00
2060–03 ಸಭೆಗಳ ವೆಚ್ಚ	0.00
2060–04 ವಿಶಿಷ್ಟ ಉಪನ್ಯಾಸ(ಗೌರವ ಸಂಭಾವನೆ)	0.00
2060–05 ವಿಚಾರ ಸಂಕಿರಣ/ ಕಾರ್ಯಾಗಾರ	0.00
2075 ಕುವೆಂಪು ಅಧ್ಯಯನ ಕೇಂದ್ರ, ಕುಪ್ಪಳಿ – ವೆಚ್ಚಗಳು	**227366.00**
2075–01 ಸಾದಿಲ್ವಾರು	8013.00
2075–02 ಪ್ರಯಾಣ ವೆಚ್ಚ	2860.00
2075–03 ವಿಚಾರ ಸಂಕಿರಣ/ಉಪನ್ಯಾಸ/ಕಮ್ಮಟ	203690.00
2075–04 ಸಭೆಗಳ ವೆಚ್ಚ	0.00
2075–05 ಪೀಠೋಪಕರಣ	0.00
2075–06 ಗ್ರಂಥಾಲಯಕ್ಕೆ ಪುಸ್ತಕ ಖರೀದಿ	12803.00
2075–07 ಕ್ಷೇತ್ರಕಾರ್ಯ	0.00
2076 ದೇಸಿ ವಸ್ತು ಸಂಗ್ರಹಾಲಯ, ಕುಪ್ಪಳಿ – ವೆಚ್ಚಗಳು	**1175629.00**
2076–01 ಸಾದಿಲ್ವಾರು	35785.00
2076–02 ಪ್ರಯಾಣ ವೆಚ್ಚ	44009.00
2076–03 ಸಭೆಗಳ ವೆಚ್ಚ	78900.00
2076–04 ಪೀಠೋಪಕರಣ	13661.00
2076–05 ವಸ್ತು ಸಂಗ್ರಹಾಲಯಕ್ಕೆ ವಸ್ತುಗಳ ಖರೀದಿ	1003274.00
2100 ಅಕ್ಷರ ಗ್ರಂಥಾಲಯ – ವೆಚ್ಚಗಳು	**359634.00**
2100–01 ಸಾದಿಲ್ವಾರು	8565.00
2100–02 ಪ್ರಯಾಣ ವೆಚ್ಚ	28473.00
2100–03 ಸಭೆಗಳ (ಸಲಹಸಮಿತಿ) ವೆಚ್ಚ	–810.00
2100–04 ಪ್ರಿಂಟಿಂಗ್ ವೆಚ್ಚ ಮತ್ತು ಸೇರ್ಪಡೆ ರಿಜಿಸ್ಟರ್	50000.00
2100–05 ಪುಸ್ತಕ ಖರೀದಿ	239899.00
2100–06 ನಿಯತಕಾಲಿಕೆಗಳು	33507.00

2151 ಸಿರಿಗನ್ನಡ ಗ್ರಂಥಾಲಯ – ವೆಚ್ಚಗಳು	**10989.00**
2151–01 ಸಾದಿಲ್ವಾರು	10989.00
2151–02 ಸಾಮಗ್ರಿ ಖರೀದಿ	0.00
2151–03 ರೌಂಡ್‌ಲೇಬಲ್/ ಪ್ರಾಪರ್ಟಿ ಲೇಬಲ್ಸ್	0.00
2200 ಪ.ಜಾತಿ ಮತ್ತು ಪ.ಪಂಗಡ ಘಟಕ – ವೆಚ್ಚಗಳು	**9597.00**
2200–01 ಸಾದಿಲ್ವಾರು	9597.00
2200–02 ಪ್ರಯಾಣ ವೆಚ್ಚ	0.00
2200–03 ಸಭೆಗಳ ವೆಚ್ಚ	0.00
2200–04 ಪೀಠೋಪಕರಣ	0.00
2250 ಹಿಂದುಳಿದ ವರ್ಗಗಳ ವಿಶೇಷ ಘಟಕದ ವೆಚ್ಚಗಳು	**272853.00**
2250–01 ಸಾದಿಲ್ವಾರು	25685.00
2250–02 ಪ್ರಯಾಣ ವೆಚ್ಚ	320.00
2250–03 ಸಭೆಗಳ ವೆಚ್ಚ	0.00
2250–04 ಪೀಠೋಪಕರಣ	0.00
2250–05 ಆಧಿಕ ನೆರವು	246848.00
2350 ಗಣಕಯಂತ್ರ	**500698.00**
2350–01 ಸಾದಿಲ್ವಾರು	9884.00
2350–02 ಪ್ರಯಾಣ ವೆಚ್ಚ	9665.00
2350–03 ಸಭೆಗಳ ವೆಚ್ಚ	35110.00
2350–04 ಕಂಪ್ಯೂಟರ್ ರಿಪೇರಿ ಮತ್ತು ನಿರ್ವಹಣೆ	296499.00
2350–05 ವಿವಿಧ ವಿಭಾಗಗಳ ಕಂಪ್ಯೂಟರ್ ಖರೀದಿ	149540.00
2375 ಕೂಡಲ ಸಂಗಮ ಕೇಂದ್ರ – ವೆಚ್ಚಗಳು	**143980.00**
2375–01 ಸಾದಿಲ್ವಾರು	6356.00
2375–02 ಪ್ರಯಾಣ ವೆಚ್ಚ	0.00
2375–03 ವಿಚಾರ ಸಂಕಿರಣ/ಉಪನ್ಯಾಸ/ ಕಮ್ಮಟ	49182.00
2375–04 ಸಭೆಗಳ ವೆಚ್ಚ	8967.00
2375–05 ಪೀಠೋಪಕರಣ	0.00
2375–06 ಗ್ರಂಥಾಲಯಕ್ಕೆ ಪುಸ್ತಕ ಖರೀದಿ	0.00
2375–07 ಕ್ಷೇತ್ರಕಾರ್ಯ/ಗೌರವ ಸಂಭಾವನೆ	79475.00
2380 ಮಾನವಶಾಸ್ತ್ರ ವಿಭಾಗ – ವೆಚ್ಚಗಳು	**118734.00**
2380–01 ಸಾದಿಲ್ವಾರು	5453.00
2380–02 ಗ್ರಂಥಾಲಯಕ್ಕೆ ಪುಸ್ತಕ ಖರೀದಿ	0.00
2380–03 ಸಭೆಗಳ ವೆಚ್ಚ	18116.00
2380–04 ವಿಶಿಷ್ಟ ಉಪನ್ಯಾಸ(ಗೌರವ ಸಂಭಾವನೆ)	23165.00
2380–05 ವಿಚಾರ ಸಂಕಿರಣ/ ಕಾರ್ಯಾಗಾರ	72000.00

2381 ದೇಸೀ ಅಧ್ಯಯನ ಕೇಂದ್ರ, ಕೊಳ್ಳೇಗಾಲ – ವೆಚ್ಚಗಳು	**82941.00**
2381–01 ಸಾದಿಲ್ವಾರು	13696.00
2381–02 ಪ್ರಯಾಣ ವೆಚ್ಚ	3190.00
2381–03 ವಿಚಾರ ಸಂಕಿರಣ/ಉಪನ್ಯಾಸ/ ಕಮ್ಮಟ	59825.00
2381–04 ಸಭೆಗಳ ವೆಚ್ಚ	6230.00
2381–05 ಪೀಠೋಪಕರಣ	0.00
2381–06 ಗ್ರಂಥಾಲಯಕ್ಕೆ ಪುಸ್ತಕ ಖರೀದಿ	0.00
2381–07 ಕ್ಷೇತ್ರಕಾರ್ಯ	0.00
2386 ಭಾಷಾಂತರ ಕೇಂದ್ರ – ವೆಚ್ಚಗಳು	**51396.00**
2386–01 ಸಾದಿಲ್ವಾರು	–500.00
2386–02 ಪ್ರಯಾಣ ವೆಚ್ಚ / ಸಭೆಗಳ ವೆಚ್ಚ	0.00
2386–03 ಅನುವಾದಕರಿಗೆ/ ಮೂಲ ಲೇಖಕರಿಗೆ ಸಂಭಾವನೆ	40946.00
2386–04 ಸಮಾವೇಶ ಭಾಷಾಂತರ ಕಮ್ಮಟ	10950.00
8/18 ಅಸ್ಮಿತ ವಸತಿ ನಿಲಯ – ವೆಚ್ಚಗಳು	**5185.00**
8/18–01 ಸಾದಿಲ್ವಾರು	0.00
8/18–02 ಹಾಸ್ಟೆಲ್‌ಗೆ ಸಾಮಗ್ರಿ ಇತ್ಯಾದಿ ಖರೀದಿ	5185.00
05 ಪ್ರಸಾರಾಂಗದ ವೆಚ್ಚಗಳು	**7355603.00**
2401 ಕಛೇರಿ ಸಾದಿಲ್ವಾರು	52242.00
2402 ಪುಸ್ತಕ ಪ್ರಕಟಣೆ	5493520.00
2403 ನಿಯತಕಾಲಿಕೆಗಳ ಮುದ್ರಣ	425876.00
2404 ಪುಸ್ತಕ ಪಯಣ	264648.00
2405 ಡಿ.ಟಿ.ಪಿ ವೆಚ್ಚ	287954.00
2406 ಗೌರವ ಸಂಭಾವನೆ	153695.00
2407 ಪ್ರಯಾಣ ವೆಚ್ಚ	44971.00
2409 ಮಾರಾಟ ಕೇಂದ್ರ(ಬೆಂಗಳೂರು)	0.00
2410 ಪಠ್ಯಪುಸ್ತಕಗಳ ಮುದ್ರಣ	0.00
2411 ಪ್ರೋತ್ಸಾಹ ಧನ	40092.00
2412 ಅಂಚೆ ಮತ್ತು ತಂತಿ	22267.00
2413 ಗಣಕಯಂತ್ರ	130704.00
2415 ಸುವರ್ಣ ಕರ್ನಾಟಕ	0.00
2416 ಜೈನ ಸಾಹಿತ್ಯ ಸಂಪುಟ	0.00
2417 ಹೊನ್ನಾರುಮಾಲೆ	0.00
2418 ಇತರೆ/ ಪೀಠೋಪಕರಣ	439634.00
2419 ಪುಸ್ತಕ ಮಾರಾಟ/ ವಾಹನ ಖರೀದಿ(ಸಾಮಾನ್ಯ)	0.00
06 ದೂರಶಿಕ್ಷಣ ಕೇಂದ್ರದ ವೆಚ್ಚಗಳು	**7177833.00**

2451 ಕಛೇರಿ ಸಾದಿಲ್ವಾರು	145144.00
2452 ಗ್ರಂಥಾಲಯ	0.00
2453 ವಿಚಾರಸಂಕಿರಣ/ ಕಾರ್ಯಾಗಾರ ಸಮ್ಮೇಳನ ಇತ್ಯಾದಿ	345733.00
2454 ಪಾಠಗಳ ಮುದ್ರಣ	1555294.00
2455 ಗೌರವ ಸಂಭಾವನೆ	322540.00
2456 ಸಂಪರ್ಕ ತರಗತಿ	356090.00
2457 ಜಾಹೀರಾತು	309446.00
2458 ಗಣಕಯಂತ್ರ	850394.00
2459 ಪರೀಕ್ಷೆ ಮತ್ತು ಇತ್ಯಾದಿ/ ತಾ.ಸಿಬ್ಬಂದಿ ವೇತನ	3130356.00
2475 ಇಗ್ನೋ	159536.00
ದೂರಶಿಕ್ಷಣ – ಆಡಳಿತ ಕನ್ನಡ ಡಿಪ್ಲೋಮಾ	0.00
ದೂರಶಿಕ್ಷಣ – ಸ್ವೀಕೃತಿ ಮೊತ್ತದಲ್ಲಿ ಶುಲ್ಕ ಮರುಪಾವತಿ	3300.00
07 ಅಭಿವೃದ್ಧಿ ಕಾರ್ಯಕ್ರಮಗಳು	**24616328.00**
ಅಭಿವೃದ್ಧಿ ಕಾಮಗಾರಿಗಳು	**21525275.00**
'ಎ'ಗೇಟ್ ನಿಂದ ವಿವಿಧ ವಿಭಾಗಗಳ ತೋಟಗಾರಿಕೆ ನಿರ್ವಹಣೆ	153259.00
'ಬಿ' ಗೇಟ್ ಹತ್ತಿರ ದ್ವಾರ ನಿರ್ಮಾಣ	464252.00
1150 ತೋಟಗಾರಿಕೆ	284195.00
2501 ಭೂ ಸ್ವಾಧೀನ	1066512.00
2515 ಕಟ್ಟಡಗಳ ನಿರ್ಮಾಣ ಮತ್ತು ನಿರ್ವಹಣೆ – ವೆಚ್ಚಗಳು	4537875.00
ಅಕ್ಷರ ಗ್ರಂಥಾಲಯ ಕಟ್ಟಡ ಹತ್ತಿರ ಟ್ರಾನ್ಸ್‌ಫಾರಂ ಅಳವಡಿಸುವುದು	386201.00
ಅತಿಥಿಗೃಹ ಅಡುಗೆಯವರಿಗೆ ಮನೆ ನಿರ್ಮಾಣ	314068.00
ಉಪಾಹಾರ ಮಂದಿರ ಕಟ್ಟಡದ ಮುಂದುವರಿದ ಪಾವತಿ ಮೊತ್ತ	1346397.00
ಕಂಪೌಂಡೆ ಗೋಡೆ ನಿರ್ಮಾಣ	3072535.00
ಕನ್ನಡ ಉತ್ಸವ	0.00
ಕೆರೆ ದುರಸ್ಥಿ	1357914.00
ಚಿತ್ರಕಲಾ ಶಿಬಿರಗಳು	0.00
ತುಂಗಭದ್ರ ಕೆನಾಲ್ ನಿಂದ 2 ಕ್ಯುಸೆಕ್ ನೀರು ಸರಬರಾಜು ಮತ್ತು ಇತರೆ	365555.00
ದೃಶ್ಯಕಲಾ ಕಟ್ಟಡದ ಮುಂದುವರೆದ ಪಾವತಿ ಮೊತ್ತ	2619895.00
ದೇಸಿ ವಸ್ತು ಸಂಗ್ರಹಾಲಯ – ಕಟ್ಟಡ	1346986.00
ಪ್ರಸಾರಾಂಗ ಕಟ್ಟಡದ ಮುಂದುವರಿದ ಪಾವತಿ ಮೊತ್ತ	641969.00
ಬಾದಾಮಿ ಕೇಂದ್ರದ ಕಟ್ಟಡದ ದುರಸ್ಥಿ	315619.00
ಬಾದಾಮಿ ಶಿಲ್ಪಕಲಾ ಮತ್ತು ಚಿತ್ರಕಲಾ ಕೇಂದ್ರಕ್ಕೆ ಪೀಠೋಪಕರಣ ಖರೀದಿ	0.00
ರಸ್ತೆ ದುರಸ್ಥೀಕರಣ ಮತ್ತು ಡಾಂಬರೀಕರಣ	252006.00
ರಿಕಾರ್ಡ್ ರೂಂ ವಿದ್ಯುತ್ತೀಕರಣ	0.00
ವಾಹನ ನಿಲುಗಡೆ ಷೆಡ್ ನಿರ್ಮಾಣ	577377.00

ವಿದ್ಯುತ್ ದೀಪ ಮತ್ತು ಬೋರ್‌ವೆಲ್ ನಿರ್ಮಾಣ ಮತ್ತು ನಿರ್ವಹಣೆ	434363.00
ವಿವಿದೆಡೆ ಶೌಚಾಲಯ ನಿರ್ಮಾಣ	238064.00
ಶಿಲ್ಪಕಲಾ ಶಿಬಿರಗಳು	984066.00
ಶ್ರೀಶೈಲ ಅತಿಥಿಗೃಹದ ನೆಲಹಾಸು ಬದಲಾವನೆ ಕಾಮಗಾರಿ	766167.00
ಸಿಬ್ಬಂದಿಗಳ ವಸತಿ ಗೃಹ ನಿರ್ಮಾಣ ಕಾಮಗಾರಿ	0.00
ವಿಶೇಷ ಘಟಕ ಯೋಜನೆ	**3091053.00**
ಆರೋಗ್ಯ ಸೌಲಭ್ಯಗಳು	60000.00
ಕುಡಿಯುವ ನೀರು ಪೂರೈಕೆ ಕಾಮಗಾರಿ	809825.00
ಕ್ರೀಡಾ ಕಟ್ಟಡ ಸಮುಚ್ಛಯ/ ಭವನ ನಿರ್ಮಾಣ	0.00
ಕ್ರೀಡಾ ಸಾಮಗ್ರಿ ಖರೀದಿ	0.00
ಗಣಕಯಂತ್ರ ತರಬೇತಿ	250000.00
ಗಣಕಯಂತ್ರಗಳ ಖರೀದಿ	0.00
ಪುಸ್ತಕ ಖರೀದಿ	960205.00
ಪ್ರಾಥಮಿಕ ಆರೋಗ್ಯ ಕೇಂದ್ರ ನಿರ್ಮಾಣ ಕಾಮಗಾರಿ	0.00
ಶಿಬಿರದಲ್ಲಿ ಭಾಗವಹಿಸಿದ ವಿದ್ಯಾರ್ಥಿಗಳ ಪ್ರಯಾಣ/ದಿನಭತ್ಯೆ	0.00
ಶಿಷ್ಯವೇತನ/ ಸಹಾಯಧನ	1011023.00
ಶೌಚಾಲಯ ನಿರ್ಮಾಣ ಕಾಮಗಾರಿ	0.00
ಗಿರಿಜನ ಉಪಯೋಜನೆ	0.00
ಗಿರಿಜನ ವಿದ್ಯಾರ್ಥಿಗಳ ವಸತಿ ನಿಲಯ ನಿರ್ಮಾಣ ಕಾಮಗಾರಿ	0.00
08 ಯುಜಿಸಿ ಮತ್ತು ಇತರೆ ವೆಚ್ಚಗಳು	**23720825.00**
2553 ಯುಜಿಸಿ ನೆಟ್	79056.00
2554 ಮಹಿಳಾ ಅಧ್ಯಯನ ಕೇಂದ್ರ ವೆಚ್ಚಗಳು	281631.00
2559 ಸ್ಯಾಪ್	584910.00
2667 ಫೆಲೋಷಿಪ್, ಸಮಾಜ ಕಲ್ಯಾಣ ಅನುದಾನ ಅಡಿಯಲ್ಲಿ	1719680.00
ಎಸ್.ಐ.ಆರ್.ಡಿ ಯೋಜನೆ – ವೆಚ್ಚಗಳು	191972.00
ಐ.ಡಿ.ಎಚ್. ಹಂಪಿ ಯೋಜನೆ – ವೆಚ್ಚಗಳು	762267.00
ಐ.ಸಿ.ಎ.ಚ್.ಆರ್	0.00
ಕನ್ನಡ ಶಾಸ್ತ್ರೀಯ ಭಾಷೆ – ವೆಚ್ಚಗಳು	836845.00
ಕರ್ನಾಟಕ ರಾಜ್ಯ ಮಾನವಹಕ್ಕುಗಳ ಆಯೋಜನೆ– ವೆಚ್ಚಗಳು	0.00
ಗಂಗಾಮತಸ್ಥ ಅಧ್ಯಯನಕ್ಕಾಗಿ ಅನುದಾನ – ವೆಚ್ಚಗಳು	721500.00
ಡಾ॥ ವಿ.ಕೆ. ಗೋಕಾಕ್ ರಾಷ್ಟ್ರೀಯ ಟ್ರಸ್ಟ್, ಹಾವೇರಿ	0.00
ನಗರಸಭೆ ಗಂಗಾವತಿಯಿಂದ ಬಂದ ಅನುದಾನದಲ್ಲಿ ಪಾವತಿ	15000.00
ಪುರಸಭೆ ಕಂಪ್ಲಿ ಇವರಿಂದ ಬಂದ ಅನುದಾನದ ವೆಚ್ಚಗಳು	36000.00
ಪ್ರಾಚ್ಯವಸ್ತು ಸಂಗ್ರಹಾಲಯ, ಮೈಸೂರು – ವೆಚ್ಚಗಳು	0.00
ಫೆಲೋಷಿಪ್, ಎಚ್.ಆರ್.ಡಿ ಅನುದಾನದಲ್ಲಿ ಪಾವತಿ	150500.00

ಫೆಲೋಷಿಪ್, ಪಟ್ಟಣ ಪಂಚಾಯಿತಿ ಅನುದಾನದಲ್ಲಿ ಪಾವತಿ	4883.00
ಫೆಲೋಷಿಪ್, ಯುಜಿಸಿ ಪಿ.ಡಿ.ಎಫ್ ಅನುದಾನದ ಶಿಷ್ಯವೇತನ	235132.00
ಫೆಲೋಷಿಪ್, ರಾಜೀವ್‌ಗಾಂಧಿ ಶಿಷ್ಯವೇತನ	3243177.00
ಫೆಲೋಷಿಪ್, ಹಿಂದುಳಿದ ವರ್ಗ ಅಭಿವೃದ್ಧಿ ಇಲಾಖೆಯಿಂದ ಪಾವತಿ	354190.00
ಯುಜಿಸಿ – ಎಂ.ಎಚ್.ಆರ್.ಡಿ	126938.00
ಯುಜಿಸಿ – ಎಮಿರೈಟ್ಸ್	270000.00
ಯುಜಿಸಿ – ನಿರ್ವಹಣಾ ವೆಚ್ಚ, ಕಂಪ್ಯೂಟ್/ ಲ್ಯಾಪ್‌ಟಾಪ್/ ಇತರೆ	11585077.00
ಯುಜಿಸಿ – ಮಹಿಳೆಯರಿಗಾಗಿ ಮೂಲಭೂತ ಸೌಕರ್ಯಗಳು	1448178.00
ಯುಜಿಸಿ(ಹಳೆಯ ಅನುದಾನ)	64923.00
ಯುಜಿಸಿ ಕಟ್ಟಡ – ಕನ್‌ವೆನ್ಷನ್ ಸೆಂಟರ್	0.00
ಯುಜಿಸಿ ಕಟ್ಟಡ – ಪರೀಕ್ಷಾ ಸದನ	0.00
ಯುಜಿಸಿ ಕಟ್ಟಡ – ಮಹಿಳಾ ಹಾಸ್ಟೆಲ್	0.00
ಯುಜಿಸಿ ಕಟ್ಟಡ – ಸ್ಪೋರ್ಟ್ಸ್ ಕಾಂಪ್ಲೆಕ್ಸ್	0.00
ಹಸ್ತಪ್ರತಿ – ಎನ್.ಎಂ.ಎಂ. ಯೋಜನೆ	1008966.00
09 ಯುಜಿಸಿ ಪ್ರಾಯೋಜಿತ ಅನುದಾನದ ವೆಚ್ಚಗಳು	**235699.00**
9೦(01) ಎಂ.ಆರ್.ಪಿ – ಡಾ. ಎಫ್.ಟಿ.ಹಳ್ಳಿಕೇರಿ	0.00
9೦(02) ಎಂ.ಆರ್.ಪಿ – ಡಾ.ಚಂದ್ರಪೂಜಾರಿ	0.00
9೦(04) ಎಂ.ಆರ್.ಪಿ – ಡಾ. ದೇವರಕೊಂಡಾರೆಡ್ಡಿ	0.00
9೦(07) ಎಂ.ಆರ್.ಪಿ – ಡಾ.ಬಿ.ಎಂ.ಪುಟ್ಟಯ್ಯ	0.00
9೦(09) ಎಂ.ಆರ್.ಪಿ – ಡಾ.ಸ.ಚಿ.ರಮೇಶ	0.00
9೦(11) ಎಂ.ಆರ್.ಪಿ – ಡಾ.ರವೀಂದ್ರನಾಥ್	0.00
9೦(13) ಎಂ.ಆರ್.ಪಿ – ಡಾ.ಎಚ್.ಎಸ್.ಶ್ರೀಮತಿ	0.00
9೦(16) ಎಂ.ಆರ್.ಪಿ – ಡಾ. ರಹಮತ್ ತರೀಕೆರೆ	0.00
ಎಂ.ಆರ್.ಪಿ – ಡಾ. ವಿಠಲರಾವ್ ಗಾಯಕ್ವಾಡ್	5908.00
ಎಂ.ಆರ್.ಪಿ – ಡಾ. ಎಂ.ಸಿ ಗಣೇಶ	122930.00
ಎಂ.ಆರ್.ಪಿ – ಡಾ. ವೆಂಕಟೇಶ ಇಂದ್ವಾಡಿ	106861.00
10 ದತ್ತಿನಿಧಿ, ವೆಚ್ಚಗಳು	**35070.00**
ದತ್ತಿನಿಧಿ – ವೆಚ್ಚಗಳು	35070.00
11 ಪೀಠಗಳ ವೆಚ್ಚಗಳು	**585839.00**
2701 ರಾಮಮನೋಹರ ಲೋಹಿಯಾ ಅಧ್ಯಯನ ಪೀಠ	28494.00
2704 ವಾಲ್ಮೀಕ ಅಧ್ಯಯನ ಪೀಠ	222911.00
2710 ಹೆಚ್.ಕೆ.ಡಿ.ಬಿ.ಅ. ಪೀಠ, ವೆಚ್ಚಗಳು	0.00
2711 ಹಾಲುಮತ ಅಧ್ಯಯನ ಪೀಠದ ವೆಚ್ಚಗಳು	193401.00
2752 ದಲಿತ ಸಂಸ್ಕೃತಿ ಅಧ್ಯಯನ ಪೀಠ, ವೆಚ್ಚಗಳು	6835.00
2753 ಶಂಭಾಜೋಶಿ ಅಧ್ಯಯನ ಪೀಠ, ವೆಚ್ಚಗಳು	27500.00

2754 ಪುರಂದರದಾಸ ಅಧ್ಯಯನ ಪೀಠ, ವೆಚ್ಚಗಳು	6698.00
2755 ಜೈನ ಸಂಸ್ಕೃತಿ ಅಧ್ಯಯನ ಪೀಠ – ವೆಚ್ಚಗಳು	40000.00
2758 ಡಾ॥ ರಾಜಕುಮಾರ ಅಧ್ಯಯನ ಪೀಠ – ವೆಚ್ಚಗಳು	25000.00
2759 ದೇವರ ದಾಸೀಮಯ್ಯ ಅಧ್ಯಯನ ಪೀಠ	35000.00
12 ಋಣ ಮತ್ತು ಠೇವಣಿಗಳು	**1483080.00**
ಕ್ಷೇಮನಿಧಿ	446741.00
ಠೇವಣಿ – ಇ.ಎಂ.ಡಿ ಮೊತ್ತ	169770.00
ಠೇವಣಿ ಮರುಪಾವತಿ	1368.00
ಮಹಿಳಾ ಕ್ಷೇಮನಿಧಿ	4000.00
ವೇತನ – ಸ್ವೀಕೃತಿ ಮೊತ್ತದಲ್ಲಿ	458701.00
1008 ವೇತನ – ಹಬ್ಬದ ಮುಂಗಡ	402500.00
ಒಟ್ಟು ಮೊತ್ತ	**192830099.00**

2011–12ನೇ ಸಾಲಿನ ನಿಜ ಆದಾಯಗಳು

1 ಏಪ್ರಿಲ್ 2011 ರಿಂದ 31 ಮಾರ್ಚ್ 2012ರ ವರೆಗೆ

ವಿವರಗಳು	ವಾಸ್ತವಿಕ ವೆಚ್ಚಗಳು
1 ಯೋಜನೇತರ ಅನುದಾನ	**90000000.00**
ವೇತನ – 1ನೇ ಕಂತಿನ ಅನುದಾನ	18750000.00
ವೇತನ – 2ನೇ ಕಂತಿನ ಅನುದಾನ	18750000.00
ವೇತನ – 3ನೇ ಕಂತಿನ ಅನುದಾನ	18750000.00
ವೇತನ – 4ನೇ ಕಂತಿನ ಅನುದಾನ	18750000.00
ವೇತನ – ಹೆಚ್ಚುವರಿ ಅನುದಾನ	15000000.00
2. ಯೋಜನೆ ಅನುದಾನ	**52000000.00**
ಅಭಿವೃದ್ಧಿ ಅನುದಾನ – 1ನೇ ಕಂತಿನ ಅನುದಾನ	13950000.00
ಅಭಿವೃದ್ಧಿ ಅನುದಾನ – 2ನೇ ಕಂತಿನ ಅನುದಾನ	0.00
ಅಭಿವೃದ್ಧಿ ಅನುದಾನ – 3ನೇ ಕಂತಿನ ಅನುದಾನ	6975000.00
ಅಭಿವೃದ್ಧಿ ಅನುದಾನ – 4ನೇ ಕಂತಿನ ಅನುದಾನ	6975000.00
ಗಿರಿಜನ ಉಪಯೋಜನೆ ಅನುದಾನ	7920000.00
ಡಿಪ್ಲೋಮಾ ಪಠ್ಯಕ್ರಮಕ್ಕಾಗಿ ಅನುದಾನ	2000000.00
ವಿಶೇಷ ಘಟಕ ಯೋಜನೆ ಅನುದಾನ	14180000.00
3. ಯುಜಿಸಿ ಅನುದಾನ	**393600.00**
9ಎ(07) ಎಂ.ಆರ್.ಪಿ–ಡಾ॥ ಬಿ.ಎಂ.ಪುಟ್ಟಯ್ಯ	196800.00
9ಎ(16) ಎಂ.ಆರ್.ಪಿ–ಡಾ॥ ರಹಮತ್ ತರೀಕೆರೆ	0.00
ಎಂ.ಆರ್.ಪಿ–ಡಾ॥ ಆರ್. ವೆಂಕಟೇಶನ್ ಇಂದ್ವಾಡಿ	196800.00
ಎಂ.ಆರ್.ಪಿ.ಮೊಗಳ್ಳಿ ಗಣೇಶ್	0.00
ಯುಜಿಸಿ– ಕಟ್ಟಡಗಳ ನಿರ್ಮಾಣ ಹಾಗೂ ಕಂಪ್ಯೂಟರ್ ಖರೀದಿಗಾಗಿ	0.00
ಯುಜಿಸಿ ಅನುದಾನ	0.00
ಯುಜಿಸಿ, ಎಮಿರೈಟ್ಸ್ ಅನುದಾನ	0.0
4. ದತ್ತಿನಿಧಿ	350000.00
ದತ್ತಿನಿಧಿ– ಮೈಕೋ ಕನ್ನಡ ಬಳಗ ಅನುದಾನ	100000.00
ದತ್ತಿನಿಧಿ– ಶ್ರೀರಂಗ ಅನುದಾನ	250000.00
5. ಇತರೆ ಅನುದಾನ	8163098.00
5610 ಫೆಲೋಶಿಪ್– ತಾಲೂಕ ಪಂಚಾಯಿತಿ ಅನುದಾನ	0.00
ಅಬ್ದುಕ್ ನಜೀರ್‌ಸಾಬ್ ರಾಜ್ಯ ಗ್ರಾಮೀಣ ಅಭಿವೃದ್ಧಿ– ಅನುದಾನ	1250000.00

ಕಣಜ ಅಂತರಜಾಲ ಕನ್ನಡ ಜ್ಞಾನಕೋಶ ಯೋಜನೆಗಾಗಿ ಕಿರುಗೌರವಧನ	90000.00
ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ– ಶಿಷ್ಯವೇತನ'	10000.00
ಗಂಗಾಮತ ಅಧ್ಯಯನಕ್ಕಾಗಿ ಅನುದಾನ	0.00
ಜಾನಪದ ಸಂಸ್ಕೃತಿ ಅಧ್ಯಯನಕ್ಕಾಗಿ ಅನುದಾನ	0.00
ಜಿಲ್ಲಾಧಿಕಾರಿಗಳ ಕಾರ್ಯಾಲಯ, ಹಾವೇರಿಯಿಂದ ಅನುದಾನ(ಸರ್ವಜ್ಞ)	850000.00
ತತ್ವಕಾರ್ಯಕ್ರಮಗಳನ್ನು ನಡೆಸಲು ಅನುದಾನ	0.00
ತಾಲೂಕು ಸಮಾಜ ಕಲ್ಯಾಣ ಇಲಾಖೆ– ಶಿಷ್ಯವೇತನ	1294380.00
ನಗರಸಭೆ ಗಂಗಾವತಿಯಿಂದ ವಿದ್ಯಾರ್ಥಿವೇತನ(ದೂರಶಿಕ್ಷಣ)	50000.00
ಪಟ್ಟಣ ಪಂಚಾಯಿತಿ ಕಾರ್ಯಾಲಯ, ಕಮಲಾಪುರ ಅನುದಾನ	14750.00
ಪುರಸಭೆ ಕಾರ್ಯಾಲಯ, ಕಂಪ್ಲಿ– ಅನುದಾನ	33000.00
ಪುರಸಭೆ ಕಾರ್ಯಾಲಯ, ಹುಮನಾಬಾದ್– ಅನುದಾನ	0.00
ಫೆಲೋಶಿಪ್ ಪ.ಜಾ/ಪ.ಪಂ.ವಿದ್ಯಾರ್ಥಿಗಳ ಶಿಷ್ಯವೇತನದ ಅನುದಾನ	0.00
ಫೆಲೋಶಿಪ್, ರಾಜೀವ್‌ಗಾಂಧಿ ಶಿಷ್ಯವೇತನ	2805000.00
ಮಹಿಳಾ ಅಧ್ಯಯನ ಕೇಂದ್ರಕ್ಕೆ ಅನುದಾನ	499920.00
ಮಾನವಹಕ್ಕುಗಳ ಅರಿವು ಕುರಿತ ಕಾರ್ಯಾಗಾರಕ್ಕಾಗಿ ಅನುದಾನ	0.00
ಯುಜಿಸಿ ಸ್ಯಾಪ್ ಅನುದಾನ	731048.00
ವಿದ್ಯಾರ್ಥಿಗಳಿಗೆ ಚರ್ಚಾ ಸ್ಪರ್ಧೆ ಏರ್ಪಡಿಸಲು ಅನುದಾನ	15000.00
ವ್ಯಕ್ತಿತ್ವ ವಿಕಸನ ತರಬೇತಿ ಶಿಬಿರಕ್ಕಾಗಿ	20000.00
ಹಸ್ತಪ್ರತಿ– ಎನ್.ಎನ್.ಎಂ. ಯೋಜನೆಗಾಗಿ ಅನುದಾನ	500000.00
ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳ ಶುಲ್ಕ ಪಾವತಿಗಾಗಿ ಅನುದಾನ	0.00
6. ದೂರಶಿಕ್ಷಣ ವಿಭಾಗ	12972721.00
6–01 ದೂರಶಿಕ್ಷಣ ಕೇಂದ್ರ ಶುಲ್ಕ– ನಗದು/ಡಿ.ಡಿ/ಚೆಕ್	10472721.00
ದೂರಶಿಕ್ಷಣ– ಡಿಪ್ಲೋಮಾ ಪಠ್ಯಕ್ರಮ ಅನುದಾನ	0.00
ದೂರಶಿಕ್ಷಣ ಪರಿಷತ್, ನವದೆಹಲಿಯಿಂದ ಅನುದಾನ	0.00
ದೂರಶಿಕ್ಷಣ– ಇಗ್ನೋ ಅನುದಾನ	2500000.00
7. ಪ್ರಸಾರಾಂಗ	3247817.00
7–01 ಪ್ರಸಾರಾಂಗ, ಪುಸ್ತಕ ಮತ್ತು ನಿಯತಕಾಲಿಕೆಗಳ ಮಾರಾಟ	2767989.00
7–02 ಪುಸ್ತಕ ಮತ್ತು ನಿಯತಕಾಲಿಕೆಗಳ ಮಾರಾಟ ಬೆಂಗಳೂರು	479828.00
8. ವಿದ್ಯಾರ್ಥಿಗಳ ಹಾಗೂ ಇತರೆ ಶುಲ್ಕದಿಂದ ಬಂದ ಆದಾಯ	10908402.50
01 ಅರ್ಜಿ ಶುಲ್ಕ	413297.00
02 ಪ್ರವೇಶ ಶುಲ್ಕ	88175.00
03 ನೋಂದಣಿ ಶುಲ್ಕ	1532350.00
04 ಬೋಧನಾ ಶುಲ್ಕ	186440.00
05 ಅಧ್ಯಯನ/ವಾರ್ಷಿಕ/ಅರ್ಧವಾರ್ಷಿಕ ಶುಲ್ಕ	1086225.00
06 ಕಮ್ಮಟ/ ಕಾರ್ಯಾಗಾರ ಶುಲ್ಕ	16250.00
07 ಅವಧಿ ವಿಸ್ತರಣಾ ಶುಲ್ಕ	105720.00

08 ಮೌಲ್ಯಮಾಪನ ವರದಿ/ ಮರುಮೌಲ್ಯಮಾಪನ ಶುಲ್ಕ	27900.00
09 ಪ್ರಬಂಧ ಪ್ರಕಟಣೆ ಶುಲ್ಕ	33000.00
10 ಗ್ರಂಥಾಲಯ ಶುಲ್ಕ	248.00
13 ವಿಳಂಬಿತ ದಂಡ ಶುಲ್ಕ	7577.00
14 ವರ್ಗಾವಣೆ ಪ್ರಮಾಣ ಪತ್ರ ಶುಲ್ಕ	3700.00
15 ಕ್ರೋಢಿಕೃತ ಅಂಕಪಟ್ಟಿ ಶುಲ್ಕ	186485.00
16 ಅಂಕಪಟ್ಟಿ ಶುಲ್ಕ	113175.00
17 ಪ್ರಮಾಣ ಪತ್ರ ಶುಲ್ಕ	423675.00
18 ಮರುಪರೀಕ್ಷೆ ಶುಲ್ಕ	825.00
20 ಪರೀಕ್ಷೆ/ ಪ್ರಬಂಧ ಶುಲ್ಕ	1872350.00
22 ಘಟಿಕೋತ್ಸವ ಪ್ರಮಾಣಪತ್ರ(ಕನ್ನಡ ಮತ್ತು ಇಂಗ್ಲಿಷ್)	79175.00
23 ಭದ್ರತಾ ಠೇವಣಿ ಶುಲ್ಕ	27674.00
24 ವಸತಿ ನಿಲಯ ಬಾಡಿಗೆ/ ವಿದ್ಯುತ್ ಶುಲ್ಕ	41244.00
25 ವಸತಿ ಗೃಹ ಬಾಡಿಗೆ/ ವಿದ್ಯುತ್ ಶುಲ್ಕ	25829.00
26 ಅತಿಥಿ ಗೃಹ ಬಾಡಿಗೆ ಶುಲ್ಕ	134539.00
27 ಗುತ್ತಿಗೆದಾರರ ನೊಂದಣಿ/ ನವೀಕರಣ ಶುಲ್ಕ	126000.00
28 ಟೆಂಡರ್ ಅರ್ಜಿ ಶುಲ್ಕ	591680.00
29 ಇ.ಎಂ.ಡಿ/ಎಫ್.ಎಸ್.ಡಿ ಮೊತ್ತ	214794.00
31 ಕೆಲಸದ ಪ್ರಮಾಣ ಪತ್ರ ಶುಲ್ಕ	200.00
32 ಕ್ಷೇಮನಿಧಿ ಸಾಲದ ಮರುಪಾವತಿ	51874.00
33 ಹಬ್ಬದ ಮುಂಗಡ ಮರುಪಾವತಿ	6300.00
34 ವೇತನ ಸ್ವೀಕೃತಿ	562741.00
35 ಉಪಹಾರ ಮಂದಿರ/ ಯುಟಿಲಿಟಿ ಕಟ್ಟಡದ ಬಾಡಿಗೆ	21600.00
36 ಮಾನ್ಯತೆ ನವೀಕರಣ ಶುಲ್ಕ	560325.00
37 ಕರಕುಶಲ ಮಾರಾಟ	228115.00
38 ಬಾದಾಮಿ ಕೇಂದ್ರದ ಖಾತೆಯಲ್ಲಿ ಜಮೆಯಾದ ಶುಲ್ಕಗಳು	60350.00
ಇತರೆ ಸ್ವೀಕೃತಿಗಳು	230331.00
ಮುಂಗಡದಲ್ಲಿ ಉಳಿದ ಮೊತ್ತ	1848209.00
ಒಟ್ಟು ಮೊತ್ತ	**178035638.50**
ಎಲ್ಲಾ ಬ್ಯಾಂಕ್ ಖಾತೆ ಬಡ್ಡಿ	1630541.00
ದತ್ತಿನಿಧಿ ಬ್ಯಾಂಕ್ ಖಾತೆ ಬಡ್ಡಿ	16388.00
ಪೀಠಗಳ ಬ್ಯಾಂಕ್ ಖಾತೆ ಬಡ್ಡಿ	134944.00
ಸಾವಧಿ ಠೇವಣಿ ಬಡ್ಡಿ	2549975.00
ಒಟ್ಟು ಜಮೆಗಳು	182367486.00
ಪ್ರಾರಂಭಿಕ ಶಿಲ್ಕು 1.4.2011	123204249.00
ಅಂತೂ ಒಟ್ಟು	**305571735.50**

ವಾರ್ಷಿಕ ವರದಿ

೨೦೧೧–೨೦೧೨

೧–೪–೨೦೧೧ ರಿಂದ ೩೧–೩–೨೦೧೨ರ ವರೆಗೆ

ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೫೫೩೨

ಕನ್ನಡ ವಿಶ್ವವಿದ್ಯಾಲಯ ವಾರ್ಷಿಕ ವರದಿ ೨೦೧೧-೧೨
ಪುಟಗಳು : 10+೪೧೨
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

ಸಿದ್ಧತೆ
ಡಾ. ಡಿ. ಮೀನಾಕ್ಷಿ
ಸಹಾಯಕ ನಿರ್ದೇಶಕರು, ಮಾಹಿತಿ ಕೇಂದ್ರ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

ನೆರವು
ಸದಸ್ಯರು, ಮಾಹಿತಿಕೇಂದ್ರ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

ಪ್ರಕಾಶಕರು
ಕುಲಸಚಿವರು
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

ಅಕ್ಷರ ಸಂಯೋಜನೆ
ನಯನ ಗ್ರಾಫಿಕ್ಸ್, ಕಮಲಾಪುರ

ಮುದ್ರಣ
ಚಾಮುಂಡಿ ಗ್ರಾಫಿಕ್ಸ್, ಬೆಂಗಳೂರು

Annual Report 2011 - 12

Pages : X+412

Kannada University, Hampi
Vidyaranya 583 276

Prepared by
Dr. D. Meenakshi
Assistant Director, Information Center
Kannada University, Hampi
Vidyaranya 583 276

Assisted by
Members, Information Center
Kannada University, Hampi
Vidyaranya 583 276

Published by
Registrar
Kannada University, Hampi
Vidyaranya 583 276

D.T.P
Nayana Graphics, Kamalapur

Printed by
Chamundi Graphics, Bangalore

ವಾರ್ಷಿಕ ವರದಿ
೨೦೧೧–೨೦೧೨

೨೦–೩–೨೦೧೩ರಂದು ನಡೆದ ವಿಶ್ವವಿದ್ಯಾಲಯದ ಕಾರ್ಯಕಾರಿ ಸಮಿತಿಯ ೧೫೨ನೇ ಸಭೆಯಲ್ಲಿ ೨೦೧೧–೨೦೧೨ನೇ ಸಾಲಿನ ವಾರ್ಷಿಕ ವರದಿಯನ್ನು ಸಮಗ್ರವಾಗಿ ಪರಿಶೀಲಿಸಿ ಕಾರ್ಯಕಾರಿ ಸಮಿತಿಯು ಅನುಮೋದನೆಯನ್ನು ನೀಡಿರುತ್ತದೆ.

೧೭–೨–೨೦೧೩ರಂದು ನಡೆದ ೩೯ನೇ ಆಡಳಿತ ಮಂಡಳಿ ಸಭೆಯಲ್ಲಿ ಸದರಿ ವಾರ್ಷಿಕ ವರದಿಗೆ ಅನುಮೋದನೆ ದೊರೆತಿರುತ್ತದೆ. ಕರ್ನಾಟಕ ಸರ್ಕಾರದ ಉನ್ನತ ಶಿಕ್ಷಣ ಇಲಾಖೆಗೆ ಈ ವಾರ್ಷಿಕ ವರದಿಯನ್ನು ಸಲ್ಲಿಸಲು ಒಪ್ಪಿಗೆ ನೀಡಿದೆ.

ಕುಲಸಚಿವರು

ಪರಿವಿಡಿ

೧. ಕನ್ನಡ ವಿಶ್ವವಿದ್ಯಾಲಯ ಸ್ಥಾಪನೆ / ೧

೨. ಕನ್ನಡ ವಿಶ್ವವಿದ್ಯಾಲಯದ ಉದ್ದೇಶಗಳು / ೨

೩. ವಿಶ್ವವಿದ್ಯಾಲಯದ ವರಿಷ್ಠರು / ೪

೪. ವಿಶ್ವವಿದ್ಯಾಲಯದ ಕಾರ್ಯಕಾರಿ ಸಮಿತಿ ಸದಸ್ಯರು / ೬

೫. ಆಡಳಿತ ಮಂಡಳಿ ಸದಸ್ಯರು / ೮

೬. ಇತರ ಶಾಸನಬದ್ಧ ಸಮಿತಿಗಳು / ೯

೭. ಸಿಬ್ಬಂದಿಗಳ ವಿವರ / ೧೭

೮. **ಭಾಷಾ ನಿಕಾಯ** / ೨೬

ಕನ್ನಡ ಭಾಷಾಧ್ಯಯನ ವಿಭಾಗ / ೨೬

ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ / ೩೮

ಭಾಷಾಂತರ ಅಧ್ಯಯನ ವಿಭಾಗ / ೫೪

ದ್ರಾವಿಡ ಸಂಸ್ಕೃತಿ ಅಧ್ಯಯನ ವಿಭಾಗ / ೭೦

ಹಸ್ತಪ್ರತಿಶಾಸ್ತ್ರ ವಿಭಾಗ / ೮೧

ಮಹಿಳಾ ಅಧ್ಯಯನ ವಿಭಾಗ / ೧೦೭

೯. **ಸಮಾಜ ವಿಜ್ಞಾನಗಳ ನಿಕಾಯ** / ೧೧೫

ಅಭಿವೃದ್ಧಿ ಅಧ್ಯಯನ ವಿಭಾಗ / ೧೧೫

ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ / ೧೩೮

ಚರಿತ್ರೆ ವಿಭಾಗ / ೧೫೮

ಜಾನಪದ ಅಧ್ಯಯನ ವಿಭಾಗ / ೧೮೫

ಶಾಸನಶಾಸ್ತ್ರ ವಿಭಾಗ / ೨೦೮

ಬುಡಕಟ್ಟು ಅಧ್ಯಯನ ವಿಭಾಗ / ೨೧೬

ಮಾನವಶಾಸ್ತ್ರ ಅಧ್ಯಯನ ವಿಭಾಗ / ೨೪೫

೧೦. **ಲಲಿತಕಲಾ ನಿಕಾಯ** / ೨೫೪

ವಾಸ್ತುಶಿಲ್ಪ, ಶಿಲ್ಪಶಾಸ್ತ್ರ ಮತ್ತು ಪ್ರತಿಮಾಶಾಸ್ತ್ರ ವಿಭಾಗ, ಬಾದಾಮಿ / ೨೫೪

ದೃಶ್ಯಕಲಾ ವಿಭಾಗ / ೨೬೪

ಸಂಗೀತ ಮತ್ತು ನೃತ್ಯ ವಿಭಾಗ / ೨೭೨

೧೧. **ಸಂಶೋಧನ ಪೀಠಗಳು** / ೨೭೪

೧. ಅಭೇರಾಜ್ ಎಚ್. ಬಲ್ಲೋಟ ಜೈನ ಸಂಸ್ಕೃತಿ ಅಧ್ಯಯನ ಪೀಠ / ೨೭೪

೨. ಪುರಂದರದಾಸ ಅಧ್ಯಯನ ಪೀಠ / ೨೭೫

೩. ಡಾ. ಶಂಬಾ ಜೋಶಿ ಅಧ್ಯಯನ ಪೀಠ / ೨೭೫

೪. ದಲಿತ ಸಂಸ್ಕೃತಿ ಅಧ್ಯಯನ ಪೀಠ / ೨೭೬

೫. ವಾಲ್ಮೀಕಿ ಅಧ್ಯಯನ ಪೀಠ / ೨೭೭

೬. ಹೈದ್ರಾಬಾದ್ ಕರ್ನಾಟಕ ಅಭಿವೃದ್ಧಿ ಅಧ್ಯಯನ ಪೀಠ / ೨೭೮

೭. ನಾಡೋಜ ಡಾ.ರಾಜಕುಮಾರ್ ಅಧ್ಯಯನ ಪೀಠ / ೨೭೮

೮. ರಾಮಮನೋಹರ ಲೋಹಿಯಾ ಅಧ್ಯಯನ ಪೀಠ / ೨೭೯

೯. ಹಾಲುಮತ ಅಧ್ಯಯನ ಪೀಠ / ೨೮೦

೧೦. ದೇವರ ದಾಸಿಮಯ್ಯ ಅಧ್ಯಯನ ಪೀಠ / ೨೮೦

೧೨. **ದತ್ತಿ ನಿಧಿಗಳು** / ೨೮೧

೧. ಹಿರೇಹಾಳ್ ಇಬ್ರಾಹಿಂ ದತ್ತಿನಿಧಿ / ೨೮೧

೨. ಬಸವೇಶ್ವರ ವಿದ್ಯಾವರ್ಧಕ ಸಂಘ ದತ್ತಿನಿಧಿ / ೨೮೧

೩. ಶ್ರೀಮತಿ ಅಲ್ಲಂ ಸುಮಂಗಲಮ್ಮ ಮತ್ತು ಶ್ರೀ ಅಲ್ಲಂ ಕರಿಬಸಪ್ಪ ದತ್ತಿನಿಧಿ / ೨೮೨

೪. ಶ್ರೀ ಸಿ.ಟಿ.ಎಂ. ಕೊಟ್ರಯ್ಯ ದತ್ತಿನಿಧಿ / ೨೮೨

೫. ಕೆ.ವಿ. ತಿರುಪಾಲಪ್ಪ ದತ್ತಿನಿಧಿ / ೨೮೨

೬. ಕೆ.ಎಲ್.ಇ ಸಂಸ್ಥೆ ದತ್ತಿನಿಧಿ / ೨೮೩

೭. ವೈ. ನಾಗೇಶ ಶಾಸ್ತ್ರಿ ದತ್ತಿನಿಧಿ / ೨೮೩

೮. ಶ್ರೀಮತಿ ಖರೀದಿ ಪಾಲಮ್ಮ ದತ್ತಿನಿಧಿ / ೨೮೪

೯. ವೈ.ಕೆ. ರಾಮಯ್ಯ ದತ್ತಿನಿಧಿ / ೨೮೪

೧೦. ಶ್ರೀ ಡಿ.ಎಲ್. ನರಸಿಂಹಾಚಾರ್ಯ ದತ್ತಿನಿಧಿ / ೨೮೪

೧೧. ಫ.ಗು.ಹಳಕಟ್ಟಿ ಪ್ರತಿಷ್ಠಾನ ದತ್ತಿನಿಧಿ / ೨೮೫

೧೨. ಶ್ರೀರಂಗ ದತ್ತಿನಿಧಿ / ೨೮೫

೧೩. ದಿ॥ ಕೆ.ಎಸ್. ವೀರಭದ್ರಪ್ಪ ದತ್ತಿನಿಧಿ / ೨೮೬

೧೪. ಶ್ರೀ ಶಂಕರನಾರಾಯಣ ಅಮ್ಮೆಂಬಳ ದತ್ತಿನಿಧಿ / ೨೮೬

೧೩. ಅಧ್ಯಯನಾಂಗ / ೨೮೭

೧೪. ಪ್ರಸಾರಾಂಗ / ೩೧೪

೧೫. ದೂರಶಿಕ್ಷಣ ನಿರ್ದೇಶನಾಲಯ / ೩೨೪

೧೬. ವಸ್ತು ಸಂಗ್ರಹಾಲಯ / ೩೩೩

೧೭. ಅಕ್ಷರ ಗ್ರಂಥಾಲಯ / ೩೩೬

೧೮. ಸಿರಿಗನ್ನಡ ಪರಾಮರ್ಶನ ಗ್ರಂಥಾಲಯ / ೩೪೦

೧೯. ಅಂತರಾಷ್ಟ್ರೀಯ ವಚನ ಅಧ್ಯಯನ ಕೇಂದ್ರ, ಕೂಡಲಸಂಗಮ / ೩೪೧

೨೦. ಕುವೆಂಪು ಅಧ್ಯಯನ ಕೇಂದ್ರ, ಕುಪ್ಪಳಿ / ೩೪೨

೨೧. ದೇಸಿ ಸಂಸ್ಕೃತಿ ಅಧ್ಯಯನ ಕೇಂದ್ರ, ಕುರುಬನಕಟ್ಟೆ / ೩೪೯

೨೨. ರಾಷ್ಟ್ರೀಯ ಹಸ್ತಪ್ರತಿ ಸಂಪನ್ಮೂಲ ಕೇಂದ್ರ / ೩೫೫

೨೩. ಮಹಿಳಾ ಅಧ್ಯಯನ ಕೇಂದ್ರ / ೩೫೭

೨೪. ಮಾಹಿತಿ ಕೇಂದ್ರ / ೩೬೦

೨೫. ತಾಂತ್ರಿಕ ವಿಭಾಗ / ೩೬೨

೨೬. ಹಿಂದುಳಿದ ವರ್ಗಗಳ ವಿಶೇಷ ಘಟಕ / ೩೬೫

೨೭. ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳ ವಿಶೇಷ ಘಟಕ / ೩೬೯

೨೮. ನುಡಿಹಬ್ಬ–೨೦(ಘಟಿಕೋತ್ಸವ) / ೩೭೩

೨೯. ಕನ್ನಡ ಸಂಸ್ಕೃತಿ ಬಹುತ್ವದ ನೆಲೆಗಳು / ೩೮೫

೩೦. ಯೋಜನೆ ಅನುದಾನ ಆದಾಯ ವೆಚ್ಚ / ೩೯೮

ಕನ್ನಡದ ಮಾತು 'ಅಕ್ಷರ'ವಾಗಿ ದಾಖಲಾಗಿರುವ ಅತ್ಯಂತ ಪ್ರಾಚೀನ ಶಿಲಾಶಾಸನ ಹಲ್ಮಿಡಿ ಶಾಸನ. ಅದರ ಕಾಲ ಸುಮಾರು ಕ್ರಿ.ಶ. ೪೫೦. ಕನ್ನಡದ ಉಷಃಕಾಲ, ಕನ್ನಡ ನುಡಿ, ಶಾಸನ ಸಾಹಿತ್ಯ, ಕನ್ನಡ ರಾಜರ ಐತಿಹಾಸಿಕ ದಾಖಲೆ ಹಾಗೂ ಸಾಂಸ್ಕೃತಿಕ ಪರಂಪರೆಯ ಕುರುಹೂ ಅದಾಗಿದೆ. ಹಲ್ಮಿಡಿ ಶಾಸನದ ಶಿರೋಭಾಗದಲ್ಲಿ ಕೆತ್ತಿರುವ ಚಿಹ್ನೆಯೂ ಅರ್ಥಪೂರ್ಣವಾಗಿದೆ. ಆ ಚಿಹ್ನೆಯನ್ನು ಅಳವಡಿಸಿಕೊಂಡ ಲಾಂಛನ ವಿನ್ಯಾಸ ಕನ್ನಡ ವಿಶ್ವವಿದ್ಯಾಲಯಕ್ಕೆ ಔಚಿತ್ಯಪೂರ್ಣವಾಗಿದೆ.

'ಮಾತೆಂಬುದು ಜ್ಯೋತಿರ್ಲಿಂಗ' ಧ್ಯೇಯಸೂಕ್ತಿ ಉದ್ಧೃತವಾಗಿದೆ. ಭಾರತೀಯ ಸಾಂಸ್ಕೃತಿಕ ಪರಂಪರೆಯಲ್ಲಿ ಲಿಂಗದ ಕಲ್ಪನೆ ಅದ್ಭುತವಾದದ್ದು; ಐದುಸಾವಿರ ವರ್ಷಗಳಷ್ಟು ಪ್ರಾಚೀನವಾದದ್ದು. ಹರಪ್ಪಾ ಸಂಸ್ಕೃತಿಯಲ್ಲಿಯೇ ಕಾಣಬರುವ ಪ್ರತಿಮಾ ಕಲ್ಪನೆ ಅದು; ಸೃಷ್ಟಿಯ, ಬ್ರಹ್ಮಾಂಡದ, ಸೃಷ್ಟಿ ಶಕ್ತಿಯ ಪ್ರತೀಕ. ಜ್ಯೋತಿರ್ಲಿಂಗ ಆಧ್ಯಾತ್ಮಿಕ ಸಂಕೇತವಾಗಿರುವಂತೆ ಜ್ಞಾನದ, ಪ್ರಜ್ಞೆಯ, ಸೃಜನಶೀಲ ಪ್ರತಿಭೆಯ ಸಂಕೇತವೂ ಹೌದು. ಮಾತು ಅದರ ವ್ಯಕ್ತರೂಪ. ಸಕಲ ಜೀವರಾಶಿಯಿಂದ ಮನುಷ್ಯನನ್ನು ವಿಶಿಷ್ಟವಾಗಿಸುವುದು ಮಾತು. ಮಾತು ಅರಿವಿನ ವ್ಯಕ್ತರೂಪ. ಅಲ್ಲಮ ಪ್ರಭುವಿನ 'ಮಾತೆಂಬುದು ಜ್ಯೋತಿರ್ಲಿಂಗ, ಸ್ವರವೆಂಬುದು ಪರತತ್ತ್ವ' ವಚನದಿಂದ ಕನ್ನಡ ವಿಶ್ವವಿದ್ಯಾಲಯದ ಧ್ಯೇಯ ಸೂಕ್ತಿಯನ್ನು ಆರಿಸಲಾಗಿದೆ. ಮತೀಯ ಸಂಕುಚಿತತೆಯನ್ನು ಮೀರಿದ ವಿಶ್ವವ್ಯಾಪ್ತಿ, ವಿಶ್ವಜ್ಞಾನ, ವ್ಯಾಪಿ ಉಕ್ತಿ ಅದು. ಮಾತು ಅರಿವು ಬೇರೆಯಲ್ಲ. ವಿಶ್ವವಿದ್ಯಾಲಯ ಜ್ಞಾನದೇಗುಲ; ಜ್ಞಾನದ ಸಮಸ್ತ ಶಾಖೆಗಳ ನೆಲೆ. ಧ್ಯೇಯಸೂಕ್ತಿ ಸಂಶೋಧನೆಯನ್ನೇ, ಜ್ಞಾನಾನ್ವೇಷಣೆಯನ್ನೇ ಉದ್ದೇಶವಾಗುಳ್ಳ ಕನ್ನಡ ವಿಶ್ವವಿದ್ಯಾಲಯಕ್ಕೆ ಈ ಸೂಕ್ತವಾಗಿದೆ.

ಇತರ ವಿಶ್ವವಿದ್ಯಾಲಯಗಳಂತೆ ಹಲವು ಜಿಲ್ಲೆಗಳ ಕ್ಷೇತ್ರಕ್ಕೆ ಕನ್ನಡ ವಿಶ್ವವಿದ್ಯಾಲಯ ಸೀಮಿತವಾಗಿಲ್ಲ. ಕರ್ನಾಟಕದ ಭೂಪರಿಧಿಯನ್ನು ದಾಟಿದ ಕನ್ನಡ ಸಂಸ್ಕೃತಿಯ ವಿಶಾಲ ವ್ಯಾಪ್ತಿ ಅದಕ್ಕಿದೆ. ಧ್ಯೇಯ ಸೂಕ್ತಿಯನ್ನೊಳಗೊಂಡಂತೆ ಚಿತ್ರ ವಿನ್ಯಾಸದ ಧ್ವನ್ಯಾಂತರಗಳನ್ನು ಗರ್ಭೀಕರಿಸಿಕೊಂಡ ಅರಿವಿನ ನೆಲೆಯ ಲಾಂಛನ ಕನ್ನಡ ವಿಶ್ವವಿದ್ಯಾಲಯದ್ದಾಗಿದೆ.

೨೦ನೇ ನುಡಿಹಬ್ಬದಲ್ಲಿ ಕುಲಾಧಿಪತಿಗಳೂ ಕರ್ನಾಟಕ ಸರ್ಕಾರದ ಘನತೆವೆತ್ತ ರಾಜ್ಯಪಾಲರೂ ಆಗಿರುವ ಸನ್ಮಾನ್ಯ ಶ್ರೀ ಹನ್ಸ್‌ರಾಜ್ ಭಾರದ್ವಾಜ್ ಅವರ ಅನುಪಸ್ಥಿತಿಯಲ್ಲಿ ಮಾನ್ಯಕುಲಪತಿ ಡಾ.ಎ.ಮುರಿಗೆಪ್ಪ ಅವರಿಂದ ನಾಡೋಜ ಗೌರವ ಪದವಿಯನ್ನು ಸ್ವೀಕರಿಸಿದ ಶ್ರೀಮತಿ ಎಲ್ಲವ್ವ ದುರಗಪ್ಪ ರೊಡ್ಡಪ್ಪನವರ ಅವರು, ಜೊತೆಯಲ್ಲಿ ಕುಲಸಚಿವರಾದ ಡಾ. ಮಂಜುನಾಥ ಬೇವಿನಕಟ್ಟಿ ಅವರು, ನ್ಯಾಯಮೂರ್ತಿ ಡಾ.ಮ. ರಾಮಾಜೋಯಿಸ್ ಅವರು ಹಾಗೂ ಸಿಂಡಿಕೇಟ್ ಸದಸ್ಯರು

೨೦ನೇ ನುಡಿಹಬ್ಬದಲ್ಲಿ ಕನ್ನಡ ವಿಶ್ವವಿದ್ಯಾಲಯ ಭುವನ ವಿಜಯ ಸಭಾಂಗಣದಲ್ಲಿ ಏರ್ಪಡಿಸಿದ್ದ **ಗಡಿನಾಡ ಕನ್ನಡಿಗರ ಸ್ಥಿತಿಗತಿಗಳು** ಕುರಿತ ವಿಚಾರ ಸಂಕಿರಣವನ್ನು ಉದ್ಘಾಟಿಸುತ್ತಿರುವ ಗಡಿಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಸನ್ಮಾನ್ಯ ಶ್ರೀ ಚಂದ್ರಕಾಂತ ಬೆಲ್ಲದ ಅವರು, ನಾಡೋಜ ಪ್ರೊ.ಬರಗೂರು ರಾಮಚಂದ್ರಪ್ಪ ಅವರು, ಮಾನ್ಯಕುಲಪತಿ ಡಾ.ಎ. ಮುರಿಗೆಪ್ಪ ಅವರು, ಕುಲಸಚಿವರಾದ ಡಾ. ಮಂಜುನಾಥ ಬೇವಿನಕಟ್ಟಿ ಅವರು

೨೦ನೇ ನುಡಿಹಬ್ಬದಲ್ಲಿ ಕುಲಾಧಿಪತಿಗಳೂ ಕರ್ನಾಟಕ ಸರ್ಕಾರದ ಘನತೆವೆತ್ತ ರಾಜ್ಯಪಾಲರೂ ಆಗಿರುವ ಸನ್ಮಾನ್ಯ ಶ್ರೀ ಹನ್ಸ್‌ರಾಜ್ ಭಾರದ್ವಾಜ್ ಅವರ ಅನುಪಸ್ಥಿತಿಯಲ್ಲಿ ಮಾನ್ಯಕುಲಪತಿ ಡಾ.ಎ.ಮುರಿಗೆಪ್ಪ ಅವರಿಂದ ನಾಡೋಜ ಗೌರವ ಪದವಿಯನ್ನು ಸ್ವೀಕರಿಸಿದ ಕಾದಂಬರಿಕಾರ ಡಾ.ಎಸ್.ಎಲ್.ಭೈರಪ್ಪ ಅವರು, ಜೊತೆಯಲ್ಲಿ ಕುಲಸಚಿವರಾದ ಡಾ. ಮಂಜುನಾಥ ಬೇವಿನಕಟ್ಟಿ ಅವರು, ಅಧ್ಯಯನಾಂಗದ ನಿರ್ದೇಶಕರು, ಹಣಕಾಸು ಅಧಿಕಾರಿಗಳು

೨೦ನೇ ನುಡಿಹಬ್ಬದಲ್ಲಿ ಕನ್ನಡ ವಿಶ್ವವಿದ್ಯಾಲಯ ಭುವನ ವಿಜಯ ಸಭಾಂಗಣದಲ್ಲಿ ಏರ್ಪಡಿಸಿದ್ದ **೧೦೧ ಪುಸ್ತಕಗಳ ಬಿಡುಗಡೆ** ಸಮಾರಂಭವನ್ನು ಉದ್ಘಾಟಿಸಿ ಮಾತನಾಡುತ್ತಿರುವ ನಾಡೋಜ ಹಂಪ ನಾಗರಾಜಯ್ಯ ಅವರು, ವೇದಿಕೆಯಲ್ಲಿ ಮಾನ್ಯಕುಲಪತಿ ಡಾ.ಎ. ಮುರಿಗೆಪ್ಪ ಅವರು, ಕುಲಸಚಿವರಾದ ಡಾ. ಮಂಜುನಾಥ ಬೇವಿನಕಟ್ಟಿ ಅವರು ಪ್ರಸಾರಾಂಗದ ನಿರ್ದೇಶಕರು